ಸಂಪುಟ: 22, ಸಂಚಿಕೆ: 65, ಪುಟಗಳು: 8, ಭಾನುವಾರ, 15 ಡಿಸೆಂಬರ್ 2024 RNI NO. KARKAN/2002/08054
epaper: www.sanjemugilu.com

ಸುದ್ದಿಗಳ ಹೊನಲು

# ಸಂಜೆ ಮುಗಿಲು

ಕನ್ನಡ ಪ್ರಾದೇಶಿಕ ಸಂಜೆ ದಿನಪತ್ರಿಕೆ

ಬೆಂಗಳೂರು। ಬೆಂಗಳೂರು ಗ್ರಾಮಾಂತರ। ಕೋಲಾರ। ಚಿಕ್ಕಬಳ್ಳಾಪುರ। ರಾಮನಗರ। ಮಂಡ್ಯ। ಮೈಸೂರು। ಚಾಮರಾಜನಗರ

₹3



ವೇಣು ಸಾರಥ್ಯದಲ್ಲಿ...




ದಶಪ್ರಮತಿ ಮುದ್ರಣಾಲಯ
dashapramathi mudranalaya
PRE-PRESS PRINTERS
Contact: +91 9483589085 | e-mail: dashapramathimudranalaya@gmail.com
We Undertake Printing of
Newspapers | Tabloids | Magazines




### ಸುಭಾಷಿತ

ಸತ್ಯ ಸಾಯುವುದಿಲ್ಲ. ಸಮಯಕ್ಕೆ ಅದು ಸೋತಿದ್ದರು ಒಂದಲ್ಲ ಒಂದು ದಿನ ಸುಳ್ಳನ್ನೇ ಸಾಯಿಸಿ ಗೆದ್ದು ಬೀಗುತ್ತದೆ.

### ಪಂಚಾಂಗ

(ಭಾನುವಾರ 15, ಡಿಸೆಂಬರ್-2024)

- ಸಂವತ್ಸರ: ಕ್ರೋಧಿನಾಮ
- ಋತು: ಹೇಮಂತ, ಅಯನ: ದಕ್ಷಿಣಾಯನ
- ಮಾಸ: ಮಾರ್ಗಶಿರ, ಪಕ್ಷ: ಶುಕ್ಲ
- ತಿಥಿ: ಪೌರ್ಣಮಿ, ನಕ್ಷತ್ರ: ಮೃಗಶಿರಾ
- ರಾಹುಕಾಲ: 04:30 - 05:55
- ಗುಳಿಕಕಾಲ: 03:05 - 04:30
- ಯಮಗಂಡಕಾಲ: 12:14 - 01:40

## ಟೆಕ್ಕಿ ಅತುಲ್ ಆತ್ಮಹತ್ಯೆ ಕೇಸ್
# ಅತ್ತೆ, ಪತ್ನಿ ಅರೆಸ್ಟ್



ಲಕ್ನೋ: ದೇಶಾದ್ಯಂತ ಸಂಚಲನ ಮೂಡಿಸಿದ್ದ ಟೆಕ್ಕಿ ಅತುಲ್ ಸುಭಾಷ್ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ತಲೆಮರೆಸಿಕೊಂಡಿದ್ದ ಪತ್ನಿ ನಿಖಿತಾ ಸಿಂಘಾನಿಯಾಳನ್ನು ಪೊಲೀಸರು ಕೊನೆಗೂ ಬಂಧಿಸಿದ್ದಾರೆ.

ಉತ್ತರ ಪ್ರದೇಶದಲ್ಲಿ ಅತುಲ್ ಅತ್ತೆ ನಿಶಾ ಸಿಂಘಾನಿಯಾ ಮತ್ತು ಬಾಮೈದ ಅನುರಾಗ್ ಸಿಂಘಾನಿಯಾ ಅರೆಸ್ಟ್ ಆಗಿದ್ದರು. ಈಗ ಹರಿಯಾಣದ ಗುರುಗ್ರಾಮದಲ್ಲಿ ಅತುಲ್ ಪತ್ನಿ ನಿಖಿತಾ ಪೊಲೀಸರಿಗೆ ಲಾಕ್ ಆಗಿದ್ದಾಳೆ.

ಮೂವರನ್ನೂ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗಿದ್ದು, ಎಲ್ಲರಿಗೂ 14 ದಿನಗಳ ನ್ಯಾಯಾಂಗ ಬಂಧನ ವಿಧಿಸಲಾಗಿದೆ.

ಪತಿ ಆತ್ಮಹತ್ಯೆ ಬಳಿಕ ನಿಖಿತಾ ಪರಾರಿಯಾಗಿದ್ದರು. ಹುಡುಕಾಟ ಆರಂಭಿಸಿದ್ದ ಮಾರತ್ತಹಳ್ಳಿ ಪೊಲೀಸರು ಮೂರು ದಿನದ ಒಳಗೆ ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ಜಾರಿ ಮಾಡಿದ್ದರು.



## ಇಂದು ಮಹಾರಾಷ್ಟ್ರ
# ಸಂಪುಟ ವಿಸ್ತರಣೆ
## ಗೃಹ ಖಾತೆ ಬಿಜೆಪಿಯೇ ಉಳಿಸಿಕೊಳ್ಳುವ ಸಾಧ್ಯತೆ

ಮುಂಬೈ: ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಅವರು ಭಾನುವಾರ ತಮ್ಮ ಸಂಪುಟವನ್ನು ವಿಸ್ತರಿಸುವ ನಿರೀಕ್ಷೆಯಿದ್ದು, ಭಾರತೀಯ ಜನತಾ ಪಕ್ಷ (ಬಿಜೆಪಿ) ಗೃಹ ಮತ್ತು ಕಂದಾಯ ಖಾತೆಗಳನ್ನು ಉಳಿಸಿಕೊಳ್ಳಬಹುದು ಎಂದು ಹೇಳಲಾಗುತ್ತಿದೆ. ಪಕ್ಷವು ಶಿವಸೇನೆಗೆ ನಗರಾಭಿವೃದ್ಧಿ ಖಾತೆಯನ್ನು ಹಂಚಬಹುದು ಮತ್ತು ಹಣಕಾಸು ಖಾತೆಯನ್ನು ಉಳಿಸಿಕೊಳ್ಳಬಹುದು. ಫಡ್ನವಿಸ್ ಡಿಸೆಂಬರ್ 5 ರಂದು ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ್ದರು, ಏಕನಾಥ್ ಶಿಂಧೆ ಮತ್ತು ಅಜಿತ್ ಪವಾರ್ ಅವರೊಂದಿಗೆ ಇಬ್ಬರೂ ಉಪಮುಖ್ಯಮಂತ್ರಿಗಳಾಗಿ ಪ್ರಮಾಣ ವಚನ ಸ್ವೀಕರಿಸಿದ್ದರು.

ಸೋಮವಾರದಿಂದ ಮಹಾರಾಷ್ಟ್ರ ವಿಧಾನಸಭೆಯಲ್ಲಿ ಆರಂಭವಾಗಲಿರುವ ಚಳಿಗಾಲದ ಅಧಿವೇಶನದ ಮುನ್ನಾದಿನದಂದು ನಾಗ್ಪುರದಲ್ಲಿ ಸಂಜೆ 4 ಗಂಟೆಗೆ ಪ್ರಮಾಣ ವಚನ ಸ್ವೀಕಾರ ಸಮಾರಂಭ ನಡೆಯಲಿದೆ. ಇದಕ್ಕೂ ಮುನ್ನ ದೇವೇಂದ್ರ ಫಡ್ನವಿಸ್ ಮತ್ತು ಏಕನಾಥ್ ಶಿಂಧೆ ನಡುವೆ ಸಭೆ ನಡೆದಿದ್ದು, ಸಚಿವ ಸಂಪುಟ ವಿಸ್ತರಣೆ ಕುರಿತು ಇಬ್ಬರೂ ಮಹಾಯುತಿ ನಾಯಕರು ಚರ್ಚಿಸಿದ್ದಾರೆ.

43 ಸಚಿವರು ಪ್ರಮಾಣ ವಚನ ಸ್ವೀಕರಿಸುವ ಸಾಧ್ಯತೆ

ಮೂಲಗಳ ಪ್ರಕಾರ, 43 ಸಚಿವರು ಪ್ರಮಾಣ ವಚನ ಸ್ವೀಕರಿಸುವ ಸಾಧ್ಯತೆಯಿದೆ. ಚಂದ್ರಶೇಖರ್ ಬಾವಂಕುಳೆ, ಚಂದ್ರಕಾಂತ್ ಪಾಟೀಲ್, ಸುಧೀರ್ ಮುಂಗಂತಿವಾರ್, ಗಿರೀಶ್ ಮಹಾಜನ್, ರವೀಂದ್ರ ಚವ್ಹಾಣ್, ಪ್ರವೀಣ್ ದಾರೇಕರ್, ಮಂಗಲ್ ಪ್ರಭಾತ್ ಲೋಧಾ, ಬಾಬನರಾವ್ ಲೋನಿಕರ್, ಪಂಕಜಾ ಮುಂಡೆ, ಆಶಿಶ್ ಶೇಲಾರ್ ಅಥವಾ ಯೋಗೇಶ್ ಸಾಗರ್ ಅವರಿಗೆ ಅವಕಾಶ ಸಿಗಬಹುದು. ಸಂಭಾಜಿ ನಿಲಂಗೇಕರ್, ಜಯಕುಮಾರ್ ರಾವಲ್, ಶಿವೇಂದ್ರರಾಜೇ ಭೋಸಲೆ, ನಿತೇಶ್ ರಾಣೆ, ವಿಜಯಕುಮಾರ್ ಗವಿತ್, ದೇವಯಾನಿ ಫರಾಂಡೆ ಅಥವಾ ರಾಹುಲ್ ಅಹೆರ್, ರಾಹುಲ್ ಕುಲ್, ಮಾಧುರಿ ಮಿಸಾಲ್, ಸಂಜಯ್ ಕುಟೆ ಮತ್ತು ಗೋಪಿಚಂದ್ ಪಡಲ್ಕರ್ ಅವರಿಗೆ ಸಚಿವ ಸ್ಥಾನ ನೀಡಬಹುದು ಎಂದು ಹೇಳಲಾಗುತ್ತಿದೆ. ನವೆಂಬರ್ 20 ರಂದು ನಡೆದ ವಿಧಾನಸಭಾ ಚುನಾವಣೆಯ ಫಲಿತಾಂಶವು ನವೆಂಬರ್ 23 ರಂದು ಪ್ರಕಟವಾಯಿತು. ರಾಜ್ಯದಲ್ಲಿ 288 ಸ್ಥಾನಗಳ ಪೈಕಿ 230 ಸ್ಥಾನಗಳನ್ನು ಗೆದ್ದು ಮಹಾಯುತಿ ಮೈತ್ರಿಕೂಟ ಅಧಿಕಾರಕ್ಕೆ ಬಂದಿದೆ. ಮಹಾಮೈತ್ರಿಕೂಟದ ಭಾಗವಾಗಿದ್ದ ಬಿಜೆಪಿ 132 ಸ್ಥಾನಗಳಲ್ಲಿ ಮುನ್ನಡೆ ಸಾಧಿಸಿದೆ. ಏಕನಾಥ್ ಶಿಂಧೆ ನೇತೃತ್ವದ ಶಿವಸೇನೆ 57 ಸ್ಥಾನಗಳನ್ನು ಗೆದ್ದಿದ್ದರೆ, ಅಜಿತ್ ಪವಾರ್ ಅವರ ಎನ್‌ಸಿಪಿ 41 ಸ್ಥಾನಗಳನ್ನು ಗೆದ್ದಿದೆ.



## ಡ್ರೋನ್ ಪ್ರತಾಪ್‌ಗೆ
# ಖಾಕಿ ಡ್ರಿಲ್!

ಬೆಂಗಳೂರು: ಸ್ಫೋಟಕ ವಸ್ತುವನ್ನು ನೀರಿಗೆಸೆದಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧನಕ್ಕೊಳಗಾಗಿರುವ ಕನ್ನಡದ ಬಿಗ್ ಬಾಸ್ ರಿಯಾಲಿಟಿ ಶೋ ರನ್ನರ್ ಅಪ್ ಡ್ರೋನ್ ಪ್ರತಾಪ್ ಅವರನ್ನು ಘಟನೆ ನಡೆದ ಸ್ಥಳಕ್ಕೆ ಕರೆತಂದ ಪೊಲೀಸರು, ಇಂದು ಸ್ಥಳ ಮಹಜರು ನಡೆಸಿದರು. ಆ ಬಳಿಕೆ ಅವರನ್ನು ಬೆಂಗಳೂರಿಗೆ ಕರೆತಂದು ಪೊಲೀಸರು ತನಿಖೆ ನಡೆಸಿದ್ದಾರೆ.

**ವಿಡಿಯೋ ಚಿತ್ರೀಕರಿಸಿದ ಕ್ಯಾಮೆರಾ ಜಪ್ತಿ:** ಆರೋಪಿ ಡ್ರೋಣ್ ಪ್ರತಾಪ್‌ನನ್ನು ನಿನ್ನೆ ಬೆಂಗಳೂರಿಗೆ ಕರೆತರಲಾಯಿತು. ಈ ವೇಳೆ ಬ್ಲಾಸ್ಟ್ ಮಾಡುವ ವೇಳೆ ವಿಡಿಯೋ ಚಿತ್ರೀಕರಿಸಿದ ಕ್ಯಾಮೆರಾ, ಜಪ್ತಿ ಮಾಡಿದ್ದಾರೆ. ತನಿಖೆ ವೇಳೆ ಬ್ಲಾಸ್ಟ್‌ಗೆ ಬಳಸಿದ ಕೆಮಿಕಲ್ ಖರೀದಿ ಬಗ್ಗೆಯೂ ಪ್ರಶ್ನೆಗಳನ್ನು ಕೇಳಿದ್ದಾರೆ.

### ಪ್ರತಾಪ್‌ಗೆ ಪ್ರಶ್ನೆಗಳ ಸುರಿಮಳೆ

**ಡ್ರೋನ್ ಪ್ರತಾಪ್‌ಗೆ ಸೋಡಿಯಂ ಕೊಟ್ಟಿದ್ದು ಯಾರು? ಸೋಡಿಯಂ ಪಡೆದುಕೊಂಡಿದ್ದು ಎಲ್ಲಿ? ಹಣ ಕೊಟ್ಟು ಪಡೆಯಲಾಗಿದ್ಯಾ? ಎಂಬಿತ್ಯಾದಿ ಸರಣಿ ಪ್ರಶ್ನೆಗಳನ್ನು ಕೇಳಿದ್ದಾರೆ. ಬೆಂಗಳೂರು ಹೊರವಲಯದಲ್ಲಿ ತನಿಖೆ ನಡೆಸಿದ ಪೊಲೀಸರು ವಾಪಸ್ ತೆರಳಿದ್ದಾರೆ. ಸೋಡಿಯಂ ಬ್ಲಾಸ್ಟ್ ಬಗ್ಗೆ ತುಮಕೂರು ಪೊಲೀಸರಿಂದ ತನಿಖೆ ಮುಂದುವರೆಸಿದ್ದಾರೆ.**

ಪುಟ 2



## ಸಂಕ್ಷಿಪ್ತ ಸುದ್ದಿ

### 3 ತಿಂಗಳ ಹಿಂದೆ ಮದುವೆ ಆಗಿದ್ದ ಮಹಿಳೆ
# ನೇಣಿಗೆ ಶರಣು

**ಚಿಕ್ಕೋಡಿ:** ಮೂರು ತಿಂಗಳ ಹಿಂದಷ್ಟೇ ಮದುವೆಯಾಗಿದ್ದ ಮಹಿಳೆ ನೇಣಿಗೆ ಶರಣಾಗಿರುವ ಘಟನೆ ಬೆಳಗಾವಿ ಜಿಲ್ಲೆಯ ರಾಯಬಾಗ ತಾಲೂಕಿನ ನಿಡಗುಂದಿ ಗ್ರಾಮದಲ್ಲಿ ನಡೆದಿದೆ. ರಮ್ಯಾಶ್ರೀ ಬಸವರಾಜ ಹಂಪನ್ನವರ (25) ಮೃತ ಮಹಿಳೆ. ಅನಾರೋಗ್ಯದ ಸಮಸ್ಯೆಯಿಂದ ಮಹಿಳೆ ನೇಣಿಗೆ ಶರಣಾಗಿರುವ ಶಂಕೆ ವ್ಯಕ್ತವಾಗಿದೆ. ರಮ್ಯಾಶ್ರೀ ಕಳೆದ ನಾಲ್ಕು ವರ್ಷದ ಹಿಂದೆ ಬೇರೆ ಮದುವೆ ಆಗಿ ಪತಿಯಿಂದ ಬೇರ್ಪಟ್ಟಿದ್ದಳು. ಬಳಿಕ ಮೂರು ತಿಂಗಳ ಹಿಂದೆ ನಿಡಗುಂದಿ ಗ್ರಾಮದ ಬಸವರಾಜ ಹಂಪನ್ನವರ ಎಂಬವರನ್ನು ಮದುವೆ ಆಗಿದ್ದಳು. ಮೊದಲನೆ ಮದುವೆಯಾಗಿ ನಾಲ್ಕು ವರ್ಷ ಸಂಸಾರ ನಡೆಸಿದ್ದಳು. ಬಳಿಕ ಮತ್ತೊಂದು ಮದುವೆ ಆಗಿ ಕೇವಲ ಮೂರೇ ತಿಂಗಳಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ನೇಣು ಬಿಗಿದ ಸ್ಥಿತಿಯಲ್ಲಿ ರಮ್ಯಾಶ್ರೀ ಶವ ಪತ್ತೆಯಾಗಿದೆ.

ಪುಟ 2



### ಸಂಭಲ್ ಮಸೀದಿ ಸುತ್ತ ಒತ್ತುವರಿ ತೆರವು ವೇಳೆ
# ಹಿಂದೂ ದೇಗುಲ ಪತ್ತೆ

**ಲಕ್ನೋ:** ಸಂಭಲ್‌ನಲ್ಲಿರುವ ಶಾಹಿ ಜಾಮಾ ಮಸೀದಿಯ ಸುತ್ತ ಒತ್ತುವರಿ ತೆರವು ವೇಳೆ 46 ವರ್ಷಗಳಷ್ಟು ಹಿಂದಿನ ಹಳೇ ದೇಗುಲ ಪತ್ತೆಯಾಗಿದೆ. ಸಂಭಲ್‌ನಲ್ಲಿ ಹಿಂಸಾಚಾರ ನಡೆದಿದ್ದ ಮಸೀದಿ ಸುತ್ತಮುತ್ತ ಸರ್ಕಾರ ಒತ್ತುವರಿ ತೆರವು ಕಾರ್ಯ ಆರಂಭಿಸಿದೆ. ದೇವಾಲಯದಲ್ಲಿ ಶಿವ ಮತ್ತು ಹನುಮಂತನ ವಿಗ್ರಹಗಳು ಪತ್ತೆಯಾಗಿವೆ. ನಖಾಸಾ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಶಂಕಿತ ಅಕ್ರಮ ವಿದ್ಯುತ್ ಸಂಪರ್ಕಗಳನ್ನು ಹೊಂದಿರುವ ಸ್ಥಳಗಳನ್ನು ಕೂಡ ಈ ಕಾರ್ಯಾಚರಣೆಯು ಗುರಿಯಾಗಿಸಿದೆ. ಸಂಭಲ್ ಸಿಒ ಅನುಜ್ ಕುಮಾರ್ ಚೌಧರಿ ಮಾತನಾಡಿ, ಈ ಪ್ರದೇಶದಲ್ಲಿ ದೇವಸ್ಥಾನವನ್ನು ಅತಿಕ್ರಮಣ ಮಾಡಿರುವ ಬಗ್ಗೆ ಪೊಲೀಸರಿಗೆ ಮಾಹಿತಿ ಬಂದಿದೆ.

ಪುಟ 2



# ಹಿಜಬ್ ಧರಿಸದೇ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟಿದ್ದಕ್ಕೆ ಇರಾನ್ ಗಾಯಕಿ ಬಂಧನ



**ಟೆಹ್ರಾನ್:** ಹಿಜಬ್ ಧರಿಸದೆ ಯೂಟ್ಯೂಬ್‌ನಲ್ಲಿ ವರ್ಚುವಲ್ ಕನ್ಸರ್ಟ್‌ನಲ್ಲಿ ಪ್ರದರ್ಶನ ನೀಡಿದ್ದಕ್ಕೆ ಇರಾನಿನ ಗಾಯಕಿಯನ್ನು ಬಂಧಿಸಲಾಗಿದೆ ಎಂದು ಟೈಮ್ಸ್ ಆಫ್ ಇಸ್ರೇಲ್ ವರದಿ ಮಾಡಿದೆ.

ಇರಾನ್‌ನ ರಾಜಧಾನಿ ಟೆಹ್ರಾನ್‌ನಿಂದ ಸುಮಾರು 280 ಕಿಮೀ ದೂರದಲ್ಲಿರುವ ಮಜಂದರಾನ್ ಪ್ರಾಂತ್ಯದ ಸಾರಿ ನಗರದಲ್ಲಿ ಶನಿವಾರ ಗಾಯಕಿ ಪರಸ್ಟೂ ಅಹ್ಮದಿಯನ್ನು (27) ಬಂಧಿಸಲಾಗಿದೆ ಎಂದು ಆಕೆಯ ವಕೀಲ ಮಿಲಾದ್ ಪನಾಹಿಪೂರ್ ಹೇಳಿದ್ದಾರೆ.

ನಾಲ್ವರು ಪುರುಷ ಸಂಗೀತಗಾರರ ಜೊತೆಗೆ ತೋಳಿಲ್ಲದ ಕಪ್ಪು ಡ್ರೆಸ್ ಧರಿಸಿ, ಕೂದಲನ್ನು ಬಿಚ್ಚಿಟ್ಟು ಪ್ರದರ್ಶನ ನೀಡುತ್ತಿದ್ದ ಆಕೆ ತನ್ನ ಸಂಗೀತ ಕಾರ್ಯಕ್ರಮವನ್ನು ಆನ್‌ಲೈನ್ ನಲ್ಲಿ ಪೋಸ್ಟ್ ಮಾಡಿದ್ದರು. ಈ ಸಂಬಂಧ ಪ್ರಕರಣ ದಾಖಲಿಸಿ ಆಕೆಯನ್ನು ಬಂಧಿಸಲಾಗಿದೆ.

ನಾನು ಪರಸ್ಟೂ, ನಾನು ಪ್ರೀತಿಸುವ ಜನರಿಗಾಗಿ ಹಾಡಲು ಬಯಸುವ ಹುಡುಗಿ. ಇದು ನಾನು ನಿರ್ಲಕ್ಷಿಸಲು ಸಾಧ್ಯವಾಗದ ಹಕ್ಕು. ನಾನು ಉತ್ಸಾಹದಿಂದ ಪ್ರೀತಿಸುವ ಭೂಮಿಗಾಗಿ ಹಾಡುತ್ತೇನೆ. ನಮ್ಮ ಪ್ರೀತಿಯ ಇರಾನ್‌ನ ಈ ಭಾಗದಲ್ಲಿ, ಇತಿಹಾಸ ಮತ್ತು ನಮ್ಮ ಪುರಾಣಗಳು ಹೆಣೆದುಕೊಂಡಿವೆ. ಈ ಕಾಲ್ಪನಿಕ ಸಂಗೀತ ಕಚೇರಿಯಲ್ಲಿ ನನ್ನ ಧ್ವನಿಯನ್ನು ಕೇಳಿ ಮತ್ತು ಈ ಸುಂದರ ತಾಯ್ನಾಡನ್ನು ಕಲ್ಪಿಸಿಕೊಳ್ಳಿ ಎಂದು ಮಿಸ್ ಅಹ್ಮದಿ ಯೂಟ್ಯೂಬ್‌ನಲ್ಲಿ ವೀಡಿಯೊದೊಂದಿಗೆ ಪೋಸ್ಟ್‌ನಲ್ಲಿ ಬರೆದಿದ್ದಾರೆ.

ವೀಡಿಯೊ ಹಂಚಿಕೆ ವೇದಿಕೆಯಲ್ಲಿ ಸಂಗೀತ ಕಚೇರಿಯು 15 ಲಕ್ಷ ವೀಕ್ಷಣೆಗಳನ್ನು ಗಳಿಸಿದೆ. ಇಬ್ಬರು ಪುರುಷ ಸಂಗೀತಗಾರರಾದ ಸೊಹೇಲ್ ಫಾಘಿಹ್ ನಾಸಿರಿ ಮತ್ತು ಎಹ್ಸಾನ್ ಬೈರಾಗ್ದರ್ ಅವರನ್ನು ಅದೇ ದಿನ ಟೆಹ್ರಾನ್‌ನಲ್ಲಿ ಬಂಧಿಸಲಾಗಿದೆ.

## ಹನುಮ ಮಾಲಾಧಾರಿಗಳಿಂದ ಸಂಕೀರ್ತನಾ ಯಾತ್ರೆ
# ಸಕ್ಕರೆನಾಡು ಮಂಡ್ಯ ಕೇಸರಿಮಯ



**ಮಂಡ್ಯ:** ಶ್ರೀರಂಗಪಟ್ಟಣದ ಜಾಮಿಯಾ ಮಸೀದಿಯ ವಿವಾದ ಇದೀಗ ಮತ್ತೆ ಮುನ್ನಲೆಗೆ ಬಂದಿದೆ. ಪ್ರತಿ ವರ್ಷದಂತೆ ಇಂದು ಜಾಮಿಯಾ ಮಸೀದಿ ಜಾಗದಲ್ಲಿ ಮೂಡಲ ಬಾಗಿಲು ಆಂಜನೇಯಸ್ವಾಮಿ ದೇವಸ್ಥಾನ ಪುನರ್ ನಿರ್ಮಾಣ ಮಾಡುವ ಪ್ರತಿಜ್ಞೆ ಮಾಡಿ ಹನುಮ ಮಾಲಧಾರಿಗಳು ಬೃಹತ್ ಸಂಕೀರ್ತನಾ ಯಾತ್ರೆಯನ್ನು ಮಾಡುತ್ತಿದ್ದಾರೆ.

ಸಕ್ಕರೆನಾಡು ಮಂಡ್ಯ ಜಿಲ್ಲೆಯ ಕೋಟೆ ನಗರಿ ಎಂದು ಕರೆಯಲ್ಪಡುವ ಶ್ರೀರಂಗಪಟ್ಟಣದಲ್ಲಿ ಎಲ್ಲಿ ನೋಡಿದರು ಕೇಸರಿ ಮಯವಾಗಿದೆ. ಬೀದಿ ಬೀದಿಗಳಲ್ಲಿ ಕೇಸರಿ ಬಾವುಟ, ಮೂಡಲ ಬಾಗಿಲು ಆಂಜನೇಯಸ್ವಾಮಿಯ ದೇವಸ್ಥಾನದ ಪ್ರಮುಖ ರಸ್ತೆಗಳಲ್ಲಿ ಫ್ಲೆಕ್ಸ್, ಬಂಟಿಂಗ್ಸ್ ರಾರಾಜಿಸುತ್ತಿದೆ.

ಪುಟ 2

## ದಟ್ಟ ಮಂಜು, ಮೈಕೊರೆವ ಚಳಿ
# 19ರಿಂದ ಮಳೆ ಸಾಧ್ಯತೆ



**ಬೆಂಗಳೂರು:** ಬೆಂಗಳೂರಿನಲ್ಲಿ ಮಳೆ ಕಡಿಮೆಯಾಗುತ್ತಿದ್ದಂತೆ ಮೈಕೊರೆವ ಚಳಿ ಶುರುವಾಗಿದೆ, ದಟ್ಟ ಮಂಜು ಕವಿದಿದೆ. ಹಾಗೆಯೇ ಡಿಸೆಂಬರ್ 19ರ ಬಳಿಕ ಮತ್ತೆ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಡಿಸೆಂಬರ್ ಮೊದಲ ವಾರದಿಂದಲೇ ಆರಂಭವಾಗಬೇಕಿದ್ದ ಚಳಿ ಈಗ ಶುರುವಾಗಿದೆ, ಒಂದೊಮ್ಮೆ ಮತ್ತೆ ಮಳೆ ಶುರುವಾದರೆ ಚಳಿಯ ಪ್ರಮಾಣ ಕಡಿಮೆಯಾಗಿ ಬೆಳೆಗಳಿಗೆ ತೊಂದರೆಯಾಗುವ ಸಾಧ್ಯತೆ ಹೆಚ್ಚಿದೆ.

ಪುಟ 2



## ಲಾರಿ, 2 ಕಾರುಗಳ ನಡುವೆ ಸರಣಿ ಅಪಘಾತ
# 4 ಎಮ್ಮೆಗಳು ಸಾವು

**ಚಿತ್ರದುರ್ಗ:** ಲಾರಿ ಮತ್ತು ಎರಡು ಕಾರುಗಳ ನಡುವೆ ಸರಣಿ ಅಪಘಾತವುಂಟಾದ ಪರಿಣಾಮ ಎಮ್ಮೆಗಳಿಗೆ ಲಾರಿ ಡಿಕ್ಕಿಯಾಗಿ 4 ಎಮ್ಮೆಗಳು ಸಾವನ್ನಪ್ಪಿದ ಘಟನೆ ಚಿತ್ರದುರ್ಗ ತಾಲೂಕಿನ ಚಿಕ್ಕಬೆನ್ನೂರು ಗ್ರಾಮದಲ್ಲಿ ನಡೆದಿದೆ. ರಾಷ್ಟ್ರೀಯ ಹೆದ್ದಾರಿ 48ರಲ್ಲಿ ಅಪಘಾತ ಸಂಭವಿಸಿದೆ. ಲಾರಿ ಮತ್ತು ಎರಡು ಕಾರುಗಳ ನಡುವೆ ಸರಣಿ ಅಪಘಾತವುಂಟಾಗಿದೆ. ಅದೃಷ್ಟವಶಾತ್ ವಾಹನ ಸವಾರರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಭರಮಸಾಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಪ್ರಕರಣ ನಡೆದಿದೆ.

## ಚಾಮುಂಡೇಶ್ವರಿ ಸೀರೆ ವಿವಾದ
# ಸ್ನೇಹಮಯಿ ಕೃಷ್ಣ ವಿರುದ್ಧ ದೂರು



**ಮೈಸೂರು:** ಆರ್‌ಟಿಐ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ವಿರುದ್ಧ ಚಾಮುಂಡೇಶ್ವರಿ ದೇವಾಲಯದ ಕಾರ್ಯದರ್ಶಿ ರೂಪಾ ಅವರು ಕೃಷ್ಣರಾಜ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಸರ್ಕಾರಿ ಕೆಲಸಕ್ಕೆ ಮತ್ತು ಕರ್ತವ್ಯಕ್ಕೆ ಅಡ್ಡಿಪಡಿಸಿದ್ದಾರೆಂದು ಶನಿವಾರ (ಡಿ.14) ರಾತ್ರಿ ದೂರು ನೀಡಿದ್ದು, ಎಫ್ ಐಆರ್ ದಾಖಲಾಗಿದೆ.

ಸ್ನೇಹಮಯಿ ಕೃಷ್ಣ ವಿರುದ್ಧ ದೂರು ಏಕೆ?: ನಾಡದೇವತೆ ತಾಯಿ ಚಾಮುಂಡೇಶ್ವರಿ ದೇವಿಗೆ ಉಡುಗೊರೆಯಾಗಿ ನೀಡಿದ್ದ ಲಕ್ಷಾಂತರ ರೂ. ಮೌಲ್ಯದ ಸೀರೆಗಳನ್ನು ಚಾಮುಂಡೇಶ್ವರಿ ದೇವಲಾಯದ ಕಾರ್ಯದರ್ಶಿ ರೂಪಾ ಅವರು ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿದ್ದಾರೆ ಎಂದು ಸ್ನೇಹಮಯಿ ಕೃಷ್ಣ ಅವರು ಗಂಭೀರ ಆರೋಪ ಮಾಡದ್ದರು. ಈ ಬಗ್ಗೆ ಮೈಸೂರಿನ ಕೃಷ್ಣರಾಜ ಪೊಲೀಸ್ ಠಾಣೆಗೆ ವಿಡಿಯೋ ಸಮೇತ ದೂರು ನೀಡಿದ್ದರು.

ಚಾಮುಂಡೇಶ್ವರಿ ದೇವಿಗೆ ಉಡುಗೊರೆಯಾಗಿ ಬಂದ ಸೀರೆಗಳನ್ನು ಕಾರ್ಯದರ್ಶಿ ರೂಪಾ ಅವರ ಕಾರಿನಲ್ಲಿ ತುಂಬಿಸಿ ಸಾಗಾಟ ಮಾಡಲಾಗುತ್ತಿದೆ. ಯುವಕನೊಬ್ಬ ಕಾರಿಗೆ ಸೀರೆ ತುಂಬಿಸಿಕೊಂಡು ಹೋಗುವ ವಿಡಿಯೋದ ಸಿಡಿಯನ್ನು ದೂರಿನೊಂದಿಗೆ ಲಗತ್ತಿಸಿದ್ದರು.

ಈ ಹಿನ್ನೆಲೆಯಲ್ಲಿ, ಸ್ನೇಹಮಯಿ ಕೃಷ್ಣ ಅವರು ಸರ್ಕಾರಿ ಕೆಲಸಕ್ಕೆ ಅಡ್ಡಿಪಡಿಸುತ್ತಿದ್ದಾರೆ ಎಂದು ದೇವಸ್ಥಾನದ ಕಾರ್ಯದರ್ಶಿ ರೂಪ ಅವರು ದೂರು ದಾಖಲಿಸಿದ್ದಾರೆ.

ಪುಟ 2

# ವಿಫುಲವಾದ ಅವಕಾಶಗಳನ್ನು ಬಳಸಿಕೊಂಡು ಭವಿಷ್ಯರೂಪಿಸಿಕೊಳ್ಳಿ




**ವಿಜಯಪುರ:** ಬದಲಾಗಿರುವ ಕಾಲಮಾನಕ್ಕೆ ತಕ್ಕ ಹಾಗೆ ಶಿಕ್ಷಣ ಕ್ಷೇತ್ರದಲ್ಲಿ ಸಾಕಷ್ಟು ತಂತ್ರಜ್ಞಾನಗಳು ಬೆಳೆದಿದ್ದು ಅವುಗಳನ್ನು ಬಳಸಿಕೊಂಡು ಇರುವ ವಿಪುಲವಾದ ಅವಕಾಶಗಳನ್ನು ಬಳಸಿ ಭವಿಷ್ಯ ರೂಪಿಸಿಕೊಳ್ಳಬೇಕೆಂದು ಬೆಂಗಳೂರು ಉತ್ತರ ವಿಶ್ವವಿದ್ಯಾನಿಲಯದ (ಡೀಮ್ ಆಫ್ ಸೈನ್ಸ್) ವಿಜ್ಞಾನ ವಿಭಾಗದ ಮುಖ್ಯಸ್ಥರಾದ ಆರ್ ನಳಿನಿರವರು ತಿಳಿಸಿದರು.

ಇಲ್ಲಿನ ಗಿರಿಜಾ ಶಂಕರ ಕಲ್ಯಾಣ ಮಂಟಪದಲ್ಲಿ ಪ್ರಗತಿ ಪ್ರಥಮ ದರ್ಜೆ ಕಾಲೇಜಿನ ವತಿಯಿಂದ ಏರ್ಪಡಿಸಲಾಗಿದ್ದ ಗ್ರಾಜುಯೇಷನ್ ಸೆರ್ಮನಿ ಪದವಿ ಪ್ರಮಾಣ ಕಾರ್ಯಕ್ರಮ ದಲ್ಲಿ ಪದವಿಗಳಿಸಿದ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣ ಪತ್ರಗಳನ್ನು ವಿತರಿಸಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡುತ್ತಿದ್ದರು.

ಸುಸ್ಥಿರವಾದ ಆರೋಗ್ಯವಂತ ದೇಹದಲ್ಲಿ ಉತ್ತಮ ಚಿಂತನೆಗಳು ಮೂಡುತ್ತವೆ ಎಂಬ ನಾಣ್ಣುಡಿ ಇದ್ದು, ಅದಕ್ಕಾಗಿ ಪ್ರತಿಯೊಬ್ಬರು ಆರೋಗ್ಯವಂತ ಸದೃಢ ದೇಹ ದಾರ್ಢ್ಯತೆಯನ್ನು ಯೋಗ ಮತ್ತು ಕ್ರೀಡೆಗಳನ್ನು ರೂಡಿಸಿಕೊಳ್ಳುವ ಮೂಲಕ ಪಡೆಯಬೇಕೆಂದು ತಿಳಿಸಿದರು. ಪದವಿಯ ನಂತರ ಹೆಚ್ಚಿನ ಶಿಕ್ಷಣಕ್ಕಾಗಿ ಹಾಗೂ ಉತ್ತಮ ಭವಿಷ್ಯ ರೂಪಿಸಿಕೊಳ್ಳಲು ಇರುವ ಅವಕಾಶಗಳ ಬಗ್ಗೆ ತಿಳಿಸಿಕೊಟ್ಟರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶ್ರೀ ನಗರೇಶ್ವರ ಎಜುಕೇಶನ್ ಟ್ರಸ್ಟ್ ನ ಮ್ಯಾನೇಜಿಂಗ್ ಡೈರೆಕ್ಟರ್ ಡಾ. ಎಸ್ ಕೃಪಾಶಂಕರ್ ರವರು ಮಾತನಾಡಿ ಪದವಿಗಳಿಸಿ ಕಾಲೇಜಿನಿಂದ ಹೊರಹೋಗುತ್ತಿರುವ ವಿದ್ಯಾರ್ಥಿಗಳು ಪ್ರಮುಖ ಮೂರು ಅಂಶಗಳನ್ನು ನೆನಪಿನಲ್ಲಿಟ್ಟುಕೊಳ್ಳಬೇಕು, ತಾವು ಎಲ್ಲಾ ಕಲಿತಿದ್ದು ಮುಗಿದಿದೆ ಎಂಬ ಅಹಂ ಬಿಡಬೇಕು ಜೀವನಪೂರ್ತಿ ಕಲಿಯತಕ್ಕದ್ದು ಇನ್ನೂ ಇದೆ ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು, ಕಲಿತಿದ್ದು ಮುಗಿದಿದೆ ಎಂಬಂತಿದ್ದರೂ ಮತ್ತೆ ಮತ್ತೆ ಅದನ್ನೇ ಕಲಿಯುವ ಹಂಬಲ ಇಟ್ಟುಕೊಂಡಿರಬೇಕೆಂದು ತಿಳಿಸಿದರು.

ಈ ಮೂರು ವಿಷಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳದೆ ಜೀವನದಲ್ಲಿ ಪರಿಪೂರ್ಣತೆ ಸಾಧಿಸಲು ಸಾಧ್ಯವಾಗುವುದಿಲ್ಲವೆಂದು ತಿಳಿಸಿದರು.

**ಭಾರತ ಸಂಸ್ಕೃತಿ ಉತ್ತಮ:** ಸಾಮಾನ್ಯವಾಗಿ ಪಾಶ್ಚಿಮಾತ್ಯ ದೇಶಗಳಲ್ಲಿ 18–20 ವರ್ಷಗಳು ಪೂರೈಸಿದ ನಂತರ ಮಕ್ಕಳು ಅವರ ಪಾಡಿಗೆ ಅವರು ಬೆಳೆದುಕೊಳ್ಳಲಿ ಎಂದು ಮಕ್ಕಳನ್ನು ಹೊರ ಕಳಿಸಿಬಿಡುತ್ತಾರೆ, ಆದರೆ ಭಾರತ ದೇಶದಲ್ಲಿ ನಮ್ಮ ಸಂಸ್ಕೃತಿಯಲ್ಲಿ ಮಕ್ಕಳನ್ನು ಎಷ್ಟೇ ವರ್ಷಗಳಾದರೂ ತಂದೆ ತಾಯಿಯಂದಿರು ಜೊತೆಯಲ್ಲಿಟ್ಟುಕೊಂಡು ಮಕ್ಕಳಂತೆ ಕೊನೆವರೆಗೂ ಪೋಷಿಸುತ್ತಾರೆಂದು ಇದು ಬೇರೆಲ್ಲೂ ಕಾಣಲು ಸಿಗದಂತಹ ಭಾರತೀಯ ಸಂಸ್ಕೃತಿ ಎಂದು ತಿಳಿಸಿದರು.

ಪ್ರಗತಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲ ಡಾ.ಎನ್.ನಾಗರಾಜ್ ಮಾತನಾಡಿ, ದೇಶದ ಅಭಿವೃದ್ಧಿ ಯುವಜನರ ಕೈಯಲ್ಲಿದೆ. ಯುವಜನರು ತಮ್ಮಲ್ಲಿರುವ ಶಕ್ತಿ, ಸಾಮರ್ಥ್ಯವನ್ನು ಬಳಕೆ ಮಾಡಿಕೊಂಡು, ತಮ್ಮ ಜೀವನ ರೂಪಿಸಿಕೊಳ್ಳುವುದರ ಜೊತೆಗೆ, ಸಮಾಜದಲ್ಲಿ ದುರ್ಬಲರನ್ನೂ ಜೊತೆಯಲ್ಲಿ ಕರೆದೊಯ್ಯುವ ಕೆಲಸ ಮಾಡಬೇಕು. ಅಭಿವೃದ್ಧಿಯತ್ತ ಸಾಗಲು ಶಿಕ್ಷಣವೊಂದೆ ಮಾನದಂಡವಲ್ಲ, ಬದ್ಧತೆ ಬೇಕು ಎಂದರು.

ಪ್ರಗತಿ ಶಿಕ್ಷಣ ಸಮೂಹ ಸಂಸ್ಥೆಗಳ ಅಧ್ಯಕ್ಷ ಎಂ.ಸತೀಶ್ ಕುಮಾರ್, ರಾಷ್ಟ್ರೀಯ ಸೇವಾ ಯೋಜನೆಯ ಕಾರ್ಯಕ್ರಮಾಧಿಕಾರಿ ಆರ್.ಶೆಟ್ಟಿನಾಯಕ್ ಹಾಗೂ ಪ್ರಾಧ್ಯಾಪಕರು. ವಿದ್ಯಾರ್ಥಿಗಳ ಪೋಷಕರು ಇದ್ದರು.

# ಕಲಾರಂಗಭೂಮಿಯನ್ನು ಉಳಿಸಿ, ಬೆಳೆಸಿ ಪ್ರೋತ್ಸಾಹಿಸಿ-ಮಂಜುನಾಥ್



**ಚಾಮರಾಜನಗರ:** ರಂಗಭೂಮಿಯನ್ನು ಉಳಿಸುವ ಮಹತ್ವದ ಜವಾಬ್ದಾರಿ ಎಲ್ಲರ ಮೇಲಿದೆ ಎಂದು ಸಾಹಿತಿ, ಜಿಲ್ಲಾಪದವಿ ಪೂರ್ವ ಇಲಾಖೆ ಉಪನಿರ್ದೇಶಕ ಮಂಜುನಾಥ್ ಪ್ರಸನ್ನ. ಅಭಿಪ್ರಾಯಪಟ್ಟರು.

ನಗರದ ಡಾ.ರಾಜ್ ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ರಂಗತರಂಗ ಟ್ರಸ್ಟ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ರಂಗತರಂಗ ಟ್ರಸ್ಟ್‌ನ 30ನೇ ವಾರ್ಷಿಕೋತ್ಸವ ಅಂಗವಾಗಿ ಶನಿವಾರ ಆಯೋಜಿಸಿದ್ದ ' ರಂಗತರಂಗ, ರಂಗೋತ್ಸವ ಮೂರು ದಿನಗಳ ನಾಟಕೋತ್ಸವವನ್ನು ತಮಟೆಬಾರಿಸುವ ಮೂಲಕ ಉದ್ಘಾಟಿಸಿ ಮಾತನಾಡಿದರು

ಈಚಿನ ದಿನಗಳಲ್ಲಿ ಕಲಾರಂಗಭೂಮಿ ಸೇರಿದಂತೆ ಸಿನಿಮಾ ವೀಕ್ಷಿಸುವವರ ಪ್ರೇಕ್ಷಕರ ಸಂಖ್ಯೆ ಕಡಿಮೆಯಾಗಿದೆ. ಇಂತಹ ಸಂದರ್ಭದಲ್ಲಿ ರಂಗತರಂಗ ಸಂಸ್ಥೆ ಕಳೆದ 30 ವರ್ಷಗಳಿಂದ ರಂಗಭೂಮಿಯಲ್ಲಿ ತನ್ನನ್ನು ತೊಡಗಿಸಿಕೊಂಡು ಹಲವಾರು ಕಲಾವಿದರನ್ನು ಹುಟ್ಟು ಹಾಕುತ್ತ ಬಂದಿದೆ, ಕಲಾವಿದರಿಗೆ ಮತ್ತಷ್ಟು ಪ್ರೋತ್ಸಾಹ ನೀಡುವ ಮೂಲಕ ರಂಗತರಂಗ ಟ್ರಸ್ಟ್ ಬೆಳವಣಿಗೆಗೆ ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.

ರಂಗತರಂಗ ಟ್ರಸ್ಟ್ ಅಧ್ಯಕ್ಷ ಸೋಮಶೇಖರ್ ಬಿಸಲ್ವಾಡಿ ಮಾತನಾಡಿ, ನಮ್ಮ ಸಂಸ್ಥೆ ವತಿಯಿಂದ ಕಳೆದ ಮೂರು ದಶಕಗಳಿಂದ ಕಾವ್ಯಕಮ್ಮಟ, ನೃತ್ಯ, ನಾಟಕ ಶಿಬಿರಗಳನ್ನು ಆಯೋಜಿಸುತ್ತ ಬಂದಿದ್ದೇವೆ. ಪ್ರೇಕ್ಷಕರು ರಂಗಭೂಮಿ ಕಲಾವಿದರನ್ನು ಪ್ರೋತ್ಸಾಹಿಸುವ ಕಾರ್ಯ ಮಾಡಬೇಕಿದೆ ಎಂದರು. ಕಲಾವಿದರಾದ ಅಂಬಳೆ ಸಿದ್ದರಾಜು, ಎಸ್ .ಜಿ.ಸುಜಾತ, ಯಡಿಯೂರು ಮಹದೇವ, ಪಿಯು ಡಿಡಿ ಮಂಜುನಾಥ್ ಪ್ರಸನ್ನ ಅವರನ್ನು ಸನ್ಮಾನಿಸಲಾಯಿತು.

ಸಾಲಿಗ್ರಾಮ ಹುಚ್ಚಮ್ಮ ಕಾಳನಿಂಗೇಶ್ವರ ನಾಟಕ ಮಂಡಳಿ ಕಲಾವಿದರಿಂದ ರಾಜಾವಿಕ್ರಮ ಅಥವಾ ಶನಿಪ್ರಭಾವ ನಾಟಕ ಪ್ರದರ್ಶಿಸಿದರು.

# ಎಚ್.ಡಿ. ರಮೇಶ್ ಅವಿರೋಧ ಆಯ್ಕೆ



**ಪಿರಿಯಾಪಟ್ಟಣ:** ಕೃಷಿಕ ಸಮಾಜ ಕಾರ್ಯಕಾರಿ ಸಮಿತಿಗೆ ಎಚ್ ಡಿ ರಮೇಶ್ ಸೇರಿದಂತೆ 15 ಮಂದಿ ಅವಿರೋಧವಾಗಿ ಆ ಯೆ್ಕ ಯಾ ಗಿ ರ್ ುವ್ ು ದಾ ಗಿ ಚುನಾವಣಾ ಅಧಿಕಾರಿ ವೈ ಪ್ರಸಾದ್ ಘೋಷಿಸಿದ್ದಾರೆ. ತಾಲೂಕಿನ ಕೃಷಿಕ ಸಮಾಜದ 2025– 26 ರಿಂದ 2029– 30 ನೇ ಸಾಲಿಗೆ (5 ವರ್ಷ ) ಕಾರ್ಯಕಾರಿ ಸಮಿತಿ 15 ಸ್ಥಾನದ ಸದಸ್ಯರ ಆಯ್ಕೆಗೆ ಚುನಾವಣೆ ನಡೆಸಲಾಯಿತು. ಈ ಸ್ಥಾನಗಳಿಗೆ ಕ್ರಮವಾಗಿ ಡಿ ಆರ್ ವೆಂಕಟೇಶ್, ಪ್ರವೀಣ್ ಕುಮಾರ್, ಪ್ರಕಾಶ್, ಆರ್ ಟಿ ವೆಂಕಟೇಶ್, ಕೆ ಪ್ರಕಾಶ್, ತಿಮ್ಮೇಗೌಡ, ಎಂಡಿ ಸುನಿಲ್, ಎಂ ಸಿ ಅಶೋಕ್, ಪಿ.ಪಿ ಚಂದ್ರಪ್ಪ, ಸೈಯದ್ ಸೂಹೆಲ್, ಷಫಿ ಉಲ್ಲಾ, ಕೆ ಟಿ ಪ್ರಕಾಶ್, ಎಚ್. ಡಿ ರಮೇಶ್, ನಾಗೇಗೌಡ ಸೇರಿದಂತೆ 15 ಮಂದಿ ಸದಸ್ಯರಾಗಿ ಅವಿರೋಧವಾಗಿ ಆಯ್ಕೆ ಆಗಿರುವುದಾಗಿ ಚುನಾವಣಾ ಅಧಿಕಾರಿ ಮತ್ತು ಸಹಾಯಕ ಕೃಷಿ ನಿರ್ದೇಶಕರಾದ ವೈ ಪ್ರಸಾದ್ ಪ್ರಕಟಿಸಿದ್ದಾರೆ.

# ಮೈಮುಲ್ ನಿರ್ದೇಶಕ ಸ್ಥಾನದಿಂದ ಅನರ್ಹ ದ್ವೇಷ ರಾಜಕೀಯ




**ಪಿರಿಯಾಪಟ್ಟಣ:** ರಾಜಕೀಯ ದುರದೃಷ್ಟಿಯಿಂದ ಸಹಕಾರ ಸಂಘದ ಅಧಿಕಾರಿಗಳ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು ಮೈಮುಲ್ ನಿರ್ದೇಶಕ ಸ್ಥಾನದಿಂದ ಪಿಎಂ ಪ್ರಸನ್ನ ರವರನ್ನು ಅನರ್ಹಗೊಳಿಸಿರುವುದು ರಾಜಕೀಯ ದ್ವೇಷವಾಗಿದೆ ಎಂದು ಟಿಎಪಿಎಂಸಿ ಅಧ್ಯಕ್ಷ ಐಲಾಪುರ ರಾಮು ಆರೋಪಿಸಿದರು.

ಪಟ್ಟಣದ ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘದಲ್ಲಿ ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಚುನಾವಣೆಯ ಮೂಲಕ ಹೆಚ್ಚು ಮತ ಪಡೆದು ಆಯ್ಕೆಯಾಗಿರುವ ಪಿಎಂ ಪ್ರಸನ್ನರವರನ್ನು ವಿನಾಕಾರಣಕ್ಕಾಗಿ ಮೂರು ಬಾರಿ ವಜಾ ಗೊಳಿಸಿರುವುದು ದುರದೃಷ್ಟಕರ. ತಾಲೂಕಿನಲ್ಲಿ 50 ಕ್ಕಿಂತಲೂ ಹೆಚ್ಚು ಹಾಲು ಉತ್ಪಾದಕರ ಸಹಕಾರ ಸಂಘಗಳ ಅಧಿಕಾರದ ಅವಧಿ ಮುಗಿದಿದ್ದರೂ ಸಹ ಚುನಾವಣೆ ನಡೆಸಲು ಮೀನಮೇಷ ಎಣಿಸುತ್ತಿದ್ದಾರೆ. ಚುನಾವಣೆ ನಡೆದರೆ ಸೋಲುತ್ತೇವೆ ಎಂಬ ಭಯದಿಂದ ಚುನಾವಣೆಯನ್ನು ಮುಂದೂಡುತ್ತಾ ಸಂಘಗಳ ಅಭಿವೃದ್ದಿಗೆ ತೊಡಕಾಗಿದ್ದಾರೆ. ತಾಲ್ಲೂಕಿನಲ್ಲಿ ವಿಧಾನ ಸಭೆ ಚುನಾವಣೆ ಮುಗಿದ ಮೇಲೆ ಜೆಡಿಎಸ್ ಕಾರ್ಯಕರ್ತರ ಮೇಲೆ ನಿರಂತರವಾಗಿ ದಬ್ಬಾಳಿಕೆ ನಡೆಯುತ್ತಿದೆ ಜೊತೆಗೆ ಅಧಿಕಾರಿಗಳು ಸರಕಾರದ ಸವಲತ್ತುಗಳನ್ನು ನೀಡುವಲ್ಲಿ ತಾರತಮ್ಯ ಎಸಗುತ್ತಿದ್ದಾರೆ. ಪ್ರತಿ ನಿತ್ಯವೂ ಮಾಜಿ ಶಾಸಕರಾದ ಕೆ. ಮಹದೇವ್ ಮತ್ತು ಅವರ ಮಗನಾದ ಪಿಎಂ ಪ್ರಸನ್ನ ನ ಬಗ್ಗೆ ಅಪಪ್ರಚಾರ ಹಾಗೂ ಹಗುರವಾಗಿ ಮಾತನಾಡುತ್ತಿದಿರಾ.ಪ್ರಸನ್ನ ರವರು ನಾಮ ನಿರ್ದೇಶಕರಾಗಿ ಅಧಿಕಾರ ಪಡೆದು ಅಧ್ಯಕ್ಷರಾಗಲಿಲ್ಲ.ಚುನಾವಣೆಯ ಮೂಲಕ ಆಯ್ಕೆಯಾಗಿ ಜನರಿಂದ ಆಶೀರ್ವಾದ ಪಡೆದು. ಅಧ್ಯಕ್ಷರಾದವರು.ಇದನ್ನು ಸಹಿಸದೇ ಅವರನ್ನು ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಸಲು ನಿರಂತರ ಪ್ರಯತ್ನ ಮಾಡಿ ಕೊನೆಗೆ ಅಧಿಕಾರಗಳ ಮೂಲಕ ವಾಮಮಾರ್ಗದಲ್ಲಿ ಸದಸ್ಯತ್ವ ಸ್ಥಾನದಿಂದ ವಜಾಗೊಳಿಸಲು ಮುಂದಾಗಿರುವುದು ಸರಿಯೇ. ಮೈಮುಲ್ ಆಡಳಿತ ಮಂಡಳಿಗೆ ಚುನಾವಣೆ ನಡೆಯಲು ಕೇವಲ ಒಂದೂವರೆ ವರ್ಷ ಬಾಕಿಯಿದೆ. ಆ ವೇಳೆ ಸಚಿವರು ತಮ್ಮ ಬೆಂಬಲಿಗರನ್ನು ಚುನಾವಣೆಯಲ್ಲಿ ನಿಲ್ಲಿಸಿ ಪ್ರಸನ್ನ ನ್ನು ಸೋಲಿಸಲಿ. ಅದನ್ನು ಬಿಟ್ಟು ದ್ವೇಷ ರಾಜಕಾರಣಕ್ಕಾಗಿ ಜನರಿಂದ ಹೆಚ್ಚು ಮತ ಪಡೆದು ಆಯ್ಕೆಯಾದವರನ್ನು ವಜಾಗೊಳಿಸಿ ಜನರಿಂದ ತಿರಸ್ಕರಗೊಂಡವರನ್ನು ನಾಮ ನಿರ್ದೇಶಕರಾಗಿ ಮಾಡುವುದು ಯಾವ ನ್ಯಾಯ. ಇದು ನಿಮ್ಮ ಸ್ಥಾನಕ್ಕೆ ಶೋಭೆ ತರುತ್ತದೆಯೇ. ನಿಮಗೆ ತಾಕತ್ತಿದ್ದರೆ ಪ್ರಸನ್ನನ್ನು ಚುನಾವಣೆಯಲ್ಲಿ ಸೋಲಿಸಿ. ಅದನ್ನು ಬಿಟ್ಟು ವಾಮ ಮಾರ್ಗದಲ್ಲಿ ಅಧಿಕಾರಿಗಳನ್ನು ಬಳಸಿಕೊಂಡು ಅನರ್ಹಗೊಳಿಸುವುದು ಸರಿಯಲ್ಲ. ಇಂಥ ಕೆಲಸ ಮಾಡುವುದರ ಮೂಲಕ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಕಗ್ಗೊಲೆ ಮಾಡುತ್ತಿರುವುದು ಸಚಿವರ ಸ್ಥಾನಕ್ಕೆ ಘನತೆ ತರುವಂತದ್ದಲ್ಲ ಎಂದು ಟೀಕಿಸಿದರು.

ತಾಲ್ಲೋಕು ಜೆಡಿಎಸ್ ಘಟಕದ ಅಧ್ಯಕ್ಷ ಅಣ್ಣಯ್ಯ ಶೆಟ್ಟಿ ಮಾತನಾಡಿ ತಾಲೂಕಿನಲ್ಲಿ ಯಾವುದೇ ಕಚೇರಿಗಳಲ್ಲಿ ಸಹ ಅಧಿಕಾರಿಗಳು ಸರಿಯಾಗಿ ಕರ್ತವ್ಯ ನಿರ್ವಹಿಸುತ್ತಿಲ್ಲ ಸಚಿವರ ಅಣತಿಯಂತೆ ಕಾರ್ಯನಿರ್ವಹಿಸುತ್ತಾ ನಮ್ಮ ಪಕ್ಷದ ಕಾರ್ಯಕರ್ತರು ಸರಕಾರದ ಯಾವುದೇ ಸೌಲಭ್ಯಗಳನ್ನು ಪಡೆಯಲು ಸಾಧ್ಯವಾಗುತ್ತಿಲ್ಲ ಇಂತಹ ಸಾಮಾಜಿಕ ಕಾರ್ಯಕ್ರಮಗಳಿಗೆ ಸಚಿವರು ಮನ್ನಡೆ ನೀಡಬೇಕು ಅದನ್ನು ಬಿಟ್ಟು ರಾಜಕೀಯ ದ್ವೇಷಕ್ಕಾಗಿ ಮೈಮುಲ್ ಮಾಜಿ ಅಧ್ಯಕ್ಷರಿಗೆ ತೊಂದರೆ ನೀಡುವುದನ್ನು ಮೊದಲು ನಿಲ್ಲಿಸಲಿ. ಇದು ಮುಂದುವರೆದರೆ ಹೋರಾಟ ಮಾಡುವುದಾಗಿ ಎಚ್ಚರಿಸಿದರು. ಎಂ ಡಿ ಸಿ ಸಿ ಬ್ಯಾಂಕ್ ಮಾಜಿ ನಿರ್ದೇಶಕ ಸಿ. ಎನ್. ರವಿ , ಮಾಜಿ ಪುರಸಭಾ ಅಧ್ಯಕ್ಷ ಕೆ. ಮಹೇಶ್, ತಾಲೂಕು ಜೆಡಿಎಸ್ ಮಹಿಳಾ ಘಟಕದ ಅಧ್ಯಕ್ಷೆ ಪ್ರೀತಿ ಅರಸ್, ಟಿ ಎಪಿಎಂಸಿ ನಿರ್ದೇಶಕರಾದ ತಿಮ್ಮ ನಾಯಕ, ದೊರೆಕೆರೆ ನಾಗೇಂದ್ರ , ಕಂಪಲಾಪುರ ಕುಮಾರ್, ಮುಖಂಡರಾದ ಗಗನ್ , ಶಿವಣ್ಣ, ವಿದ್ಯಾಶಂಕರ್ , ವಿನೋದ ಕುಮಾರ್ ಹಾಜರಿದ್ದರು

# ವೈದ್ಯರಿಂದ ಹೊಸ ದೃಷ್ಟಿ ಪಡೆದ ರಾಜಸ್ಥಾನದ ಹುಡುಗಿ

**ಮೈಸೂರು:** ದೂರದ ರಾಜಸ್ಥಾನವೆಲ್ಲೋ ಮೈಸೂರೆಲ್ಲೋ! ಹುಟ್ಟಿನಿಂದ ಎರಡೂ ಕಣ್ಣುಗಳಲ್ಲಿ ಬಿಳಿ ಕಣ್ಣಿನ ಪೊರೆಯ ಕಾರಣಕ್ಕಾಗಿ ಮಂದ ದೃಷ್ಟಿ ಸಮಸ್ಯೆಯಿಂದ ಬಳಲುತ್ತಿದ್ದ ರಾಜಸ್ಥಾನದ 11 ವರ್ಷದ ಬಾಲಕಿ ಈಗ ಹೊಸ ದೃಷ್ಟಿ ಪಡೆದಿದ್ದಾಳೆ. ನಗರದ ಉಷಾಕಿರಣ ಆಸ್ಪತ್ರೆಯ ಶಸ್ತ್ರ ಚಿಕಿತ್ಸಕ ದಂಪತಿ ಡಾ. ಕೆ.ವಿ. ರವಿಶಂಕರ್ ಹಾಗೂ ಡಾ.ಉಮಾ ರವಿಶಂಕರ್ ಆಕೆಯ ಬಾಳಿನಲ್ಲಿ ಹೊಸ ಬೆಳಕು ಮೂಡಿಸಿದ್ದಾರೆ. ನಗರದ ಶ್ರೀಮತಿ ಚಿತ್ರಾ ವೆಂಕಟ್ರಮಣಿ ಮತ್ತು ಅವರ ಕುಟುಂಬಸ್ಥರು ಈ ಬಡ ಬಾಲಕಿಯ ಶಸ್ತ್ರ ಚಿಕಿತ್ಸೆಗೆ ದಾನಿಗಳಾಗಿದ್ದಾರೆ. ಹುಟ್ಟಿನಿಂದಲೇ ಅಲುಗಾಡುವ ಕಣ್ಣುಗಳು ಮತ್ತು ದೃಷ್ಟಿಹೀನತೆಯ ಸಮಸ್ಯೆಯಿಂದ ಬಳಲುತ್ತಿದ್ದ ಬಾಲಕಿ ರೇಷ್ಮಾ ಬಾನು ಅವರ ಪೋಷಕರು ಕಳೆದ ವಾರ ಮಕ್ಕಳ ಕಣ್ಣಿನ ಕಾಯಿಲೆಗಳಿಗೆ ಉಚಿತ ಚಿಕಿತ್ಸೆ ದೊರೆಯುತ್ತದೆ ಎಂದು ತಿಳಿದ ನಂತರ ಆಸ್ಪತ್ರೆಯ ಸಹಾಯವನ್ನು ನೇರವಾಗಿ ಕೋರಿದ್ದರು. ಹುಟ್ಟಿನಿಂದಲೇ ಎರಡೂ ಕಣ್ಣುಗಳಲ್ಲಿ ಕಣ್ಣಿನ ಪೊರೆ ಇತ್ತು. ಆಕೆಯ ಐಕ್ಯೂ ಸ್ವಲ್ಪ ಕಡಿಮೆ ಇದೆ ಎಂದು ಡಾ.ರವಿಶಂಕರ್ ವಿವರಿಸುತ್ತಾರೆ. ಆಕೆಯ ಪೋಷಕರು ರಾಜಸ್ಥಾನದಿಂದ ಜಿಲ್ಲೆಗೆ ವಲಸೆ ಬಂದು ಪ್ರಸ್ತುತ ಜಿಲ್ಲೆಯ ಹುಣಸೂರು ಪಟ್ಟಣದಲ್ಲಿ ರಸ್ತೆ ಬದಿಯ ವ್ಯಾಪಾರ ಮೂಲಕ ಜೀವನ ಸಾಗಿಸುತ್ತಿದ್ದಾರೆ.

# ರಾಜ್ಯಮಟ್ಟದ ಹಗ್ಗಜಗ್ಗಾಟ ಪುರುಷರ ಪಂದ್ಯಾವಳಿ



**ತಿಪಟೂರು:** ಅಕ್ಷಯ ತಾಂತ್ರಿಕ ಮಹಾವಿದ್ಯಾಲಾಯ ಕಾಲೇಜಿನಲ್ಲಿ ನಡೆದ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಅಂತರ ಕಾಲೇಜು ಕೇಂದ್ರ ಕರ್ನಾಟಕ ವಿಭಾಗದ ಹಾಗು ರಾಜ್ಯಮಟ್ಟದ ಹಗ್ಗಜಗ್ಗಾಟ ಪುರುಷರ ಪಂದ್ಯಾವಳಿಯಲ್ಲಿ ಕಲ್ಪತರು ತಾಂತ್ರಿಕ ಮಹಾವಿದ್ಯಾಲಾಯ ವಿದ್ಯಾರ್ಥಿಗಳು ದ್ವಿತೀಯ ಸ್ಥಾನ ಪಡೆದು ರಾಜ್ಯಮಟ್ಟದ ಕ್ವಾರ್ಟರ್ ಫೈನಲ್ ತಲುಪಿರುತ್ತಾರೆ. ಈ ಸಂತೋಷ ಸಂದರ್ಭಕ್ಕೆ ಕಲ್ಪತರು ವಿದ್ಯಾ ಸಂಸ್ಥೆಯ ಉಪಾಧ್ಯಕ್ಷರುಗಳಾದ ಬಾಗೇಪಳ್ಳಿ ನಟರಾಜರವರು, ಟಿ.ಎಸ್ ಬಸವರಾಜುರವರು, ಖಜಾಂಚಿ ಟಿ.ಎಸ್ ಶಿವಪ್ರಸಾದ, ಕಾರ್ಯದರ್ಶಿ ಟಿ.ಯು ಜಗದೀಶಮೂರ್ತಿ ಹಾಗು ಕಲ್ಪತರು ತಾಂತ್ರಿಕ ಮಹಾವಿದ್ಯಾಲಾಯ ಪ್ರಾಂಶುಪಾಲರು, ಕ್ರೀಡಾ ಸಮಿತಿ ಸದಸ್ಯರು ಮತ್ತು ದೈಹಿಕ ಶಿಕ್ಷಣ ನಿರ್ದೇಶಕ ಜಯಂತ್. ಎಂ.ಎಸ್ ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಖಜಾಂಚಿ ಟಿ.ಎಸ್ ಶಿವಪ್ರಸಾದರವರು ಮಾತನಾಡುತ್ತಾ ನಮ್ಮ ಸಂಸ್ಥೆಯು ಈ ಹಿಂದೆಯು ಕ್ರೀಡೆಗೆ ಪ್ರೋತ್ಸಾಹ ನೀಡಿದೆ ಇನ್ನು ಮುಂದೆಯೂ ಕ್ರೀಡೆಗೆ ಇನ್ನೂ ಹೆಚ್ಚಿನ ಪ್ರೋತ್ಸಾಹ ನೀಡುವುದಾಗಿ ತಿಳಿಸಿದರು. ಆದರೆ ವಿದ್ಯಾರ್ಥಿ ವಿದ್ಯಾರ್ಥಿನಿಯರುಗಳು ದೈಹಿಕ ಚಟುವಟಿಕೆಗಳಲ್ಲಿ ನಿರತರಾಗುವುದು ತುಂಬಾ ಕಡಿಮೆಯಾಗಿದೆ. ಪ್ರತಿ ದಿನದಲ್ಲಿ ಕನಿಷ್ಠ 2 ಗಂಟೆಗಳ ಕಾಲ ಯಾವುದೇ ದೈಹಿಕ ಚಟುವಟಿಕೆಗಳಿಗೆ ಸಮಯ ಮೀಸಲಿಡಿ, ಇದು ನಿಮ್ಮ ಜೀವನಶೈಲಿಯನ್ನು ಬದಲಿಸುತ್ತದೆ ಹಾಗೂ ಇದು ನಿಮಗೆ ಅದ್ಬುತ ಭವಿಷ್ಯ ರೂಪಿಸಿ ಕೊಡುತ್ತದೆ ಎಂದು ಅವರು ತಿಳಿಸಿದರು. ನಂತರ ದೈಹಿಕ ಶಿಕ್ಷಣ ನಿರ್ದೇಶಕ ಜಯಂತ್ ಎಂ.ಎಸ್ ಮಾತನಾಡುತ್ತಾ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಅಂತರ ಕಾಲೇಜು ಕೇಂದ್ರ ಕರ್ನಾಟಕ ವಿಭಾಗದ ಹಾಗು ರಾಜ್ಯಾಮಟ್ಟದ ಹಗ್ಗಜಗ್ಗಾಟ ಪುರುಷರ ಪಂದ್ಯಾವಳಿಯಲ್ಲಿ ವಿದ್ಯಾರ್ಥಿಗಳು ದ್ವಿತಿಯ ಸ್ಥಾನ ಪಡೆದು ರಾಜ್ಯಮಟ್ಟದಲ್ಲಿ ಕ್ವಾರ್ಟರ್ ಫೈನಲ್ ತಲುಪಿರುತ್ತಾರೆ. ಈ ಸಂದರ್ಭಕ್ಕೆ ಮೂಲ ಕಾರಣಕರ್ತರು ನಮ್ಮ ಕಲ್ಪತರು ವಿದ್ಯಾ ಸಂಸ್ಥೆಯ ನಿರ್ವಹಣ ಪದಾದಿಕಾರಿಗಳು, ಪ್ರಾಂಶುಪಾಲರು, ಕ್ರೀಡ ಸಮಿತಿ, ಕಲ್ಪತರು ತಾಂತ್ರಿಕ ಮಹಾವಿದ್ಯಾಲಾಯ ಎಲ್ಲಾ ವಿಭಾಗದ ಮುಖ್ಯಸ್ಥರುಗಳು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿ ವಿದ್ಯಾರ್ಥಿನಿಯರುಗಳ ಎಲ್ಲರ ಸಹಕಾರದಿಂದ ಸಾದ್ಯವಾಗಿದೆ ಎಂದರು.

# ವಾತಾಯನ್ ಸಂಗಮಕ್ಕೆ ಚಾಲನೆ



**ಬೆಂಗಳೂರು:** ಜೈನ್ ವಿಶ್ವವಿದ್ಯಾಲಯದ ಉಪಕುಲಪತಿ ಡಾ. ರಾಜ್ ಸಿಂಗ್ ಅವರ ಉದ್ಘಾಟನಾ ನುಡಿ ಅಲ್ಲಿ ಬನಾರಸ್ ಲಿಟ್ ಫೆಸ್ಟ್ ಭಾರತದ ಶ್ರೀಮಂತ ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ಪರಂಪರೆಯನ್ನು ಆಚರಿಸುವ ವೇದಿಕೆಯಾಗಿದೆ. ಇದು ಚಿಂತಕರು, ಬರಹಗಾರರು, ಕಲಾವಿದರು ಮತ್ತು ಪ್ರದರ್ಶಕರನ್ನು ಅರ್ಥಪೂರ್ಣ ಸಂಭಾಷಣೆ ಮತ್ತು ಕಲಾತ್ಮಕ ಅಭಿವ್ಯಕ್ತಿಯಲ್ಲಿ ತೊಡಗಿಸಿಕೊಳ್ಳಲು, ಸಾಂಸ್ಕೃತಿಕ ವಿನಿಮಯ ಮತ್ತು ಸಹಯೋಗವನ್ನು ಉತ್ತೇಜಿಸುತ್ತದೆ. ವಿಶ್ವ ಕುಟುಂಬಿಯಾಗುವಲ್ಲಿ ಸದೃಢ ಭಾಷಾ ಬಾಂಧವ್ಯ ಅಗತ್ಯ, ಎಂದು ತಿಳಿಸಿದರು. ಮಾರ್ಚ್ ಮಾಹೆಯಲ್ಲಿ ನಡೆಯುವ ಬಹು ನಿರೀಕ್ಷಿತ ಪ್ರತಿಷ್ಠಿತ ಬನಾರಸ್ ಲಿಟ್ ಫೆಸ್ಟ್ , ಬೆಂಗಳೂರಿನ ಜೈನ್ (ಡೀಮ್ಡ್–ಟು–ಬಿ ಯೂನಿವರ್ಸಿಟಿ) ಸಹಯೋಗದಲ್ಲಿ ಆಯೋಜಿಸಲಾದ ಕಾರ್ಯಕ್ರಮದಲ್ಲಿ ಪ್ರಸಿದ್ಧ ವಿದ್ವಾಂಸರು, ಲೇಖಕರು, ಕಲಾವಿದರು ಪಾಲ್ಗೊಂಡಿದ್ದರು. ಸಮಾರಂಭದಲ್ಲಿ ಬನಾರಸ್ ಲಿಟ್ ಫೆಸ್ಟ್ ಆಯೋಜಕರಾದ ಬ್ರಿಜೇಶ್ ಸಿಂಗ್ ರವರನ್ನು ಮೈಸೂರಿನ ಸಾಂಪ್ರದಾಯಿಕ ಪೇಟೆ ತೊಡಿಸಿ ಸನ್ಮಾನಿಸಲಾಯಿತು ಎಂದು ಭಾಷಾ ನಿಕಾಯದ ಡೀನ್ ಪ್ರೊ. ರಜನಿ ಜೈರಾಮ್ ತಿಳಿಸಿದರು. ಕರ್ನಾಟಕ ಶೈಲಿಯಲ್ಲಿ ದೀಪ ಬೆಳಗಿಸುವ ಮೂಲಕ ಆರಂಭವಾಗಿ ನಿಶಾಂತ್ ಜೀ ಅವರ ಭಾವಪೂರ್ಣ ಭಜನೆ ನಡೆಯಿತು.

# ರಾಜ್ಯಶಾಸ್ತ್ರ ಉಪನ್ಯಾಸಕರ ಕಾರ್ಯಾಗಾರ, ಕೈಪಿಡಿ ಬಿಡುಗಡೆ



**ಮೈಸೂರು:** ಮೈಸೂರು ಜಿಲ್ಲೆ ರಾಜ್ಯಶಾಸ್ತ್ರ ಪ್ರಾಂಶುಪಾಲರ ಮತ್ತು ಉಪನ್ಯಾಸಕರ ವೇದಿಕೆ ವತಿಯಿಂದ ರಾಜ್ಯಶಾಸ್ತ್ರ ಉಪನ್ಯಾಸಕರ ಕಾರ್ಯಾಗಾರ ಮತ್ತು ಕೈಪಿಡಿ ಬಿಡುಗಡೆ ಸಮಾರಂಭವು ಜೆಎಲ್‌ಬಿ ರಸ್ತೆಯಲ್ಲಿರುವ ಮಹಾರಾಜ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಇಂದು (ಡಿ.14) ನೆರವೇರಿತು.. ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ ಮಾನಸ ಗಂಗೋತ್ರಿ ರಾಜ್ಯಶಾಸ್ತ್ರ ವಿಭಾಗದ ವಿಶ್ರಾಂತ ಪ್ರಾಧ್ಯಾಪಕರಾದ ಡಾ.ಹೆಚ್. ಎಂ.ರಾಜಶೇಖರ ಅವರು ಮಾತನಾಡಿ, ಶಿಕ್ಷಕನಾದವನಿಗೆ ಬದ್ಧತೆ ಬಹಳ ಮುಖ್ಯ. ವಿದ್ಯಾರ್ಥಿಗಳೊಂದಿಗೆ ಒಡನಾಟ ಹಾಗೂ ಕಲಿಕೆಯಲ್ಲಿ ಪೂರಕ ವಾತಾವರಣವನ್ನು ನಿರ್ಮಿಸುವವನೇ ನಿಜವಾದ ಶಿಕ್ಷಕ. ಪ್ರಸ್ತುತ ದಿನಗಳಲ್ಲಿ ವಿದ್ಯಾರ್ಥಿಗಳ ಮನಸ್ಸನ್ನು ಕೇಂದ್ರೀಕರಿಸುವುದೇ ಒಂದು ಸವಾಲಿನ ಕೆಲಸವಾಗಿದೆ. ಪದವಿ ಪೂರ್ವ ಹಂತದಲ್ಲಿ ವಿದ್ಯಾರ್ಥಿಗಳ ಮನಸ್ಸು ಚಂಚಲತೆಯಿಂದ ಕೂಡಿದ್ದು, ಅದನ್ನು ಉಪನ್ಯಾಸಕರಾದವರು ತರಗತಿಯಲ್ಲಿ ಹತೋಟಿಗೆ ತಂದು ಮನ ಮುಟ್ಟುವಂತೆ ಬೋಧಿಸಿಸಬೇಕು. ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ಸಹಕಾರವಾಗಬೇಕೆಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆ ಪರೀಕ್ಷಾ ವಿಭಾಗದ ಜಂಟಿ ನಿರ್ದೇಶಕರಾದ ಮಹಾಲಿಂಗಯ್ಯ ಸಿ.ಎಂ. ಅವರು ರಾಜ್ಯಶಾಸ್ತ್ರ ಉಪನ್ಯಾಸಕರ ಕೈಪಿಡಿ ಬಿಡುಗಡೆ ಮಾಡಿ, ಮಾತನಾಡಿ, ಫಲಿತಾಂಶ ಹೆಚ್ಚಿಸುವಲ್ಲಿ ಕೈಪಿಡಿ ಅತ್ಯಂತ ಉಪಯುಕ್ತ. ಎಲ್ಲಾ ಅಧ್ಯಾಪಕರೂ ಕೈಪಿಡಿಯಲ್ಲಿರುವ ಅಂಶಗಳನ್ನು ವಿದ್ಯಾರ್ಥಿಗಳಿಗೆ ತಲುಪಿಸುವಲ್ಲಿ ಕಾರ್ಯೋನ್ಮುಖರಾಗಬೇಕೆಂದು ಕರೆ ನೀಡಿ, ಮುಂಬರುವ ವಾರ್ಷಿಕ ಪರೀಕ್ಷೆಗಳಲ್ಲಿ ಹೆಚ್ಚು ಫಲಿತಾಂಶ ನೀಡುವಲ್ಲಿ ಶ್ರಮ ವಹಿಸಬೇಕೆಂದು ಅಭಿಪ್ರಾಯಿಸಿದರು.

ಕಾರ್ಯಕ್ರಮದ ಉದ್ಘಾಟನೆಯನ್ನು ಪದವಿ ಪೂರ್ವ ಶಿಕ್ಷಣ ಇಲಾಖೆಯ ಮೈಸೂರು ಜಿಲ್ಲಾ ಉಪನಿರ್ದೇಶಕರಾದ ಮರಿಸ್ವಾಮಿ ಎಂ. ಅವರು ನೆರವೇರಿಸಿ, ಮಾತನಾಡಿ, ಉತ್ಸಾಹ, ಕ್ರಿಯಾಶೀಲತೆ, ಕಲ್ಪನಾಶಕ್ತಿಯನ್ನು ಪ್ರಸ್ತುತ ವಿದ್ಯಾರ್ಥಿಗಳಲ್ಲಿ ಮೂಡಿಸುವಂತೆ ಉಪನ್ಯಾಸಕ ವೃಂದ ಕೈಜೋಡಿಸಬೇಕೆಂದು ತಿಳಿಸಿ, ಪ್ರತಿಯೊಬ್ಬ ಉಪನ್ಯಾಸಕರೂ ಇಂತಹ ವಿಶೇಷ ಕಾರ್ಯಾಗಾರಗಳಲ್ಲಿ ಭಾಗವಹಿಸಿದಾಗ ಹೆಚ್ಚು ಹೆಚ್ಚು ವಿಷಯ ಜ್ಞಾನ ಪಡೆದುಕೊಳ್ಳಬಹುದೆಂದು ತಿಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ, ಮಾತನಾಡಿದ ರಾಜ್ಯಶಾಸ್ತ್ರ ಉಪನ್ಯಾಸಕರ ವೇದಿಕೆ ಅಧ್ಯಕ್ಷ ಪಶುಪತಿ ಎನ್.ಎಸ್. ಅವರು ಒತ್ತಡದ ಬದುಕಿನಲ್ಲಿ ವಿದ್ಯಾರ್ಥಿಗಳಿಗೆ ಪರೀಕ್ಷಾ ದೃಷ್ಟಿಯಿಂದ ಪ್ರಮುಖವಾದ ಅಂಶಗಳನ್ನು ಒದಗಿಸಿಕೊಡುವುದು ಸೂಕ್ತ. ರಾಜಕೀಯ ಪ್ರವೇಶ ಮಾಡುವವರಿಗೆ ರಾಜ್ಯಶಾಸ್ತ್ರ ಅಧ್ಯಯನ ಒಂದು ಅಡಿಪಾಯವಾಗಲಿದೆ. ವಿಷಯಜ್ಞಾನ ಹೆಚ್ಚಿದಂತೆ ವಿದ್ಯಾರ್ಥಿಗಳು ಜೀವನದಲ್ಲಿ ಬೆಳವಣಿಗೆಯನ್ನು ಕಾಣಬಹುದೆಂದು ತಿಳಿಸಿದರು. ವೇದಿಕೆಯಲ್ಲಿ ಮಹಾರಾಜ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಉದಯಶಂಕರ್, ತಿ.ನರಸೀಪುರ ತಲಕಾಡು ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀಮತಿ ನಾಗರತ್ನಮ್ಮ ಬಿ., ವೇದಿಕೆಯ ಕಾರ್ಯದರ್ಶಿ ಶಿವರಾಜ್, ಖಜಾಂಚಿ ತರಣಿಕುಮಾರ್ ಎ.ಸಿ. ಹಾಗೂ ಮುಂತಾದವರು ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ಈ ವರ್ಷ ನಿವೃತ್ತಿ ಹೊಂದಿದ ಪ್ರಾಂಶುಪಾಲರು ಹಾಗೂ ಉಪನ್ಯಾಸಕರಾದ ಜಗದೀಶ್, ಪುಟ್ಟಸ್ವಾಮಿ ಬಿ., ಪುಟ್ಟಸ್ವಾಮಿ, ದೇವರ ಬೈಯಣ್ಣ ಅವರನ್ನು ಸನ್ಮಾನಿಸಿ, ಗೌರವಿಸಲಾಯಿತು.

## ಸಿಸಿ ರಸ್ತೆಗೆ ಚಪಡಿ ಕಲ್ಲುಗಳನ್ನು ಅಡ್ಡಗಟ್ಟಿ ತೊಂದರೆ

**ಕೋಲಾರ:** ಜಿಲ್ಲೆಯ ಮಾಲೂರು ತಾಲ್ಲೂಕಿನ ರಾಜೇನಹಳ್ಳಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ತಿಪ್ಪಸಂದ್ರ ಗ್ರಾಮದಲ್ಲಿ ಸಿಸಿ ರಸ್ತೆಗೆ ಚಪ್ಪಡಿ ಕಲ್ಲುಗಳನ್ನು ಅಡ್ಡಗಟ್ಟಿ ಗ್ರಾಮಸ್ಥರು ಓಡಾಡಲು ತೊಂದರೆ ಮಾಡಿರುವ ಘಟನೆ ನಡೆದಿದೆ. ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಗಮನಕ್ಕೆ ತಂದರೂ ಸಹ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ ಮೊದಲು ರಸ್ತೆಗೆ ಮೂರಡಿ ಜಾಗವನ್ನು ಬಿಡಿಸಿ ನಂತರದಲ್ಲಿ ಯವಕಾರಣಕ್ಕೋ ತಿಳಿದಿಲ್ಲ ಇಂದು ಪೂರ್ತಿ ಕಾಪೌಂಡ್ ಕಟ್ಟಿ ತೊಂದರೆ ನೀಡಲಾಗುತ್ತಿದೆ . ಪೊಲೀಸ್ ಠಾಣೆಗೂ ದೂರು ನೀಡಿದರು ಸ್ಪಂದಿಸುತ್ತಿಲ್ಲ ಪಿಡಿ ಒ ನೋಟೀಸ್ ನೀಡಿದರೆ ನಾವು ತೆರವು ಗೊಳಿಸುತ್ತೇವೆಂಬ ಉತ್ತರ ನೀಡಿರುತ್ತಾರೆ .ಇನ್ನು ಮಾಲೂರು ತಾಲ್ಲೂಕು ತಹಸೀಲ್ದಾರ್ ರಮೇಶ್ ಅವರು ಗ್ರಾಮಕ್ಕೆ ಭೇಟಿ ನೀಡಿ ವಿಚಾರಣೆ ಮಾಡಿದಾಗ ಸರಿಯಾದ ಉತ್ತರ ನೀಡದೆ ಅವರಿಲ್ಲ ಇವರಿಲ್ಲ ಬಂದಾಗ ಮಾತಾಡ್ತೀವಿ ನಾವು ಮಾತ್ರ ರಸ್ತೆ ಮೇಲೆ ಕಟ್ಟಿದ್ದಿವಾ ಬೇರೆ ಯಾರು ಕಟ್ಟಿಲ್ಲವಾ ಎಂಬ ರೀತಿ ಬೇಜಾವಬ್ದಾರಿ ಮಾತುಗಳನ್ನು ಆಡುತ್ತಾರೆ. ನಕಾಶೆಯಲ್ಲಿರುವ ಈ ರಸ್ತೆ ತಿಪ್ಪಸಂದ್ರ ಗ್ರಾಮದಿಂದ ಉಪ್ಪಾರಹಳ್ಳಿ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಇದು ಗ್ರಾಮದಲ್ಲಿ ಕೆಲವರು ಈ ರಸ್ತೆ ನಮ್ಮ ಸರ್ವೆ ನಂಬರಿಗೆ ಸೇರಿದೆ ಈ ರಸ್ತೆ ಜಾಗ ನಮ್ಮದು ಎಂದು ಕ್ಯಾತೆ ತೆಗದಿರುವ ಕಾರಣ ಗ್ರಾಮಸ್ಥರಿಗೆ ತೊಂದರೆಯಾಗಿದೆ. ಅರ್ಧ ಜಾಗ ಗ್ರಾಮಠಾಣೆಗೆ ಸೇರಿದ್ದು ಉಳಿದ ಅರ್ಧ ಭಾಗ ಸರ್ವೆನಂಬರಿಗೆ ಸೇರಿರುತ್ತದೆ ಸಂಬಂಧಪಟ್ಟ ಯಾವ ಅಧಿಕಾರಿಗಳು ಕ್ರಮ ಕೈಗೊಳ್ಳುತ್ತಿಲ್ಲವೆಂದರು.ನಾವು ನಮ್ಮ ಒಬ್ಬರ ಹಿತಕ್ಕಾಗಿ ಹೋರಾಟ ಮಾಡುತ್ತಿಲ್ಲ. ಗ್ರಾಮಸ್ಥರ ಅನುಕೂಲಕ್ಕಾಗಿ ಹೋರಾಟ ಮಾಡುತ್ತಿದ್ದೇವೆ. ಸಂಬಂಧಪಟ್ಟ ಅಧಿಕಾರಿಗಳು ,ಜನಪ್ರತಿನಿದಿಗಳು ಇತ್ತ ಗಮನಹರಿಸಿ ಸಮಸ್ಯೆ ಬಗೆಹರಿಸಲಿ ಎಂದರು. ಈ ಸಂದರ್ಭದಲ್ಲಿ ಗ್ರಾಮದ ಕುಮಾರ್, ಗೋವಿಂದರಾಜು ,ಗಣೇಶ್ವೆರುಮಾಳ್ ಮತ್ತು ಇತರರಿದ್ದರು .

## ಮುದುವತ್ತಿ ಗ್ರಾಮದಲ್ಲಿ ವಿಶೇಷ ವಿಜೃಂಭಣೆ ಹನುಮಜಯಂತಿ

**ಕೋಲಾರ:** ವಕ್ಕಲೇರಿ ಹೋಬಳಿ ವ್ಯಾಪ್ತಿಯ ಮುದುವತ್ತಿ ಗ್ರಾಮದಲ್ಲಿ ಶ್ರೀ ವೀರಾಂಜನೇಯ ಸ್ವಾಮಿ ದೇವಸ್ಥಾನವಿದ್ದು ಪ್ರತಿವರ್ಷವೂ ಸಹ ಹನುಮ ಜಯಂತಿಯನ್ನು ವಿಜೃಂಭಣೆಯಿಂದ ಆಚರಣೆ ಮಾಡುತ್ತಾ ಬಂದಿರುತ್ತಾರೆ . ಗ್ರಾಮಸ್ಥರು ಮಾತನಾಡಿ ಹನುಮ ಜಯಂತಿಯಂದು ದೇವರಿಗೆ ವಿಶೇಷ ಪೂಜೆ ಮತ್ತು ಹೂವಿನ ಅಲಂಕಾರ ಮಾಡುವ ಜೊತೆಗೆ ದೇವಸ್ಥಾನಕ್ಕೆ ಬರುವ ಭಕ್ತಾದಿಗಳಿಗೆ ಪ್ರಸಾದ ವಿನಿಯೋಗ ಹಾಗೂ ಗ್ರಾಮದ ಪ್ರಮುಖ ಬಿದಿಗಳಲ್ಲಿ ಮೆರವಣಿಗೆ ನಡೆಸುತ್ತೇವೆ. ರಾತ್ರಿ 11ಅಥವಾ 12 ಘಂಟೆ ತನಕ ಮೆರವಣಿಗೆ ನಡೆಯುತ್ತದೆ. ಪ್ರತಿ ಮನೆಯ ಬಳಿ ಮಹಿಳೆಯರು ನೀರಿನಿಂದ ರಸ್ತೆಯನ್ನು ತೊಳೆದು ರಂಗೋಲಿ ಹಾಕಿ ದೇವರಿಗೆ ಸ್ವಾಗತ ಕೋರಿ ಪೂಜೆ ಮಾಡಿಸುತ್ತಾರೆ. ರಾತ್ರಿ ಸಮಯ ಡಿಜೆ ಇರುವ ಕಾರಣ ಯುವಕರು ಮಕ್ಕಳು ಹೆಚ್ಚಾಗಿ ಆಗಮಿಸಿ ಕುಣಿದು ಕುಪ್ಪಳಿಸುತ್ತಾರೆ. ಗ್ರಾಮಸ್ಥರ ಸಹಕಾರದೊಂದಿಗೆ 25 ವರ್ಷಗಳಿಂದ ಪೂಜೆ ಮಾಡುತ್ತ ಬಂದಿದ್ದೇವೆ. ಜೊತೆಗೆ ದೇವರ ಆಶೀರ್ವಾದವೂ ಈ ಗ್ರಾಮದ ಮೇಲಿದೆ ಎಂದು ಭರತ್ ತಿಳಿಸಿದ್ದಾರೆ.ಅರ್ಚಕರು ಮಾತನಾಡಿ ಪ್ರತಿ ವಾರವು ದೇವಸ್ಥಾನದಲ್ಲಿ ಪೂಜೆ ಇರುತ್ತದೆ. ಹಬ್ಬದ ದಿನಗಳಲ್ಲಿ ವಿಶೇಷ ಪೂಜೆ ಹಮ್ಮಿಕೊಳ್ಳುತ್ತೇವೆ. ಗ್ರಾಮದವರು ಮತ್ತು ಸುತ್ತಮುತ್ತಲಿನ ಗ್ರಾಮಸ್ಥರು ಆಗಮಿಸಿ ಪೂಜೆ ಸಲ್ಲಿಸುತ್ತಾರೆ. ಇಂದು 500 ಕ್ಕೂ ಹೆಚ್ಚಿನ ಭಕ್ತಾದಿಗಳುಆಗಮಿಸಿ ದೇವರ ದರ್ಶನ ಪಡೆದು ಪೂಜೆ ಮಾಡಿಸಿದ್ದಾರೆ ಎಂದರು.



## ಶ್ರೀ ಕ್ಷೇತ್ರಗಳ ಅಭಿವೃದ್ಧಿಯ ನನ್ನ ಕನಸು:ಸಚಿವ ಚೆಲುವರಾಯಸ್ವಾಮಿ

**ನಾಗಮಂಗಲ:** ಗ್ರಾಮೀಣ ಪ್ರದೇಶಗಳ ರಸ್ತೆಗಳ ಅಭಿವೃದ್ಧಿ ಕ್ಷೇತ್ರಗಳ ಅಭಿವೃದ್ಧಿಯ ಜೊತೆಯಲ್ಲಿ ಶ್ರೀ ಕ್ಷೇತ್ರಗಳ ಅಭಿವೃದ್ಧಿಯ ಕನಸು ನನ್ನದಾಗಿದೆ ಎಂದು ಸಚಿವ ಚೆಲುವರಾಯಸ್ವಾಮಿ ಅವರು ತಿಳಿಸಿದರು. ಅವರು ಇಂದು ನಾಗಮಂಗಲ ತಾಲೂಕು ದೇವಲಾಪುರ ಹೋಬಳಿಯ ಶ್ರೀ ಕ್ಷೇತ್ರ ಕೋಟೆ ಬೆಟ್ಟದಲ್ಲಿ ಶ್ರೀ ಕಂಬದ ನರಸಿಂಹಸ್ವಾಮಿ ಯಾತ್ರಿ ನಿವಾಸ ಕಟ್ಟಡದ ಉದ್ಘಾಟನೆ ಮಾಡುತ್ತಾ ಮಾತನಾಡಿದರು.2016ರಲ್ಲಿ ಯಾತ್ರಿ ನಿವಾಸದ ಕಟ್ಟಡದ ಶಂಕುಸ್ಥಾಪನೆ ನನ್ನ ಅಧಿಕಾರ ಅವಧಿಯಲ್ಲಿ ನಡೆದಿದ್ದು ತದನಂತರ ಬಂದಂತಹ ಜನಪ್ರತಿನಿಧಿಗಳು 2024ರವರೆಗೂ ಯಾವ ತರಹದ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡದೆ ಇದ್ದು2024 ರಲ್ಲಿ ಈ ಕಟ್ಟಡದ ಲೋಕಾರ್ಪಣೆ ಮಾಡಿರುವುದು ನನ್ನ ಅವಧಿಯಲ್ಲಿ ಎಂಬುದು ಕ್ಷೇತ್ರದ ಜನರು ಅರ್ಥ ಮಾಡಿಕೊಳ್ಳಬೇಕು.ಮುಂದೆ ಈ ಕ್ಷೇತ್ರದ ಅಭಿವೃದ್ಧಿಗೆ ಹಾಗೂ ಯಾತ್ರಿ ನಿವಾಸದ ಕಟ್ಟಡವನ್ನು ಬಳಸಿಕೊಳ್ಳಲು ಟ್ರಸ್ಟಿಗೆ ಕಾನೂನಾತ್ಮಕವಾಗಿ ಬಳಸಿಕೊಳ್ಳುವಂತೆ ಈ ಸಂದರ್ಭದಲ್ಲಿ ತಿಳಿಸಿದರು.ಈ ಭಾಗದ ರಸ್ತೆಗಳು ಮುಂದಿನ ದಿನಗಳಲ್ಲಿ ವ್ಯವಸ್ಥಿತವಾಗಿ ಮಾಡಿಸುವ ಭರವಸೆ ಹಾಗೂ ಜನತೆ ತಾಳ್ಮೆ ವಹಿಸುವ ಮುಖಾಂತರ ನಮ್ಮಗಳಿಗೂ ಸಹಕಾರ ನೀಡುವಂತೆ ಈ ಸಂದರ್ಭದಲ್ಲಿ ತಿಳಿಸಿದರು.ದೇವಲಾಪುರ ಹೋಬಳಿಯ ರಸ್ತೆಗಳ ಅಭಿವೃದ್ಧಿಗೆ ಸುಮಾರು 30 ಕೋಟಿ ರೂ ಅನುದಾನ ನೀಡಿದ್ದು ರಸ್ತೆಗಳ ಕಾಮಗಾರಿಗಳು ಪರಿಪೂರ್ಣಗೊಂಡ ನಂತರ ಬಾಕಿ ರಸ್ತೆಗಳಿಗೆ ಮಂಜೂರು ಮಾಡುವುದಾಗಿ ತಿಳಿಸಿದರು. ಇದೇ ಸಂದರ್ಭದಲ್ಲಿ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು. ತಟ್ಟಹಳ್ಳಿ ನರಸಿಂಹಮೂರ್ತಿ. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಾಜೇಶ್ ಗ್ರಾಮಸ್ಥರು. ಗ್ರಾಮ ಪಂಚಾಯತಿ ಸದಸ್ಯರುಗಳು ದೇವಾಲಯ ಆಡಳಿತ ಮಂಡಳಿಯ ಸದಸ್ಯರುಗಳು ಹಾಜರಿದ್ದರು.

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಚಾಮರಾಜನಗರ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ಸಹಾಯಕ ನಿರ್ದೇಶಕರ ಕಛೇರಿ, ನಂ : 118, ಮೊದಲನೇ ಮಹಡಿ, ಜಿಲ್ಲಾಡಳಿತ ಭವನ, ಚಾಮರಾಜನಗರ.
ದೂರವಾಣಿ : 08226–224932 adysschamarajanagara@gmail.com
ಸಂ:ಜಿಯುಸಕ್ರೀ ಇಚಾ/2024–25 ದಿನಾಂಕ: 05–12–2024
–: ಟೆಂಡರ್ ಪ್ರಕಟಣೆ :–
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ, ಚಾಮರಾಜನಗರ ಜಿಲ್ಲೆಯ ಸಂತೇಮರಹಳ್ಳಿಯ ಆರ್ಚರಿ ಮತ್ತು ಫೆನ್ಸಿಂಗ್ ಕ್ರೀಡಾವಸತಿ ನಿಲಯದ ಕ್ರೀಡಾಪಟುಗಳಿಗೆ ಊಟೋಪಹಾರ ಸರಬರಾಜು ಮಾಡಲು ಟೆಂಡರ್ ಆಹ್ವಾನಿಸಿಲಾಗಿದ್ದು, ಆಸಕ್ತ ಸಂಸ್ಥೆಗಳು ಆನ್‌ಲೈನ್ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in) ಮೂಲಕ ದಿನಾಂಕ:20–12–2024ರೊಳಗೆ ಟೆಂಡರ್ ಸಲ್ಲಿಸಬಹುದು. ಈ ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ ರೂ. 43,87,500=00ಗಳು ಮತ್ತು ಇ.ಎಂ.ಡಿ ಮೊತ್ತ ರೂ, 88,000=00 ಗಳು.
ಸಂ:ವಾಸಾಸಂಇ: ಚಾನಗರ: 473:2024–25
ಸಹಾಯಕ ನಿರ್ದೇಶಕರು,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ,
ಚಾಮರಾಜನಗರ.

# ಸಂಜೆ ಟಿಪ್ಸ್

## ಅಮೆಜಾನ್ ವಿತರಣಾ ಜಾಲಕ್ಕೆ 10 ಸಾವಿರ ಎಲೆಕ್ಟ್ರಿಕ್ ವಾಹನ



ಅಮೆಜಾನ್ ಭಾರತದಾದ್ಯಂತ ಇರುವ ತನ್ನ ಡೆಲಿವರಿ ವಾಹನಗಳ ಸಮೂಹಕ್ಕೆ 10000ಕ್ಕೂ ಹೆಚ್ಚು ಎಲೆಕ್ಟ್ರಿಕ್ ವಾಹನಗಳನ್ನು ಸೇರಿಸುವ ಗುರಿಯನ್ನು ನಿಗದಿಗಿಂತ ಮೂರು ತಿಂಗಳು ಮೊದಲೇ ತಲುಪಿದೆ. ಎಲೆಕ್ಟ್ರಿಕ್ ವಾಹನಗಳು ಈಗಾಗಲೇ ಮಂಗಳೂರು, ದೆಹಲಿ, ಮುಂಬೈ ಮತ್ತು ಬೆಂಗಳೂರು ಸೇರಿದಂತೆ ದೇಶದ ಉದ್ದಗಲಕ್ಕೂ 500 ನಗರಗಳಲ್ಲಿ ಕಾರ್ಯ ನಿರ್ವಹಿಸುತ್ತಿವೆ.

ಪ್ಯಾರಿಸ್ ಒಪ್ಪಂದಕ್ಕಿಂತ 10 ವರ್ಷಗಳ ಮುಂಚಿತವಾಗಿಯೇ ಅಂದರೆ 2040ರ ವೇಳೆಗೆ ತನ್ನ ಕಾರ್ಯಾಚರಣೆಗಳಲ್ಲಿ ನಿವ್ವಳ ಶೂನ್ಯ ಇಂಗಾಲದ ಹೊರಸೂಸುವಿಕೆಯನ್ನು ಸಾಧಿಸಿ ಪರಿಸರಕ್ಕೆ ನೆರವಾಗುವ ತನ್ನ ಬದ್ಧತೆಯನ್ನು ಪಾಲಿಸುವ ನಿಟ್ಟಿನಲ್ಲಿ ಅಮೆಜಾನ್ ಕಂಪನಿ ಈ ಗುರಿಯನ್ನು ಒಂದು ವರ್ಷಕ್ಕಿಂತ ಮೊದಲೇ ಸಾಧಿಸಿದ್ದು, ಮಹತ್ವದ ಸಾಧನೆ ಮಾಡಿದೆ ಎಂದು ಅಮೆಜಾನ್ ಇಂಡಿಯಾದ ಕಾರ್ಯ ನಿರ್ವಹಣಾ ವಿಭಾಗದ ಉಪಾಧ್ಯಕ್ಷರಾದ ಅಭಿನವ್ ಸಿಂಗ್ ಪ್ರಕಟಣೆಯಲ್ಲಿ ಹೇಳಿದ್ದಾರೆ.

ಹವಾಮಾನ ಒಪ್ಪಂದದ ಪ್ರಕಾರ ಲೇನ್ ಶಿಫ್ಟ್ ಯೋಜನೆಯ ಅಡಿಯಲ್ಲಿ ಕಂಪನಿಯು ಎಲೆಕ್ಟ್ರಿಕ್ ಹೆವಿ ಸರಕು ಸಾಗಾಣಿಕೆ ವಾಹನಗಳ ಪರೀಕ್ಷೆಯನ್ನು ಆರಂಭಿಸಿದೆ. ಈಗಾಗಲೇ 350 ಕಿಮೀ ಉದ್ದದ ಬೆಂಗಳೂರು- ಚೆನ್ನೈ, ಹೈದ್ರಾಬಾದ್ ಸುದೀರ್ಘ ರೇಂಜ್ ನ ಎಲೆಕ್ಟ್ರಿಕ್ ಹೆವಿ ಟ್ರಕ್ ಗಳನ್ನು ಪರೀಕ್ಷೆ ಆರಂಭಿಸಿರುವ ಮೊದಲ ಇ- ಕಾಮರ್ಸ್ ಕಂಪನಿ ಎಂದು ಅಮೆಜಾನ್ ಗುರುತಿಸಿಕೊಂಡಿದೆ. ಸುದೀರ್ಘ ರೇಂಜ್ ನ ವಿದ್ಯುತ್ ಸರಕು ಸಾಗಣೆಯ ವಾಹನಗಳ ಸಾಮರ್ಥ್ಯವನ್ನು ತಿಳಿಯುವ ಈ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಅಮೆಜಾನ್, ಅಶೋಕ್ ಲೇಲ್ಯಾಂಡ್, ಬಿಲಿಯನ್- ಇ ಮತ್ತು ಚಾರ್ಜ್ ಝೋನ್ ಸೇರಿದಂತೆ ಹಲವು ಉದ್ಯಮ ಸಂಸ್ಥೆಗಳು ಜೊತೆಯಾಗಿವೆ ಎಂದು ವಿವರಿಸಿದ್ದಾರೆ.

## ವೆಜಿಟೇಬಲ್ ಪಲಾವ್

### ಪಾಕ ಶಾಲೆ



### ಬೇಕಿರುವ ಸಾಮಗ್ರಿ

1 ಕಪ್ ಬಾಸ್ಮತಿ ಅಕ್ಕಿ, 1 ಇಂಚು ದೊಡ್ಡದಿರುವಷ್ಟು ಚಕ್ಕೆ, ಅರ್ಧ ಚಮಚ ಜಜ್ಜಿದ ಕಾಳುಮೆಣಸು, 1 ಚಮಚ ಖಾರದ ಪುಡಿ, 2 ಕಪ್ ನೀರು, 1 ಈರುಳ್ಳಿ (ಉದ್ದುದ್ದವಾಗಿ ಕತ್ತರಿಸಿ), 2–3 ಲವಂಗ, 2 ಏಲಕ್ಕಿ, 1 ಚಮಚ ಉಪ್ಪು, 1 ಚಮಚ ಅಡುಗೆ ಎಣ್ಣೆ, ಅರ್ಧ ಕಪ್ ಕ್ಯಾರೆಟ್, ಅರ್ಧ ಕಪ್ ಹೂಕೋಸು, ಅರ್ಧ ಕಪ್ ಬೀನ್ಸ್, ಅರ್ಧ ಕಪ್ ಬಟಾಣಿ, ಅರ್ಧ ಕಪ್ ಬ್ರೊಕೋಲಿ, ಅರ್ಧ ಕಪ್ ಸೋಯಾಬೀನ್ಸ್

### ಮಾಡುವ ವಿಧಾನ

ತಳ ದಪ್ಪವಿರುವ ಸ್ವಲ್ಪ ದೊಡ್ಡ ಪಾತ್ರೆಯನ್ನು ಗ್ಯಾಸ್ ಉರಿ ಮೇಲೆ ಇಡಿ, ಪಾತ್ರೆ ಬಿಸಿಯಾದಾಗ 1–2 ಚಮಚ ಎಣ್ಣೆ ಹಾಕಿ, ಅದರಲ್ಲಿ ಈರುಳ್ಳಿ ಹಾಕಿ ಕಂದು ಬಣ್ಣಕ್ಕೆ ಬರುವವರೆಗೆ ಫ್ರೈ ಮಾಡಿ. ಈರುಳ್ಳಿ ಕಂದು ಬಣ್ಣಕ್ಕೆ ಬರುವಾಗ ಲವಂಗ, ಚಕ್ಕೆ, ಏಲಕ್ಕಿ ಹಾಕಿ. ನಂತರ ಎಲ್ಲಾ ತರಕಾರಿ ಹಾಕಿ ಮಿಕ್ಸ್ ಮಾಡಿ, ತರಕಾರಿ ಬೇಯಲು ತಕ್ಕ ನೀರು ಸೇರಿಸಿ (ಅರ್ಧ ಕಪ್)

ತರಕಾರಿ ಸ್ವಲ್ಪ ಬೆಂದಾಗ, ಉರಿಯನ್ನು ಕಡಿಮೆ ಮಾಡಿ. ಇದೇ ಸಮಯದಲ್ಲಿ ಅಕ್ಕಿಯನ್ನು ತೊಳೆದು ನೀರು ಸೋಸಿ ಇಡಿ.

ತರಕಾರಿ ಮುಕ್ಕಾಲು ಬೆಂದಾಗ ಸೋಯಾ ಹಾಕಿ 2–3 ನಿಮಿಷ ಬೇಯಿಸಿ, ನಂತರ ತೊಳೆದಿಟ್ಟ ಅಕ್ಕಿ ಹಾಕಿ ರುಚಿಗೆ ತಕ್ಕ ಉಪ್ಪು, ಖಾರದ ಪುಡಿ ಹಾಕಿ, ನಿಮಗೆ ಇಷ್ಟವಾದ ಫ್ಲೇವರ್ ಮಸಾಲ ಕೂಡ ಸೇರಿಸಬಹುದು. ಈಗ 2 ಕಪ್ ನೀರು ಹಾಕಿ, ಮಿಕ್ಸ್ ಮಾಡಿ.

ಈಗ ಕಡಿಮೆ ಉರಿಯಲ್ಲಿ ಬೇಯಿಸಿ, ಆಗಾಗ ಸೌಟ್ನಿಂದ ತಿರುಗಿಸುತ್ತಾ ಇರಿ. ಪಲಾವ್ ರೆಡಿಯಾದ ರಾಯತ ಜತೆ ಸವಿಯಿರಿ.

## ಚಳಿಗಾಲದಲ್ಲಿ ಮೂಲಂಗಿ ಸೇವಿಸಿ



ಹೆಲ್ತ್ ಟಿಪ್ಸ್

ಯಾವುದೇ ಸೀಸನ್ನಲ್ಲಿ ದೊರೆಯುವ ಹಣ್ಣು ತರಕಾರಿಗಳನ್ನು ಆ ಸೀಸನ್ನಲ್ಲಿ ಸೇವಿಸಿದರೆ ಆರೋಗ್ಯಕ್ಕೆ ಒಳ್ಳೆಯದು. ಮೂಲಂಗಿ ಈ ಚಳಿಗಾಲದಲ್ಲಿ ಹೇರಳವಾಗಿರುವ ದೊರೆಯುವ ತರಕಾರಿ. ಇದನ್ನು ಸಾಂಬಾರ್, ಸಲಾಡ್, ಚಟ್ನಿ, ಉಪ್ಪಿನಕಾಯಿ, ಕೋಫ್ತಾ, ಜ್ಯೂಸ್ ಸೇರಿದಂತೆ ಇನ್ನಿತರ ಅಡುಗೆಗಳಲ್ಲಿ ಬಳಸಹುದು. ಮೂಲಂಗಿಯನ್ನು ಹಲವು ರೂಪಗಳಲ್ಲಿ ಮತ್ತು ಹಲವು ವಿಧಗಳಲ್ಲಿ ಆಹಾರವಾಗಿ ಸೇವಿಸಬಹುದು. ಈ ಚಳಿಗಾಲದಲ್ಲಿ ದೇಹಕ್ಕೆ ಬೇಕಾಗುವ ಸೂಪರ್ ಫುಡ್ ಎಂದರೆ ಅದು ಮೂಲಂಗಿ. ಇದನ್ನು ತಿಂದರೆ ಆರೋಗ್ಯಕ್ಕೆ ಬಹಳ ಒಳ್ಳೆಯದು. ಇದು ನಿಮ್ಮ ರೋಗನಿರೋಧಕ ಶಕ್ತಿಯನ್ನು ಸುಧಾರಿಸುತ್ತದೆ. ನಿಮ್ಮ ದೇಹದಿಂದ ವಿಷವನ್ನು ತೆಗೆದುಹಾಕುತ್ತದೆ. ವಿಟಮಿನ್ ಸಿ, ವಿಟಮಿನ್ ಬಿ6, ಮೆಗ್ನೀಸಿಯಮ್, ರಂಜಕ, ಕಬ್ಬಿಣ ಮತ್ತು ಕ್ಯಾಲ್ಸಿಯಂನಂತಹ ಪೋಷಕಾಂಶಗಳಲ್ಲಿ ಸಮೃದ್ಧವಾಗಿರುವ ಮೂಲಂಗಿಯನ್ನು ಎಲೆಗಳೊಂದಿಗೆ ಬೇಯಿಸಿ ತಿನ್ನಬೇಕು. ಅಲ್ಲದೆ ಇದು ಕಡಿಮೆ ಕ್ಯಾಲೋರಿಗಳನ್ನು ಹೊಂದಿದೆ, ಆದ್ದರಿಂದ ತೂಕವನ್ನು ನಿಯಂತ್ರಿಸುತ್ತದೆ. ಅಲ್ಲದೆ ಮೂಲಂಗಿಯನ್ನು ತಿನ್ನುವುದು ಜೀರ್ಣಕ್ರಿಯೆಗೆ ಸಹಾಯ ಮಾಡುತ್ತದೆ ಮತ್ತು ಚಯಾಪಚಯವನ್ನು ಸುಧಾರಿಸುತ್ತದೆ.

ಆರೋಗ್ಯತಜ್ಞರು ಮೂಲಂಗಿಯ ಪ್ರಯೋಜನಗಳನ್ನು ಇಲ್ಲಿ ವಿವರಿಸಿದ್ದಾರೆ. ಅಧ್ಯಯನದ ಪ್ರಕಾರ, ಕ್ರೂಸಿಫೆರಸ್ ತರಕಾರಿಗಳು ನೀರಿನೊಂದಿಗೆ ಬೆರೆಸಿದಾಗ ಐಸೊಥಿಯೋಸೈನೇಟ್ಗಳಾಗಿ ಒಡೆಯುವ ಕೆಲವು ಸಂಯುಕ್ತಗಳನ್ನು ಹೊಂದಿರುತ್ತವೆ. ಈ ಐಸೋಥಿಯೋಸೈನೇಟ್ಗಳು ದೇಹವನ್ನು ಕ್ಯಾನ್ಸರ್ –ಉಂಟುಮಾಡುವ ಪದಾರ್ಥಗಳಿಂದ ಶುದ್ಧೀಕರಿಸಲು ಸಹಾಯ ಮಾಡುತ್ತದೆ, ಇದರಿಂದಾಗಿ ಕ್ಯಾನ್ಸರ್ ಗೆಡ್ಡೆಗಳ ಬೆಳವಣಿಗೆಯನ್ನು ತಡೆಯುತ್ತದೆ. ಮೂಲಂಗಿ ಕೂಡಾ ಕ್ರೂಸಿಫೆರಸ್ ತರಕಾರಿಗಳ ವರ್ಗಕ್ಕೆ ಸೇರುತ್ತದೆ. ಇದನ್ನು ತಿನ್ನುವುದರಿಂದ ಕ್ಯಾನ್ಸರ್ ಬರದಂತೆ ತಡೆಯುತ್ತದೆ. ಮೂಲಂಗಿಯ ಪ್ರಬಲವಾದ ಮಧುಮೇಹ–ವಿರೋಧಿ ಗುಣಲಕ್ಷಣಗಳು ಪ್ರತಿರಕ್ಷಣಾ ಪ್ರತಿಕ್ರಿಯೆಯನ್ನು ಉತ್ತೇಜಿಸುತ್ತದೆ, ಗ್ಲೂಕೋಸ್ ಹೀರಿಕೊಳ್ಳುವಿಕೆಯನ್ನು ಹೆಚ್ಚಿಸುತ್ತದೆ, ರಕ್ತದಲ್ಲಿನ ಸಕ್ಕರೆ ಮಟ್ಟವನ್ನು ನಿಯಂತ್ರಿಸುತ್ತದೆ.

ಅಡಿಪೋನೆಕ್ಟಿನ್ ರಕ್ತದಲ್ಲಿನ ಗ್ಲೂಕೋಸ್ ಮಟ್ಟದ ಏರಿಳಿತಕ್ಕೆ ಕಾರಣವಾಗುವ ಹಾರ್ಮೋನ್ ಆಗಿದೆ. ಮೂಲಂಗಿಯು ಅಡಿಪೋನೆಕ್ಟಿನ್ ಅನ್ನು ನಿಯಂತ್ರಿಸುವ ಜೈವಿಕ ಸಕ್ರಿಯ ಸಂಯುಕ್ತಗಳನ್ನು ಹೊಂದಿರುತ್ತದೆ, ಇದು ಗ್ಲೂಕೋಸ್ ಹೋಮಿಯೋಸ್ಟಾಸಿಸ್ ಅನ್ನು ನಿಯಂತ್ರಿಸುವಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ. ಮೂಲಂಗಿಯಲ್ಲಿ ಫೈಬರ್ ಅಂಶ ಹೆಚ್ಚಾಗಿದ್ದು ಜೀರ್ಣಕ್ರಿಯೆಗೆ ಬಹಳ ಉಪಯೋಗವಾಗಿದೆ. ಈ ರೀತಿಯ ಫೈಬರ್ ಕರುಳಿನ ಮೂಲಕ ತ್ಯಾಜ್ಯವನ್ನು ಹೊರಹಾಕಲು ಸಹಾಯ ಮಾಡುತ್ತದೆ. ಇದರಿಂದ ಮಲಬದ್ಧತೆ ಸಮಸ್ಯೆ ಕೂಡಾ ನಿವಾರಣೆಯಾಗುತ್ತದೆ. ಮೂಲಂಗಿಯಲ್ಲಿ ಪೊಟ್ಯಾಸಿಯಮ್ನಲ್ಲಿ ಸಮೃದ್ಧವಾಗಿದೆ, ಇದು ರಕ್ತದೊತ್ತಡದ ಮಟ್ಟವನ್ನು ನಿಯಂತ್ರಿಸುತ್ತದೆ. ಮತ್ತು ಹೃದಯದ ಕಾರ್ಯವನ್ನು ಸೂಕ್ತವಾಗಿ ನಿರ್ವಹಿಸುವಂತೆ ನೋಡಿಕೊಳ್ಳುತ್ತದೆ. ಮೂಲಂಗಿಯಲ್ಲಿರುವ ಆಂಥೋಸಯಾನಿನ್ಗಳು ಎಂಬ ಸಂಯುಕ್ತಗಳು, ರಕ್ತ ಪರಿಚಲನೆ ಸುಧಾರಿಸುತ್ತದೆ ಮತ್ತು ರಕ್ತದೊತ್ತಡವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ.

## ತುಟಿ ಬಣ್ಣ ಕಪ್ಪೆ

### ಬ್ಯೂಟಿ ಟಿಪ್ಸ್



ಪ್ರತಿಯೊಂದು ಹೆಣ್ಣು ತನ್ನ ತುಟಿ ಯಾವುದೇ ಕೃತಕ ಬಣ್ಣಗಳನ್ನು ಬಳಸದೇ ಸುಂದರವಾಗಿ ಗುಲಾಬಿ ಬಣ್ಣದಲ್ಲಿರಬೇಕು ಎಂದು ಹಂಬಲಿಸುತ್ತಾಳೆ. ಆದರೆ ಇಂದೂ ತುಟಿ ಬಣ್ಣ ಕಪ್ಪಾಗುತ್ತುರುವುದುಒಂದು ದೊಡ್ಡ ಸಮಸ್ಯೆಯಾಗಿದೆ. ಆದ್ದರಿಂದ ನೀವೂ ಈ ಸಮಸ್ಯೆಯಿಂದ ಬಳಲುತ್ತಿದ್ದರೇ, ಅದಕ್ಕೆ ಕಾರಣವೇನು? ಹಾಗೂ ನೈಸರ್ಗಿಕವಾಗಿ ಗುಲಾಬಿ ಬಣ್ಣದ ತುಟಿಯನ್ನು ಪಡೆಯಲು ಪರಿಹಾರ ಕ್ರಮಗಳು ಇಲ್ಲಿವೆ. ತುಟಿ ಕಪ್ಪಾಗಲು ಕಾರಣ ಹಾಗೂ ಕಪ್ಪಾಗುವುದನ್ನು ತಪ್ಪಿಸಲು ಕೆಲವೊಂದು ಪರಿಹಾರ ಕ್ರಮಗಳನ್ನು ಚರ್ಮರೋಗ ತಜ್ಞರಾದ ಜಯಶ್ರೀ ಶರದ್ ತಿಳಿಸಿದ್ದಾರೆ. ಅತಿಯಾದ ಧೂಮಪಾನವು ನಿಮ್ಮ ತುಟಿಗಳನ್ನು ಕಪ್ಪಾಗಿಸಲು ಕಾರಣವಾಗಬಹುದು. ಅಲ್ಲದೆ, ಇದು ಚರ್ಮದ ಮೇಲೆ ಕೂಡ ಪರಿಣಾಮ ಬೀರುತ್ತದೆ. ಆದ್ದರಿಂದ ತುಟಿಗಳು ಕಪ್ಪಾಗುವುದನ್ನು ತಪ್ಪಿಸಲು ಆದಷ್ಟು ಧೂಮಪಾನದಿಂದ ದೂರವಿರಿ. ಕೃತಕವಾಗಿ ತುಟಿಗಳಿಗೆ ಬಣ್ಣವನ್ನು ನೀಡುವ ಲಿಪ್ಸ್ಟಿಕ್ ಮುಂತಾದ ಉತ್ಪನ್ನಗಳು ನಿಮ್ಮ ತ್ವಚೆಗೆ ಸರಿಯಾಗಿ ಹೊಂದಿಕೆಯಾಗದ್ದಿದ್ದಾಗ ಅಲರ್ಜಿಗಳು ಉಂಟಾಗುತ್ತದೆ. ಆದ್ದರಿಂದ ಅಲರ್ಜಿಗಳಿಂದ ಕೂಡ ತುಟಿ ಕಪ್ಪಾಗುವ ಸಾಧ್ಯತೆ ಹೆಚ್ಚಿದೆ. ಆದ್ದರಿಂದ ನಿಮ್ಮ ತ್ವಚೆಗೆ ಹೊಂದಿಕೆಯಾಗುವಂತಹ ಉತ್ತಮ ಗುಣಮಟ್ಟದ ಲಿಪ್ಸ್ಟಿಕ್ ಬಳಸಿ. ನಿಮ್ಮ ಚರ್ಮದಂತೆಯೇ, ತುಟಿಗಳು ಕೂಡ ಅತಿಯಾದ ಸೂರ್ಯನ ಶಾಖಕ್ಕೆ ಕಪ್ಪಾಗಬಹುದು. ಆದ್ದರಿಂದ ಮಧ್ಯಾಹ್ನದ ಉರಿ ಬಿಸಿಲಿನಿಂದ ಆದಷ್ಟು ನಿಮ್ಮ ತ್ವಚೆಯನ್ನು ಕಾಪಾಡಿಕೊಳ್ಳಿ.

ನೀವೂ ಬಳಸುವ ಮೌತ್ ಫ್ರೆಶ್ನರ್ಗಳಲ್ಲಿ ಅತಿಯಾಗಿ ರಾಸಾಯನಿಕಗಳನ್ನು ಬಳಸಿರುವುದರಿಂದ ಅದು ನಿಮ್ಮ ಚರ್ಮಕ್ಕೆ ಅಲರ್ಜಿಯನ್ನು ಉಂಟುಮಾಡಬಹುದು, ಇದು ತುಟಿಗಳ ಬಣ್ಣ ಕಪ್ಪಾಗಲು ಕಾರಣವಾಗಬಹುದು. ಆದ್ದರಿಂದ ಆದಷ್ಟು ಉತ್ತಮ ಗುಣಮಟ್ಟದ ಮೌತ್ ಫ್ರೆಶ್ನರ್ಗಳನ್ನು ಖರೀದಿಸಿ.

ಇತ್ತೀಚೆಗೆ ನಿಮ್ಮ ಹಲ್ಲುಗಳು ಹೊಳೆಯುವಂತೆ ಮಾಡುವ ಸಾಕಷ್ಟು ಟೂತ್ಪೇಸ್ಟ್ಗಳು ಮಾರುಕಟ್ಟೆಗಳಲ್ಲಿ ಕಾಣಬಹುದು. ನೀವು ಜಾಹೀರಾತುಗಳಿಗೆ ಮರುಳಾಗಿ ಖರೀದಿಸುವುದ್ದರಿಂದ, ಇದು ನಿಮ್ಮ ದೇಹದ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ಜೊತೆಗೆ ನಿಮ್ಮ ತುಟಿಗೆ ಅಲರ್ಜಿಯನ್ನುಂಟು ಮಾಡುತ್ತದೆ.

## 'ಹ್ಯಾಪಿನೆಸ್ ಪ್ರಾಜೆಕ್ಟ್' ನಡೆಸಲಿದ್ದಾರೆ ಸೆಲೆಬ್ರಿಟಿ ಫರಾಹ್ ಖಾನ್



ರಿಲಯನ್ಸ್ ಡಿಜಿಟಲ್ ಈಗ ಸಕತ್ ಆಗಿರುವ ಕಾರ್ಯಕ್ರಮವೊಂದರ ಜೊತೆಗೆ ಬರುತ್ತಿದೆ. ಅದರ ಹೆಸರು ಹ್ಯಾಪಿನೆಸ್ ಪ್ರಾಜೆಕ್ಟ್. ತಾವು ಬಯಸುವಂಥ ಕೆಲಸ, ಹುಚ್ಚಿನಂತೆ ಪ್ರೀತಿಸುವ ವೃತ್ತಿ, ಪ್ರಾಜೆಕ್ಟ್ ಮಾಡುವುದಕ್ಕೆ ತಂತ್ರಜ್ಞಾನದ ಅಡಚಣೆ ಎದುರಾಗಿರುವುದಾದರೆ ಅಂಥವರ ಜೊತೆಗೆ ರಿಲಯನ್ಸ್ ಡಿಜಿಟಲ್ ನಿಲ್ಲಲಿದೆ. ಅಂಥ ಉತ್ಕಟವಾದ ಕನಸಿನ ಬೆನ್ನು ಹತ್ತಿದ ಭಾರತೀಯರನ್ನು ಹುಡುಕಿ, ಅಂಥವರ ಕನವರಿಕೆಗೆ ತಂತ್ರಜ್ಞಾನದ ರೆಕ್ಕೆ ಕಟ್ಟುವ ಕೆಲಸವನ್ನು ರಿಲಯನ್ಸ್ ಡಿಜಿಟಲ್ ವಹಿಸಿಕೊಳ್ಳಲಿದೆ. ಇದೊಂದು ಸರಣಿಯಾಗಿ (ಸಿರೀಸ್) ಮೂಡಿಬರಲಿದ್ದು, ಹೆಸರಾಂತ ಸೆಲೆಬ್ರಿಟಿ ಫರಾಹ್ ಖಾನ್ ನಿರೂಪಣೆ ಮಾಡಲಿದ್ದಾರೆ. ಇತರ ಆರು ಚುರುಕಾದ ಮನಸ್ಸುಗಳು – ರಣವಿಜಯ್ ಸಿಂಘ, ಸಂಜ್ಯೋತ್ ಕೀರ್, ರಾಜ್ ಶಮಾನಿ, ತೇಜಸ್ವಿ ಪ್ರಕಾಶ್, ಹಂಸಿಕಾ ಮೋಟ್ವಾನಿ ಮತ್ತು ಮಿಥ್ಯಾ ಟ್ ಅವರ ಜೊತೆಗೂಡಿ ಸಹ ನಿರೂಪಣೆ ಮಾಡಲಿದ್ದಾರೆ.

ಈ ಅದ್ಭುತವಾದ ತಂಡವು ವ್ಯಕ್ತಿಗಳು ಎದುರಿಸುತ್ತಿರುವ ಸವಾಲುಗಳು ಗುರುತಿಸುತ್ತದೆ ಹಾಗೂ ಅಗತ್ಯ ಇರುವ ತಂತ್ರಜ್ಞಾನಗಳನ್ನು ರಿಲಯನ್ಸ್ ಡಿಜಿಟಲ್ ನಿಂದ ಒದಗಿಸಲಾಗುತ್ತದೆ. ಇನ್ನೂ ಮುಂದುವರಿದು ರಿಲಯನ್ಸ್ ಡಿಜಿಟಲ್ ನ ನುರಿತ ಸಿಬ್ಬಂದಿ ಬೆಂಬಲ ನೀಡುತ್ತಾರೆ, ಅವರನ್ನು ''ಟೆಕ್ ದೋಸ್ತ್'' ಎನ್ನಲಾಗುತ್ತದೆ. ಇವರು ಭಾರತಾದ್ಯಂತ ನಾವೀನ್ಯತೆ ಹಾಗೂ ಕ್ರಿಯೇಟಿವಿಟಿಯನ್ನು ಉತ್ತೇಜಿಸುವುದಕ್ಕೆ ಬದ್ಧರಾಗಿದ್ದಾರೆ. ಹೆಚ್ಚಿನ ವಿವರಗಳಿಗಾಗಿ ಲಿಂಕ್ ಮೇಲೆ ಕ್ಲಿಕ್ ಮಾಡಿ ವಿಡಿಯೋ ವೀಕ್ಷಿಸಿ https://x.com/RelianceDigital/status/1864221812902797603

ಅಂದ ಹಾಗೆ ಈ ಕಾರ್ಯಕ್ರಮವು ಕೋಲ್ಕತ್ತಾದ ಶೋಶೋಬ್ ಎಂಬ ಎನ್ ಜಿಒ ಜೊತೆಗೆ ಪ್ರಾರಂಭವಾಗುತ್ತದೆ. ಇದು ಅಶಕ್ತ ಮಕ್ಕಳಿಗೆ ಗುಣಮಟ್ಟದ ಶಿಕ್ಷಣವನ್ನು ಖಾತ್ರಿಪಡಿಸಲು ಮೀಸಲಾಗಿದೆ. ತಮ್ಮ ಶಾಲೆಯಲ್ಲಿನ ಉಜ್ವಲ ಮನಸ್ಸಿನವರಿಗೆ ಕಲಿಕೆಯ ಅನುಭವವನ್ನು ಹೆಚ್ಚಿಸಲು ರಿಲಯನ್ಸ್ ಡಿಜಿಟಲ್ ನಿಂದ ಅವರಿಗೆ ತಾಂತ್ರಿಕ ಬೆಂಬಲವನ್ನು ಒದಗಿಸಿದೆ. ಆ ಸ್ಥಳಕ್ಕೆ ಅಗತ್ಯವಾದ ಪರಿಕರಗಳನ್ನು ಒದಗಿಸಿದ್ದು, ಶೋಶೋಬ್ ಈಗ ಉಜ್ವಲ ಭವಿಷ್ಯವನ್ನು ರೂಪಿಸುವ ದಾರಿಯಲ್ಲಿದೆ. ಹೆಚ್ಚಿನ ವಿವರಗಳಿಗಾಗಿ ಲಿಂಕ್ ಮೇಲೆ ಕ್ಲಿಕ್ ಮಾಡಿ ಮೊದಲನೇ ಎಪಿಸೋಡ್ ವಿಡಿಯೋ ವೀಕ್ಷಿಸಿ – https://www.youtube.com/watch?v=SRKr37Pl9-4

ಈ ಕಾರ್ಯಕ್ರಮದ ಬಗ್ಗೆ ಮಾತನಾಡಿದ ರಿಲಯನ್ಸ್ ಡಿಜಿಟಲ್ನ ವಕ್ತಾರರು, ''ತಂತ್ರಜ್ಞಾನ ಎಂಬುದು ಇವತ್ತಿಗೆ ಜಗತ್ತಿನಲ್ಲಿ ಆಟವನ್ನೇ ಬದಲಿಸುವಂಥದ್ದಾಗಿದೆ. ರಿಲಯನ್ಸ್ ಡಿಜಿಟಲ್ನಲ್ಲಿ, ನಾವು ತಂತ್ರಜ್ಞಾನದ ಶಕ್ತಿಯನ್ನು ಗುರುತಿಸುತ್ತೇವೆ ಮತ್ತು ನಮ್ಮ ವಿಶಿಷ್ಟವಾಗಿ ವೈಯಕ್ತಿಕ ಸವಾಲುಗಳನ್ನು ಎದುರಿಸುವುದಕ್ಕೆ ಸೂಕ್ತವಾದ ಪರಿಹಾರಗಳನ್ನು ನೀಡುವ ಮೂಲಕ ಅದನ್ನು ವೈಯಕ್ತಿಕ ಮಟ್ಟದಲ್ಲಿ ನಂಬುತ್ತೇವೆ. ತಂತ್ರಜ್ಞಾನದ ಸಬಲೀಕರಣ ಧ್ಯೇಯದೊಂದಿಗೆ ಹ್ಯಾಪಿನೆಸ್ ಪ್ರಾಜೆಕ್ಟ್ ಬರುತ್ತಿದ್ದು, ಭಾರತವು ಹೊಸ ಮತ್ತು ಉಜ್ವಲವಾದ ನಾಳೆಗೆ ಜಿಗಿಯುತ್ತಿರುವಾಗ ನಮ್ಮ ಬ್ರ್ಯಾಂಡ್ಗೆ ಸಂಪೂರ್ಣವಾಗಿ ತಾಳೆಯಾಗುತ್ತದೆ,'' ಎಂದು ಹೇಳಿದ್ದಾರೆ. ಈ ಪ್ರಾಜೆಕ್ಟ್ ಕರ್ನಾಟಕದ ಮಣಿಪಾಲ್, ಉತ್ತರಪ್ರದೇಶದ ಲಖನೌ, ತಮಿಳುನಾಡಿನ ಚೆನ್ನೈ ಮತ್ತು ಮುಂಬೈಗೆ ವ್ಯಾಪಿಸುತ್ತಿದೆ. ತಂತ್ರಜ್ಞಾನ ಎಂಬ ಜಾದೂವಿನ ಮೂಲಕ ಹಲವು ಬದುಕುಗಳಿಗೆ ತಲುಪುತ್ತದೆ. ಈ ಹ್ಯಾಪಿನೆಸ್ ಪ್ರಾಜೆಕ್ಟ್ ಸಂಚಿಕೆಗಳು ರಿಲಯನ್ಸ್ ಡಿಜಿಟಲ್ ಯೂಟ್ಯೂಬ್ ಚಾನೆಲ್ ನಲ್ಲಿ ಪ್ರತಿ ಮಧ್ಯಾಹ್ನ ಒಂದು ಗಂಟೆಗೆ ಪ್ರಸಾರ ಆಗಲಿದೆ.

## ಹೊಚ್ಚ ಹೊಸ ಕ್ಯಾಮ್ರಿ ಹೈಬ್ರಿಡ್ ಎಲೆಕ್ಟ್ರಿಕ್ ಕಾರ್ ಬಿಡುಗಡೆ ಮಾಡಿದ ಟೊಯೋಟಾ ಕಿರ್ಲೋಸ್ಕರ್ ಮೋಟಾರ್

ಟೊಯೋಟಾ ಕಿರ್ಲೋಸ್ಕರ್ ಮೋಟಾರ್ ಇಂದು ಹೊಚ್ಚ ಹೊಸ ಕ್ಯಾಮ್ರಿ ಹೈಬ್ರಿಡ್ ಎಲೆಕ್ಟ್ರಿಕ್ ಕಾರ್ ಅನ್ನು ಬಿಡುಗಡೆ ಮಾಡಿದೆ. ಸೆಡಾನ್ ಟು ದಿ ಕೋರ್ ಎಂಬ ಪರಿಕಲ್ಪನೆಯ ಆಧಾರದಲ್ಲಿ ಈ ಹೊಚ್ಚ ಹೊಸ ಎಲೆಕ್ಟ್ರಿಕ್ ಸೆಡಾನ್ ಅನ್ನು ವಿನ್ಯಾಸಗೊಳಿಸಲಾಗಿದೆ.

ಇಂಗಾಲ ತಟಸ್ಥ ಗುರಿಗಳನ್ನು ಸಾಧಿಸುವ ಉದ್ದೇಶಕ್ಕೆ ಪೂರಕವಾಟಿ ಟೊಯೋಟಾ ಸಂಸ್ಥೆಯು ಹೊಚ್ಚ ಹೊಸ ಕ್ಯಾಮ್ರಿ ಹೈಬ್ರಿಡ್ ಎಲೆಕ್ಟ್ರಿಕ್ ಕಾರ್ ಅನ್ನು ಬಿಡುಗಡೆ ಮಾಡಿದೆ. ಅತ್ಯಾಧುನಿಕ 5ನೇ ಜನರೇಷನ್ ಹೈಬ್ರಿಡ್ ತಂತ್ರಜ್ಞಾನ ಹೊಂದಿರುವ ಈ ಕಾರು ಅತ್ಯುತ್ತಮ ಕಾರ್ಯಕ್ಷಮತೆ, ಆಕರ್ಷಕ ಶೈಲಿ, ಉನ್ನತ ಸುರಕ್ಷತೆ ಮತ್ತು ಅತ್ಯಾಧುನಿಕ ತಂತ್ರಜ್ಞಾನದ ಸಮ್ಮಿಲನದಂತೆ ಮೂಡಿ ಬಂದಿದೆ. ಅತ್ಯಾಕರ್ಷಕ ಎಕ್ಸ್ ಟೀರಿಯರ್ ಗಳು, ಅದ್ಭುತ ತಂತ್ರಜ್ಞಾನ ಹೊಂದಿರುವ ಹೊಚ್ಚ ಹೊಸ ಕ್ಯಾಮ್ರಿ ಹೈಬ್ರಿಡ್ ಎಲೆಕ್ಟ್ರಿಕ್ ಕಾರ್ ಗ್ರಾಹಕರ ವಿಶಿಷ್ಟ ಆಸೆಗಳಿಗೆ ತಕ್ಕಂತೆ ರೂಪುಗೊಂಡಿದ್ದು, ವಿಶೇಷ ಸ್ಟೈಲ್ ಮತ್ತು ಶೈಲಿಯನ್ನು ಹೊಂದಿದೆ.

ಹೈಬ್ರಿಡ್ ಪವರ್ ಟ್ರೇನ್ ಇರುವ ವಿಶಿಷ್ಟ ಕಾರ್: ಹೊಚ್ಚ ಹೊಸ ಕ್ಯಾಮ್ರಿ ಹೈಬ್ರಿಡ್ ಎಲೆಕ್ಟ್ರಿಕ್ ವೆಹಿಕಲ್ ಕ್ಲೀನ್ ವೆಹಿಕಲ್ ತಂತ್ರಜ್ಞಾನವನ್ನು ಅಳವಡಿಸಿಕೊಂಡಿದ್ದು, ಶಕ್ತಿಶಾಲಿ 2.5ಲೀ ಡೈನಾಮಿಕ್ ಫೋರ್ಸ್ ಎಂಜಿನ್ ಅನು ಹೊಂದಿದೆ. ಈ ಎಂಜಿನ್ 3200 ಆರ್ ಪಿ ಎಂನಲ್ಲಿ 221 ಎನ್‌ಎಂ ಟಾರ್ಕ್ ಉತ್ಪಾದಿಸುವ ಸಾಮರ್ಥ್ಯ ಹೊಂದಿದೆ. ಎಲೆಕ್ಟ್ರಾನಿಕ್ – ಕಂಟಿನ್ಯೂಯಸ್ಲೀ ವೇರಿಯಬಲ್ ಟ್ರಾನ್ಸ್ ಮಿಷನ್ (ಇ–ಸಿವಿಟಿ) ಹೊಂದಿರುವ ಈ ವಾಹನವು ಸುಗಮ ಮತ್ತು ಸೊಗಸಾದ ಡ್ರೈವಿಂಗ್ ಅನುಭವವನ್ನು ಒದಗಿಸುತ್ತದೆ. ಇ ಸಿವಿಟಿ ಎಲ್ಲಾ ಡ್ರೈವಿಂಗ್ ಶೈಲಿಗಳು ಮತ್ತು ಪರಿಸ್ಥಿತಿಗಳಿಗೆ ಸರಿಹೊಂದುವ ಸ್ಪೋರ್ಟ್, ಇಕೋ ಮತ್ತು ನಾರ್ಮಲ್ ಡ್ರೈವಿಂಗ್ ಮೋಡ್ ಗಳನ್ನು ಹೊಂದಿದೆ.

ಹೆಚ್ಚುವರಿಯಾಗಿ, ಟೊಯೋಟಾದ 5ನೇ ಜನರೇಷನ್ ನ ಹೈಬ್ರಿಡ್ ತಂತ್ರಜ್ಞಾನ ವ್ಯವಸ್ಥೆಯು ಹೆಚ್ಚಿನ ಸಾಮರ್ಥ್ಯದ ಲೀಥಿಯಂ ಐಯಾನ್ ಬ್ಯಾಟರಿಯನ್ನು ಹೊಂದಿದ್ದು, ಇದು ಗರಿಷ್ಠ 169ಕೆಡಬ್ಲ್ಯೂ (230 ಪಿಎಸ್) ನಷ್ಟು ಔಟ್ ಪುಟ್ ಅನ್ನು ಉತ್ಪಾದಿಸುವ ಸಾಮರ್ಥ್ಯ ಹೊಂದಿದೆ. ಈ ಮೂಲಕ ಹೊಚ್ಚ ಹೊಸ ಕ್ಯಾಮ್ರಿ ಹೈಬ್ರಿಡ್ ಎಲೆಕ್ಟ್ರಿಕ್ ಕಾರ್ ಶಕ್ತಿಶಾಲಿಯಾಗಿ ಕಾರ್ಯ ನಿರ್ವಹಿಸುತ್ತದೆ. ಈ ಅತ್ಯಾಧುನಿಕ ಹೈಬ್ರಿಡ್ ಸಿಸ್ಟಮ್ 25.49 ಕಿಮೀ/ ಲೀ★ನಷ್ಟು ಇಂಧನ ದಕ್ಷತೆ ಒದಗಿಸುವುದು ವಿಶೇಷವಾಗಿದ್ದು, ಜೊತೆಗೆ ಅತ್ಯುತ್ತಮ ಕಾರ್ಯಕ್ಷಮತೆ ಒದಗಿಸುತ್ತದೆ. ಇದು ಪರಿಸರ ಪ್ರಜ್ಞೆ ಹೊಂದಿರುವ ಅದ್ದೂರಿ ಸೆಡಾನ್ ಪ್ರಿಯರಿಗೆ ಪರಿಪೂರ್ಣ ಆಯ್ಕೆಯಾಗಿದೆ.

ಈ ಸಂದರ್ಭದಲ್ಲಿ ಮಾತನಾಡಿದ ಟೊಯೋಟಾ ಕಿರ್ಲೋಸ್ಕರ್ ಮೋಟಾರ್ ನ ಅಧ್ಯಕ್ಷರು, ವ್ಯವಸ್ಥಾಪಕ ನಿರ್ದೇಶಕರು ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶ್ರೀ ಮಸಕಾಜು ಯೋಶಿಮುರಾ ಅವರು, ಟೊಯೋಟಾದ ಜಾಗತಿಕ ಪರಿಸರ ಸವಾಲು 2050ಕ್ಕೆ ಅನುಗುಣವಾಗಿ ಅತ್ಯುತ್ತಮವಾದ, ಸುಸ್ಥಿರ ಸಾರಿಗೆ ಉತ್ಪನ್ನಗಳನ್ನು ಒದಗಿಸುವ ನಮ್ಮ ಅಭಿವೃದ್ಧಿ ದೃಷ್ಟಿಕೋನಕ್ಕೆ ಈಗ ಬಿಡುಗಡೆಯಾಗಿರುವ ಹೊಚ್ಚ ಹೊಸ ಕ್ಯಾಮ್ರಿ ಹೈಬ್ರಿಡ್ ಎಲೆಕ್ಟ್ರಿಕ್ ಕಾರ್ ಉತ್ತಮ ಪುರಾವೆಯಾಗಿದೆ. ಭಾರತವು ಬಹಳ ಮುಖ್ಯ ಮಾರುಕಟ್ಟೆಯಾಗಿದ್ದು, ಇಂಗಾಲ ಹೊರಸೂಸುವಿಕೆ ಕಡಿಮೆ ಮಾಡುವ ಮತ್ತು ಇಂಧನ ಭದ್ರತೆ ಸಾಧಿಸುವ ಭಾರತದ ಗುರಿಗಳಿಗೆ ಪೂರಕವಾದ ಉತ್ಪನ್ನ ಕಾರ್ಯತಂತ್ರವನ್ನು ನಾವು ಹೊಂದಿದ್ದೇವೆ. ಈ ನಿಟ್ಟಿನಲ್ಲಿ ಶುದ್ಧ ಸಾರಿಗೆ ವ್ಯವಸ್ಥೆಯನ್ನು ಹೆಚ್ಚಿಸಲು ಮತ್ತು ಹೆಚ್ಚು ಚುರುಕಾಗಿ ಮತ್ತು ವೇಗವಾಗಿ ಸಾಮೂಹಿಕ ವಿದ್ಯುದೀಕರಣವನ್ನು ಸಾಧಿಸಲು ನಾವು ಬಹು ಮಾರ್ಗ ವಿಧಾನವನ್ನು ಅಳವಡಿಸಿಕೊಂಡಿದ್ದೇವೆ. ಹೊಚ್ಚ ಹೊಸ ಕ್ಯಾಮ್ರಿ ಹೈಬ್ರಿಡ್ ಎಲೆಕ್ಟ್ರಿಕ್ ಕಾರ್ ಹಸಿರು ಸಾರಿಗೆ ವಿಭಾಗಕ್ಕೆ ನಮ್ಮ ಕೊಡುಗೆಯಾಗಿದ್ದು, ಭವಿಷ್ಯದ ಇಂಗಾಲ ಮುಕ್ತ, ಸಂತೋಷಕರ ಸಮಾಜವನ್ನು ನಿರ್ಮಿಸುವ ನಿಟ್ಟಿನಲ್ಲಿ ನಮ್ಮ ಮಹತ್ವದ ಕೊಡುಗೆಯಾಗಿದೆ ಎಂದು ಹೇಳಿದರು.

ಟೊಯೋಟಾ ಕಿರ್ಲೋಸ್ಕರ್ ಮೋಟಾರ್ ಮತ್ತು ಲೆಕ್ಸಸ್ ನ ಸೇಲ್ಸ್ ಸರ್ವೀಸ್ ಯೂಸ್ಡ್ ಕಾರ್ ವಿಭಾಗದ ಉಪ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ತದಾಶಿ ಅಸಾಜುಮಾ ಅವರು ಮಾತನಾಡಿ, ಅತ್ಯುತ್ತಮ ಕಾರ್ಯಕ್ಷಮತೆ, ಸುಸ್ಥಿರತೆ ಮತ್ತು ಅತ್ಯಾಧುನಿಕತೆಯನ್ನು ಸಂಯೋಜಿಸಿ ವಾಹನಗಳನ್ನು ತಯಾರಿಸುವ ನಮ್ಮ ಅಚಲ ಬದ್ಧತೆಗೆ ಹೊಸ ಕ್ಯಾಮ್ರಿ ಪುರಾವೆಯಾಗಿದೆ. 'ಸೆಡಾನ್ ಟು ದಿ ಕೋರ್' ಎಂಬ ಪರಿಕಲ್ಪನೆಯಡಿಯಲ್ಲಿ ಈ ಸೆಡಾನ್ ಅನ್ನು ಅಭಿವೃದ್ಧಿಪಡಿಸಲಾಗಿದ್ದು, ಈ ಕ್ಯಾಮ್ರಿ ತನ್ನ ಅತ್ಯಾಧುನಿಕ 5ನೇ ಜನರೇಷನ್ ನ ಹೈಬ್ರಿಡ್ ಸಿಸ್ಟಮ್ ಹೊಂದಿದೆ. ಗ್ರಾಹಕರಿಗೆ ಅತ್ಯುತ್ತಮ ಕಾರ್ಯಕ್ಷಮತೆ ಮತ್ತು ಅಸಾಧಾರಣ ಅನುಭವ ಒದಗಿಸುವ ಈ ಕಾರ್ ಸೊಗಸಾದ ಡ್ರೈವಿಂಗ್ ಎಕ್ಸ್ ಪೀರಿಯನ್ಸ್ ಒದಗಿಸುತ್ತದೆ. ನಮ್ಮ ಹೊಸ ಕಾರ್ ಅದರ ಸ್ಪೋರ್ಟಿ ಲುಕ್, ಟೆಕ್ ಲೋಡೆಡ್ ಫೀಚರ್ ಗಳು ಮತ್ತು ಅತ್ಯಾಧುನಿಕ ಸುರಕ್ಷತಾ ವ್ಯವಸ್ಥೆಗಳೊಂದಿಗೆ ಮಾಲೀಕತ್ವದ ಹೆಮ್ಮೆ ಒದಗಿಸುತ್ತದೆ ಎಂದು ನಾನು ನಂಬುತ್ತೇನೆ ಮತ್ತು ನಮ್ಮ ಗ್ರಾಹಕರಿಗೆ ಮಾನಸಿಕ ಶಾಂತಿಯನ್ನು ನೀಡುತ್ತದೆ. ಹೀಗಾಗಿ ಭಾರತೀಯ ಮಾರುಕಟ್ಟೆಗೆ ಮಹತ್ವಾಕಾಂಕ್ಷೆಯ ಮತ್ತು ಜವಾಬ್ದಾರಿಯುತವಾದ ಸಾರಿಗೆ ಉತ್ಪನ್ನವನ್ನು ನೀಡುವ ನಮ್ಮ ಉದ್ದೇಶವನ್ನು ಮತ್ತಷ್ಟು ಬಲಪಡಿಸುತ್ತದೆ ಎಂದು ಹೇಳಿದರು.

ಕ್ಯಾಮ್ರಿ ಬಿಡುಗಡೆ ಸಂದರ್ಭದಲ್ಲಿ ಮಾತನಾಡಿದ ಟೊಯೋಟಾ ಕಿರ್ಲೋಸ್ಕರ್ ಮೋಟಾರ್ ನ ಸೇಲ್ಸ್ ಸರ್ವೀಸ್ ಯೂಸ್ಡ್ ಕಾರ್ ವಿಭಾಗದ ಉಪಾಧ್ಯಕ್ಷರಾದ ಶ್ರೀ. ಶಬರಿ ಮನೋಹರ್ ಅವರು, ಹೊಚ್ಚ ಹೊಸ ಕ್ಯಾಮ್ರಿ ಹೈಬ್ರಿಡ್ ಎಲೆಕ್ಟ್ರಿಕ್ ಕಾರ್ ಬಿಡುಗಡೆಯು ಭಾರತದಲ್ಲಿ ನಮಗೆ ಮಹತ್ವದ ಸಂದರ್ಭವಾಗಿದೆ. 5ನೇ ಜನರೇಷನ್ ಹೈಬ್ರಿಡ್ ತಂತ್ರಜ್ಞಾನ, ಆಕರ್ಷಕ ಡಿಸೈನ್ ಮತ್ತು ಐಷಾರಾಮಿ ಫೀಚರ್ ಗಳು ಮತ್ತು ಇನ್ನಿತರ ಸಮಕಾಲೀನ ಅಂಶಗಳನ್ನು ಬಯಸುವ ಗ್ರಾಹಕರಿಗಾಗಿ ಈ ಹೊಸ ಮಾಡೆಲ್ ಅನ್ನು ರಚಿಸಲಾಗಿದೆ. ಆಕರ್ಷಕವಾದ, ವಿಶಾಲವಾದ, ಸುರಕ್ಷಿತವಾದ ಮತ್ತು ಸೊಗಸಾದ ಚಾಲನಾ ಅನುಭವ ಒದಗಿಸಲೆಂದೇ ಸಿದ್ಧಪಡಿಸಲಾಗಿದೆ. ಟೊಯೋಟಾ ಸೇಫ್ಟಿ ಸೆನ್ಸ್ 3.0 ಮತ್ತು ಕನೆಕ್ಟಿವಿಟಿ ಫೀಚರ್ ಗಳನ್ನು ಹೊಂದಿದ್ದು, ನಮ್ಮ ಮೌಲ್ಯಯುತ ಗ್ರಾಹಕರಿಗೆ ಸ್ಟೈಲ್ ಜೊತೆಗೆ ಮಾನಸಿಕ ಶಾಂತಿ, ಸೌಕರ್ಯ ಮತ್ತು ಅನುಕೂಲತೆಯನ್ನು ನೀಡುತ್ತದೆ. ನಮ್ಮ ಸುಸ್ಥಿರ ಸಾರಿಗೆ ಉತ್ಪನ್ನಗಳ ಮೇಲೆ ಮತ್ತು ಬ್ರ್ಯಾಂಡ್ ಮೇಲೆ ನಂಬಿಕೆ ಇಟ್ಟಿರುವ ನಮ್ಮ ಗ್ರಾಹಕರಿಗೆ ನಾವು ಹೃದಯ ಪೂರ್ವಕ ಧನ್ಯವಾದ ಸಲ್ಲಿಸುತ್ತಿದ್ದೇವೆ. ಅವರ ನಂಬಿಕೆ ಒದಗಿಸಿರುವ ವಿಶ್ವಾಸದಿಂದಲೇ ಈ ಹೊಸ ಮತ್ತು ಅತ್ಯಾಧುನಿಕ ಮಾಡೆಲ್ ಅನ್ನು ಪರಿಚಯಿಸುವುದು ಮತ್ತು ಈ ಪರಿಸರ ಸ್ನೇಹಿ ಉತ್ಪನ್ನವನ್ನು ನೀಡುವುದು ಸಾಧ್ಯವಾಗಿದೆ ಎಂದು ಹೇಳಿದರು.

ಅತ್ಯಾಧುನಿಕ ತಂತ್ರಜ್ಞಾನ ಮತ್ತು ಅತ್ಯುತ್ತಮ ಕನೆಕ್ಟಿವಿಟಿ: ಕ್ಯಾಮ್ರಿ ಹೈಬ್ರಿಡ್ ಎಲೆಕ್ಟ್ರಿಕ್ ವಾಹನವು 12.3–ಇಂಚಿನ ಮಲ್ಟಿ ಇನ್ಫರ್ಮೇಷನ್ ಡಿಸ್ ಪ್ಲೇ (ಎಂಐಡಿ) ಹೊಂದಿದ್ದು, ಟೊಯೋಟಾದ ಟಿ– ಕನೆಕ್ಟ್ ಟೆಲಿಮ್ಯಾಟಿಕ್ಸ್ ಮತ್ತು ಮಲ್ಟಿ ಝೋನ್ ಕ್ಲೈಮೇಟ್ ಕಂಟ್ರೋಲ್ ವ್ಯವಸ್ಥೆ ಜೊತೆ ಸಂಯೋಜನೆಗೊಂಡಿದೆ. ಈ ವ್ಯವಸ್ಥೆಯು ಪ್ರತೀ ಪ್ರಯಾಣಿಕರಿಗೆ ವೈಯಕ್ತೀಕರಿಸಿದ ಸೌಕರ್ಯವನ್ನು ಒದಗಿಸುತ್ತದೆ. ಸಂಪರ್ಕಿತ ಸಾರಿಗೆ ವ್ಯವಸ್ಥೆಯನ್ನು ಒದಗಿಸುವ ಟೊಯೋಟಾದ ದೃಷ್ಟಿಗೆ ಅನುಗುಣವಾಗಿ ಹೊಚ್ಚ ಹೊಸ ಕ್ಯಾಮ್ರಿ ಹೈಬ್ರಿಡ್ ಎಲೆಕ್ಟ್ರಿಕ್ ವೆಹಿಕಲ್ ಡೇಟಾ ಸಂವಹನ ಮಾಡ್ಯೂಲ್ (ಡಿಸಿಎಂ) ಅನ್ನು ಪರಿಚಯಿಸುತ್ತಿದ್ದು, ಚಾಲಕರು ತಮ್ಮ ವಾಹನದೊಂದಿಗೆ ಸದಾ ಸಂಪರ್ಕದಲ್ಲಿರಲು ಅನುವು ಮಾಡಿಕೊಡುತ್ತದೆ. ಅನುಕೂಲತೆ, ಸುರಕ್ಷತೆ ಮತ್ತು ತಂತ್ರಜ್ಞಾನವನ್ನು ಒದಗಿಸುತ್ತದೆ. ಇದಲ್ಲದೆ, ಜೆಬಿಎಲ್ ಪ್ರೀಮಿಯಂ 9 ಸ್ಪೀಕರ್ ಆಡಿಯೋ ಸಿಸ್ಟಮ್ ಆಹ್ಲಾದಕರ ಆಡಿಯೋ ಅನುಭವವನ್ನು ನೀಡುತ್ತದೆ.

ಹೊಚ್ಚಹೊಸಕ್ಯಾಮ್ರಿ ಹೈಬ್ರಿಡ್ ಎಲೆಕ್ಟ್ರಿಕ್ ವೆಹಿಕಲ್ ನ ಹೈಬ್ರಿಡ್ ಬ್ಯಾಟರಿಯು 8 ವರ್ಷಗಳ ಅಥವಾ 160,000 ಕಿಲೋಮೀಟರ್ ಗಳ ವಾರಂಟಿಯೊಂದಿಗೆ ಬರುತ್ತದೆ. ಹೊಸ ಕ್ಯಾಮ್ರಿ ಹೈಬ್ರಿಡ್ ಎಲೆಕ್ಟ್ರಿಕ್ ವೆಹಿಕಲ್ ಬುಕಿಂಗ್ ಈಗಾಗಲೇ ಆರಂಭವಾಗಿವೆ. ಬುಕಿಂಗ್ ಮಾಡಲು ಹತ್ತಿರದ ಟೊಯೋಟಾ ಡೀಲರ್‌ಶಿಪ್‌ಗೆ ಭೇಟಿ ನೀಡಿ ಅಥವಾ www.toyotabharat.com ಮೂಲಕ ಆನ್ ಲೈನ್ ನಲ್ಲಿ ಬುಕ್ ಮಾಡಿ.

## ರಾಶಿ ಭವಿಷ್ಯ



ಜಯಶ್ರೀ.ಬಿ.ಆರ್
ಖ್ಯಾತ ಜ್ಯೋತಿಷಿ
ದೂರವಾಣಿ–9964739507
www.jyotishyavaastu.com

**ಮೇಷ:** ಸಾಮಾಜಿಕ ಸ್ಥಾನಮಾನ ಹೆಚ್ಚಾಗುತ್ತದೆ, ಹಣಕಾಸಿನ ವಿಚಾರದಲ್ಲಿ ಯಾರನ್ನು ನಂಬಬೇಡಿ, ಸಹೋದರಿಯ ಜೀವನದಲ್ಲಿ ಏರುಪೇರು.

**ವೃಷಭ:** ಆರೋಗ್ಯದಲ್ಲಿ ಸ್ವಲ್ಪ ಸುಧಾರಣೆ, ಛಾಯಾಗ್ರಹಕರಿಗೆ ಶುಭ, ಕುಟುಂಬದವರೊಂದಿಗೆ ಕಾಲಹರಣ.

**ಮಿಥುನ:** ವಾಸಸ್ಥಳ ಬದಲಾವಣೆಯಿಂದ ಮಾನಸಿಕ ಕಿರಿಕಿರಿ, ವಿವಾಹ ಪ್ರಯತ್ನದಲ್ಲಿ ಯಶಸ್ಸು, ಆರೋಗ್ಯದ ಬಗ್ಗೆ ಕಾಳಜಿ ವಹಿಸಿ.

**ಕರ್ಕಾಟಕ:** ಯಂತ್ರೋಪಕರಣ ವ್ಯಾಪಾರಿಗಳಿಗೆ ಶುಭ, ದೂರದಲ್ಲಿರುವ ಹಿತೈಷಿಗಳಿಂದ ಸಹಾಯ, ಮನೆಯಲ್ಲಿ ಸಣ್ಣ ಪುಟ್ಟ ಸಮಸ್ಯೆಗಳು ಉಂಟಾದೀತು.

**ಸಿಂಹ:** ಆಸ್ತಿ ವಿವಾದ ಬಗೆಹರಿಯುತ್ತದೆ, ಉದ್ಯೋಗದಲ್ಲಿ ಬಡ್ತಿ ಸಿಗುವ ಸಾಧ್ಯತೆ, ಕಣ್ಣಿನ ತೊಂದರೆ ಉಂಟಾಗಬಹುದು.

**ಕನ್ಯಾ:** ಕಲಾವಿದರಿಗೆ ಹೆಚ್ಚಿನ ಬೇಡಿಕೆ, ಸಂಗಾತಿಯೊಂದಿಗೆ ದೂರ ಪ್ರಯಾಣ ಸಾಧ್ಯತೆ, ಮನೆಗೆ ಅತಿಥಿಗಳ ಆಗಮನ.

**ತುಲಾ:** ಮಕ್ಕಳಿಗೆ ವಿದ್ಯಾರ್ಜನೆಯಲ್ಲಿ ಆಸಕ್ತಿ, ನಿರ್ಮಾಪಕರಿಗೆ ಹಣದ ಮುಗ್ಗಟ್ಟು, ಆಪ್ತರ ಸಲಹೆಯಿಂದ ಆತ್ಮವಿಶ್ವಾಸ ವೃದ್ಧಿ.

**ವೃಶ್ಚಿಕ:** ಸಹನೆಯಿಂದ ಸಕಲ ಕಾರ್ಯ ಸಾಧ್ಯ, ಜನಸೇವಾ ಕಾರ್ಯಗಳಲ್ಲಿ ಆಸಕ್ತಿ, ವ್ಯವಹಾರದಲ್ಲಿ ನಷ್ಟ ಸಾಧ್ಯತೆ.

**ಧನಸ್ಸು:** ಸಂಸಾರದಲ್ಲಿ ಹೊಂದಾಣಿಕೆಯಿಂದ ಒಳಿತು, ನಿರ್ಧಾರಗಳನ್ನು ತರಾತುರಿಯಲ್ಲಿ ತೆಗೆದುಕೊಳ್ಳಬೇಡಿ, ಕುಶಲಕರ್ಮಿಗಳಿಗೆ ಉದ್ಯೋಗ ಸಿಗಲಿದೆ.

**ಮಕರ:** ಮಾತು ತೂಕ ತಪ್ಪದಿರಲಿ, ಸಣ್ಣ ಉದ್ಯಮಿಗಳ ಆದಾಯ ಹೆಚ್ಚಳ, ನೆರೆಯವರೊಡನೆ ಒಳ್ಳೆಯ ಸಂಬಂಧ.

**ಕುಂಭ:** ಕಿರಿಯರಿಗೆ ಮಾರ್ಗದರ್ಶನ, ನಾಟ್ಯ ಕಲಾವಿದರಿಗೆ ವಿಶೇಷ ಬೇಡಿಕೆ, ಕೋರ್ಟ್ ಕೇಸಿನಲ್ಲಿ ಅಪಜಯ.

**ಮೀನ:** ವಿದೇಶದಲ್ಲಿ ನೆಲೆಸಲು ಯೋಜನೆ, ಭೂವ್ಯವಹಾರದಿಂದ ಉತ್ತಮ ಲಾಭ, ಪ್ರೀತಿಸಿದವರಿಂದ ದೂರವಾಗಬಹುದು.

## ಅಂತಾರಾಷ್ಟ್ರೀಯ ಚಹಾ ದಿನ

ಡಿಸೆಂಬರ್ 15 ರಂದು ಅಂತರರಾಷ್ಟ್ರೀಯ ಚಹಾ ದಿನದಂದು ಕಾಫಿ ಮತ್ತು ಕೋಕಾ ಕೋಲಾವನ್ನು ಬದಿಗಿಟ್ಟು, ನಾವು ವಿಶ್ವದ ಅತ್ಯಂತ ಜನಪ್ರಿಯ ಪಾನೀಯವನ್ನು ಕುಡಿಯುತ್ತೇವೆ. ಈ ದಿನವು ಮುಖ್ಯವಾಗಿ ಚಹಾ ವ್ಯಾಪಾರವು ರೈತರು ಮತ್ತು ಕಾರ್ಮಿಕರ ಮೇಲೆ ಬೀರುವ ಪ್ರಭಾವದ ಬಗ್ಗೆ ಜಾಗೃತಿ ಮೂಡಿಸಲು ಪ್ರಯತ್ನಿಸುತ್ತದೆ ಆದರೆ ಪ್ರಪಂಚದಾದ್ಯಂತ ಚಹಾ ಪ್ರಿಯರು ಇದನ್ನು ಆಚರಿಸುತ್ತಾರೆ. ಚಹಾದ ಮೂಲವನ್ನು ಚೀನಾದಲ್ಲಿ ಕಂಡುಹಿಡಿಯಲಾಗಿದೆ ಎಂದು ನಿಮಗೆ ತಿಳಿದಿದೆಯೇ? ಚಹಾವು ಯುನೈಟೆಡ್ ಕಿಂಗ್ಡಮ್ಗೆ ದಾರಿ ಮಾಡಿಕೊಡುವ 17 ನೇ ಶತಮಾನದವರೆಗೂ ಇದನ್ನು ಹೆಚ್ಚಾಗಿ ಔಷಧೀಯ ಉದ್ದೇಶಗಳಿಗಾಗಿ ಬಳಸಲಾಗುತ್ತಿತ್ತು. ಮುಖ್ಯ ವಿಧಗಳಲ್ಲಿ ಕಪ್ಪು, ಹಸಿರು, ಬಿಳಿ, ಗಿಡಮೂಲಿಕೆ, ಊಲಾಂಗ್ ಮತ್ತು ಪುರ್ಹ್ ಸೇರಿವೆ. ಈ ರಜಾದಿನವನ್ನು 2005 ರಿಂದ ಆಚರಿಸಲಾಗುತ್ತದೆ, 2019 ರಲ್ಲಿ ವಿಶ್ವಸಂಸ್ಥೆಯು ಮೇ 21 ರಂದು ಹೊಸ ಅಂತರರಾಷ್ಟ್ರೀಯ ಚಹಾ ದಿನವನ್ನು ಪರಿಚಯಿಸಿತು. ನಮ್ಮ ದಿನವನ್ನು ಪ್ರಾರಂಭಿಸಲು ಚಹಾದ ಆಹ್ಲಾದಕರ ರುಚಿ ಮತ್ತು ಪರಿಮಳಕ್ಕಿಂತ ಉತ್ತಮವಾದ ಮಾರ್ಗವಿಲ್ಲ. ದಂತಕಥೆಯ ಪ್ರಕಾರ ಚಹಾವನ್ನು ಮೊದಲು 4000 ವರ್ಷಗಳ ಹಿಂದೆ ಚೀನಾದಲ್ಲಿ ಚಕ್ರವರ್ತಿ ನನ್ ಶೆನ್ ಕಂಡುಹಿಡಿದನು. ದೂರದ ಪ್ರದೇಶಕ್ಕೆ ಅವರ ಭೇಟಿಯೊಂದರಲ್ಲಿ, ಹತ್ತಿರದ ಮರದ ಎಲೆಗಳು ಕುದಿಯುವ ನೀರಿನ ಪಾತ್ರೆಯಲ್ಲಿ ಬೀಸಿದವು, ಅದನ್ನು ಅವನ ಸೇವಕರು ಬೆಂಕಿಯ ಮೇಲೆ ಇಟ್ಟರು. ರಿಫ್ರೆಶ್ ಪರಿಮಳವು ಪಾನೀಯವನ್ನು ಸವಿಯಲು ಚಕ್ರವರ್ತಿಯನ್ನು ಆಹ್ವಾನಿಸಿತು ಮತ್ತು ಮೊದಲ ಕಪ್ ಚಹಾವು ಜನಿಸಿತು. 16 ನೇ ಶತಮಾನದಲ್ಲಿ, ಡಚ್ ವ್ಯಾಪಾರಿಗಳಿಂದ ಚಹಾವು ಪ್ರಪಂಚದಾದ್ಯಂತ ಯುರೋಪ್ಗೆ ದಾರಿ ಮಾಡಿಕೊಟ್ಟಿತು, ಅಲ್ಲಿ ಇದು ಇಂಗ್ಲೆಂಡ್ನಲ್ಲಿ ಈಸ್ಟ್ ಇಂಡಿಯಾ ಕಂಪನಿಯ ಸ್ಥಾಪನೆಗೆ ಧನ್ಯವಾದಗಳು. ಉಳಿದವು, ಅವರು ಹೇಳಿದಂತೆ, ಇತಿಹಾಸ. ಅದರ ರುಚಿ ಮತ್ತು ಪ್ರಯೋಜನಗಳನ್ನು ಹೊರತುಪಡಿಸಿ, ಸಂಸ್ಕೃತಿ ಮತ್ತು ಸಾಮಾಜಿಕ ಆರ್ಥಿಕ ಅಭಿವೃದ್ಧಿಗೆ ಚಹಾದ ಕೊಡುಗೆಗಳು ಅಷ್ಟೇ ಪ್ರಸ್ತುತವಾಗಿವೆ. 35 ಕ್ಕೂ ಹೆಚ್ಚು ದೇಶಗಳಲ್ಲಿ ಬೆಳೆದ, ಚಹಾದ ಕೃಷಿಯು 13 ದಶಲಕ್ಷಕ್ಕೂ ಹೆಚ್ಚು ಜನರ ಜೀವನೋಪಾಯವನ್ನು ಬೆಂಬಲಿಸುತ್ತದೆ. 2005 ರಲ್ಲಿ ಟ್ರೇಡ್ ಯೂನಿಯನ್ಗಳಿಂದ ಪ್ರಾರಂಭವಾಯಿತು, ಅಂತರರಾಷ್ಟ್ರೀಯ ಚಹಾ ದಿನವು ಆರೋಗ್ಯ ಪ್ರಯೋಜನಗಳು, ಆರ್ಥಿಕ ಪ್ರಾಮುಖ್ಯತೆ ಮತ್ತು ಚಹಾದ ಸಾಂಸ್ಕೃತಿಕ ಪರಂಪರೆಯನ್ನು ಆಚರಿಸುತ್ತದೆ, ಎಲ್ಲಾ ಸಮಯದಲ್ಲೂ ಕ್ಷೇತ್ರಗಳಿಂದ ನಮ್ಮ ಕಪ್ಗಳಿಗೆ ಹೆಚ್ಚು ಸಮರ್ಥನೀಯ ಉತ್ಪಾದನೆಯನ್ನು ಖಾತ್ರಿಪಡಿಸುತ್ತದೆ. ನಾಗರಿಕ ಸಮಾಜ ಸಂಸ್ಥೆಗಳು ಮತ್ತು ಸಣ್ಣ ಚಹಾ ಬೆಳೆಗಾರರು ಮತ್ತು ವ್ಯವಹಾರಗಳನ್ನು ಒಟ್ಟುಗೂಡಿಸಿ, ಈ ರಜಾದಿನವು ಅಸಮ ಸ್ಪರ್ಧೆ, ಸುರಕ್ಷತಾ ನಿಯಮಗಳು, ಭೂ ಉದ್ಯೋಗ, ಸಾಮಾಜಿಕ ಭದ್ರತೆ, ಜೀವನ ವೇತನ ಮತ್ತು ಎಲ್ಲಾ ಚಹಾ ಕಾರ್ಮಿಕರಿಗೆ ಮಹಿಳಾ ಹಕ್ಕುಗಳನ್ನು ನಿಯಂತ್ರಿಸುವ ಗುರಿಯನ್ನು ಹೊಂದಿದೆ. ಸೆಮಿನಾರ್ಗಳು, ಸಾರ್ವಜನಿಕ ಪ್ರಚಾರಗಳು ಮತ್ತು ಪ್ರಸ್ತುತಿಗಳನ್ನು ಸಾಂಪ್ರದಾಯಿಕವಾಗಿ ನಡೆಸಲಾಗುತ್ತದೆ. ಚಹಾ ಬೆಳೆಗಾರರ ಸಂಘಗಳಿಗೆ ನಿಯಮಗಳನ್ನು ಬಲಪಡಿಸುವುದು ಗುರಿಯಾಗಿದೆ. ಚಹಾವನ್ನು ಉತ್ಪಾದಿಸುವ ದೇಶಗಳಿಗೆ ದೊಡ್ಡ ರಫ್ತು ಬೆಳೆ ಎಂದು ಗುರುತಿಸುವುದರ ಹೊರತಾಗಿ, ಚಹಾ ಸಂಸ್ಕೃತಿಯನ್ನು ಉತ್ಸಾಹಿಗಳು ಆಚರಿಸುತ್ತಾರೆ.

ಸಂಜೆ ಮುಗಿಲು
ಭಾನುವಾರ
15.12.2024



# ಮೊಬೈಲ್ ಆಪ್ ಸಲಹೆಗಾರರ ಉತ್ಪಾದಕತೆಯಲ್ಲಿ ಶೇ.37ರಷ್ಟು ಹೆಚ್ಚಳ

**ದೆಹಲಿ:** ಐಸಿಐಸಿಐ ಪ್ರುಡೆನ್ಶಿಯಲ್ ಲೈಫ್ ಇನ್ಶೂರೆನ್ಸ್ ನ ಮೊಬೈಲ್ ಆಪ್ ಐಪ್ರು ಎಡ್ಜ್ ಬಳಸುವ ಸಲಹೆಗಾರರ ಉತ್ಪಾದಕತೆಯಲ್ಲಿ ಶೇ.37ರಷ್ಟು ಹೆಚ್ಚಳ ಆಗಿರುವುದಾಗಿ ಸಂಸ್ಥೆಯು ತಿಳಿಸಿದೆ. ಇದರಿಂದ ಆ ಸಲಹೆಗಾರರ ಆದಾಯ ಜಾಸ್ತಿ ಆಗಿದೆ. ಅಧರಲ್ಲೂ ವಿಶೇಷವಾಗಿ ಐಪ್ರು ಎಡ್ಜ್ ಬಳಸುವ ಶೇ.98.1 ಏಜೆಂಟ್ ಗಳಿಗೆ ಅದೇ ದಿನ ಕಮಿಷನ್ ಗಳನ್ನು ಪಾವತಿಸಲಾಗುತ್ತದೆ.

ಐಸಿಐಸಿಐ ಪ್ರುಡೆನ್ಶಿಯಲ್ ಲೈಫ್ ಆಯ್ದ ವಿತರಕರಿಗೆ ಒಂದೇ ದಿನದಲ್ಲಿ ಕಮಿಷನ್ ಅನ್ನು ಪಾವತಿಸುವ ಮೊತ್ತ ಮೊದಲ ಲೈಫ್ ಇನ್ಶೂರೆನ್ಸ್ ಕಂಪನಿ ಆಗಿದೆ. ಕಂಪನಿಯು 2 ಲಕ್ಷಕ್ಕೂ ಹೆಚ್ಚು ಸಲಹೆಗಾರರ ಅಥವಾ ಏಜೆಂಟ್ ಗಳ ನೆಟ್‌ವರ್ಕ್ ಅನ್ನು ಹೊಂದಿದ್ದು, ಸರಿಸುಮಾರು ಶೇ.61ರಷ್ಟು ಕಂಪನಿಯ ಉನ್ನತ ಮಟ್ಟದ ಸಲಹೆಗಾರರು ಈಗ ತಮ್ಮ ವ್ಯವಹಾರವನ್ನು ಅಭಿವೃದ್ಧಿಗೊಳಿಸಲು ಸಹಾಯ ಮಾಡುವ ಐಪ್ರು ಎಡ್ಜ್ ಅನ್ನು ಸಕ್ರಿಯವಾಗಿ ಬಳಸುತ್ತಿದ್ದಾರೆ.

ಏಜೆಂಟ್ ಗಳು ಪ್ರಯಾಣ ಮಾಡುತ್ತಿರುವಾಗಲೂ ಈ ಆಪ್ ಕೆಲಸ ಮಾಡಲು ಅನುವು ಮಾಡಿಕೊಡುತ್ತದೆ. ಈ ಆಪ್ ಆಡಳಿತಾತ್ಮಕ ಚಟುವಟಿಕೆಗಳಲ್ಲಿಯೇ ಸಮಯ ಕಳೆಯುವುದಕ್ಕೆ ಬದಲಾಗಿ ಹೊಸ ವ್ಯಾಪಾರ ಬೆಳೆಸುವ ಕಡೆಗೆ ಗಮನ ಹರಿಸಲು ಅವಕಾಶ ಮಾಡಿಕೊಡುತ್ತದೆ. ಐಪ್ರು ಎಡ್ಜ್ ತಕ್ಷಣವೇ ಕೆವೈಸಿ ದೃಢೀಕರಣ ನಡೆಸಲು ಅನುವು ಮಾಡಿಕೊಡುತ್ತದೆ ಮತ್ತು ಇದರ ಓಸಿಆರ್ ತಂತ್ರಜ್ಞಾನವು ಗ್ರಾಹಕರಿಗೆ ಕಾಗದರಹಿತ ಖರೀದಿ ಅನುಭವ ಒದಗಿಸುತ್ತದೆ. ಸಣ್ಣ ಪಟ್ಟಣಗಳು ಮತ್ತು ಹಳ್ಳಿಗಳಲ್ಲಿ ನೆಲೆಸಿರುವ ಏಜೆಂಟ್ ಗಳಿಗೆ ಇದು ತುಂಬಾ ಉಪಯುಕ್ತವಾಗಿದೆ.

ಐಸಿಐಸಿಐ ಪ್ರುಡೆನ್ಶಿಯಲ್ ಲೈಫ್ ಇನ್ಶೂರೆನ್ಸ್ ನ ಮಾರಾಟ ವಿಭಾಗದ ಮುಖ್ಯಸ್ಥ ಮಣಿಕಂದನ್ ರಾಜಮಣಿ ಅವರು ಮಾತನಾಡಿ, ''ನಮ್ಮ ಮೊಬೈಲ್ ಆಪ್ ಐಪ್ರು ಎಡ್ಜ್ ನಮ್ಮ ಏಜೆಂಟರಿಗೆ ತಮ್ಮ ಉದ್ಯಮವನ್ನು ಬೆಳೆಸಲು ಅನುವು ಮಾಡಿಕೊಟ್ಟಿದೆ. ಆರ್ಥಿಕ ವರ್ಷ 2025ರ ಮೊದಲಾರ್ಧದಲ್ಲಿ ನಾವು ಅವರ ಉತ್ಪಾದಕತೆಯಲ್ಲಿ ಶೇ.37ರಷ್ಟು ಹೆಚ್ಚಳ ಉಂಟಾಗಿರುವುದನ್ನು ಗಮನಿಸಿದ್ದು, ಆ ಮೂಲಕ ಆಪ್ ನ ಗೆಲುವು ಸ್ಪಷ್ಟವಾಗಿ ತಿಳಿಯಬಹುದಾಗಿದೆ. ಮೊಬೈಲ್ ಆಪ್ ಬಳಸುವ ಶೇ.98.1ರಷ್ಟು ಸಲಹೆಗಾರರಿಗೆ ಅದೇ ದಿನದಲ್ಲಿ ಕಮಿಷನ್ ಅನ್ನು ಪಾವತಿಸಲಾಗುತ್ತಿದೆ. ಈ ಯೋಜನೆಗಳು ನಮ್ಮನ್ನು ದೇಶದಲ್ಲಿಯೇ ಅತ್ಯಂತ ಸಲಹೆಗಾರ ಸ್ನೇಹಿ ಲೈಫ್ ಇನ್ಶೂರೆನ್ಸ್ ಸಂಸ್ಥೆಯಾಗಿ ರೂಪಿಸಿವೆ ಎಂದು ಹೇಳಿದರು.

ತಂತ್ರಜ್ಞಾನಗಳ ಸಹಾಯದಿಂದ ಆರ್ಥಿಕ ವರ್ಷ 2025ರ ಮೊದಲಾರ್ಧದಲ್ಲಿ ಸೇವಿಂಗ್ಸ್ ವಿಭಾಗದಲ್ಲಿ ಒಂದೇ ದಿನದಲ್ಲಿ ಶೇ.50ರಷ್ಟು ಪಾಲಿಸಿಗಳನ್ನು ನೀಡಲು ನಮಗೆ ಸಾಧ್ಯವಾಗುತ್ತಿದೆ.



# ಅಮೆರಿಕಕ್ಕೆ ವಿಮಾನಯಾನ ಪುನಾರಂಭಿಸಲಿದೆ ಪಾಕಿಸ್ತಾನ

**ಇಸ್ಲಾಮಾಬಾದ್(ಪಾಕಿಸ್ತಾನ):** ಏಳು ವರ್ಷಗಳ ಅಮಾನತು ಆದೇಶದ ಬಳಿಕ ಪಾಕಿಸ್ತಾನ ಇಂಟರ್ನ್ಯಾಷನಲ್ ಏರ್ಲೈನ್ಸ್ ಅಮೆರಿಕಕ್ಕೆ ತನ್ನ ವಿಮಾನಯಾನವನ್ನು ಪುನಾರಂಭಿಸಲಿದೆ. ಇದು ದೇಶದ ವಾಯುಯಾನ ವಲಯಕ್ಕೆ ಮಹತ್ವದ ಬೆಳವಣಿಗೆಯಾಗಿದೆ ಎಂದು ಅಧಿಕೃತ ಮಾಧ್ಯಮ ಸಂಸ್ಥೆ ವರದಿ ಮಾಡಿದೆ. ಅಮೆರಿಕದ ಫೆಡರಲ್ ಏವಿಯೇಷನ್ ಅಡ್ಮಿನಿಸ್ಟ್ರೇಷನ್ ನಡುವೆ ಬಾಕಿ ಉಳಿದಿರುವ ಹಣಕಾಸಿನ ಬಾಧ್ಯತೆಗಳನ್ನು ಇತ್ಯರ್ಥಗೊಳಿಸಲು ತಿಳಿವಳಿಕೆ ಒಪ್ಪಂದಕ್ಕೆ ಸಹಿ ಹಾಕಲಾಗಿದೆ. ಡಿಜಿ ಸಿಎಎ ನಾದಿರ್ ಶಾಫಿ ದಾರ್ ಅವರ ಪ್ರಕಾರ, ಎಫ್‌ಎಎಗೆ ಪಾವತಿಗಳನ್ನು ಶೀಘ್ರದಲ್ಲೇ ಪೂರ್ಣಗೊಳಿಸಲಾಗುವುದು ಎಂದು ನಿರೀಕ್ಷಿಸಲಾಗಿದೆ. ಫೆಬ್ರವರಿ ಅಥವಾ ಮಾರ್ಚ್ನೊಳಗೆ ಎಫ್‌ಎಎ ನಿಯೋಗವು ಪಾಕಿಸ್ತಾನಕ್ಕೆ ಭೇಟಿ ನೀಡಲು ದಾರಿ ಮಾಡಿಕೊಡಲಿದೆ. ಈ ಬೆಳವಣಿಗೆಯು ಎಫ್‌ಎಎಯೊಂದಿಗೆ ಪಾಕಿಸ್ತಾನವನ್ನು 'ವರ್ಗ ಒಂದರ' ಸ್ಥಾನಮಾನಕ್ಕೆ ಮರುವರ್ಗೀಕರಿಸುವ ಸಾಧ್ಯತೆಗಳನ್ನು ಹೆಚ್ಚಿಸಿದೆ. ಹಾಗೇ ಅಮೆರಿಕಕ್ಕೆ ನೇರ ವಿಮಾನಗಳನ್ನು ಪುನಾರಂಭಿಸಲು ಅನುವು ಮಾಡಿಕೊಡುತ್ತದೆ. ನ್ಯೂಯಾರ್ಕ್ಗೆ ನಾಲ್ಕು ಮತ್ತು ಚಿಕಾಗೋಗೆ ಎರಡು ಸೇರಿದಂತೆ ಪಾಕಿಸ್ತಾನ ಮತ್ತು ಅಮೆರಿಕ ನಡುವೆ ವಾರಕ್ಕೆ ಆರು ವಿಮಾನಗಳ ಹಾರಾಟವನ್ನು ಪಾಕ್ನ ಈ ವಿಮಾನಯಾನ ಸಂಸ್ಥೆ ನಿರ್ವಹಿಸುತ್ತಿತ್ತು.ಆದರೆ 2017 ರಲ್ಲಿ ಅಮೆರಿಕಕ್ಕೆ ಕಳುಂಯ ವಿಮಾನಗಳನ್ನು ಸ್ಥಗಿತಗೊಳಿಸಲಾಯಿತು. ಪಾಕ್ ಸರ್ಕಾರದಿಂದ ಸರ್ಕಾರಕ್ಕೆ (ಉ2ಉ) ಒಪ್ಪಂದಗಳ ಮೂಲಕ PIA ಅನ್ನು ಖಾಸಗೀಕರಣಗೊಳಿಸುವ ಪ್ರಯತ್ನಗಳನ್ನು ತೀವ್ರಗೊಳಿಸುತ್ತಿದೆ. ಮತ್ತು ಡಿಸೆಂಬರ್ 31 ರವರೆಗೆ ಗಡುವನ್ನು ನಿಗದಿಪಡಿಸಲಾಗಿದೆ ಎಂದು ಮೂಲಗಳನ್ನು ಉಲ್ಲೇಖಿಸಿ ಅಧಿಕೃತ ಮಾಧ್ಯಮ ಸಂಸ್ಥೆ ಶನಿವಾರ ವರದಿ ಮಾಡಿದೆ.




# ನಟ ಮುಷ್ತಾಕ್ ಅಹ್ಮದ್ ಅಪಹರಣ ಪ್ರಕರಣ ಸುಖಾಂತ್ಯ



**ಬಿಜ್ನೋರ್:** ಚಿತ್ರನಟ ಮುಷ್ತಾಕ್ ಅಹ್ಮದ್ ಅಪಹರಣ ಪ್ರಕರಣವನ್ನು ಭೇದಿಸಿದ ಇಲ್ಲಿನ ಪೊಲೀಸರು, ನಾಲ್ವರು ಸದಸ್ಯರಿದ್ದ ಗ್ಯಾಂಗ್ವೊಂದನ್ನು ಬಂಧಿಸಿದೆ. ಸಾರ್ಥಕ್ ಚೌಧರಿ, ಸಬಿಯುದ್ದೀನ್, ಅಜೀಂ ಮತ್ತು ಶಶಾಂಕ್ ಬಂಧಿತ ಆರೋಪಿಗಳು. ಈ ಗ್ಯಾಂಗ್ನ ನಾಯಕ ಸೇರಿದಂತೆ ಇನ್ನೂ 6 ಮಂದಿ ತಲೆಮರೆಸಿಕೊಂಡಿದ್ದು, ಆ ಆರೋಪಿಗಳನ್ನು ಶೀಘ್ರವೇ ಬಂಧಿಸುವುದಾಗಿ ಪೊಲೀಸ್ ವರಿಷ್ಠಾಧಿಕಾರಿ ಅಭಿಷೇಕ್ ಝಾ ತಿಳಿಸಿದ್ದಾರೆ.



ಶನಿವಾರ ಮಾಧ್ಯಮಗೋಷ್ಠಿ ನಡೆಸಿ ಮಾತನಾಡಿದ ಅವರು, ಕಾರ್ಯಕ್ರಮದ ಆಯೋಜನೆ ಹೆಸರಿನಲ್ಲಿ ನಟ ಮುಷ್ತಾಕ್ ಖಾನ್ ಅವರನ್ನು ಸಂಪರ್ಕಿಸಿದ್ದ ಈ ಗ್ಯಾಂಗ್, ನವೆಂಬರ್ 20 ರಂದು ದೆಹಲಿ-ಮೀರತ್ ಹೆದ್ದಾರಿಯಿಂದ ಕ್ಯಾಬ್ ಮೂಲಕ ಅಪಹರಿಸಿತ್ತು. ಅಪಹರಣದ ಬಳಿಕ ನಟನ ಮೊಬೈಲ್ನ ಯುಪಿಐನಿಂದ ಬೆದರಿಸಿ ತಮ್ಮ ಖಾತೆಗೆ ಹಣ ಕೂಡ ವರ್ಗಾಯಿಸಿಕೊಂಡಿದ್ದರು. ಘಟನೆ ನಡೆಯುತ್ತಿದ್ದಂತೆ ಮುಷ್ತಾಕ್ ಅವರ ಈವೆಂಟ್ ಮ್ಯಾನೇಜರ್ ಶಿವಂ ಯಾದವ್ ಕೊತ್ವಾಲಿ ನಗರದ ಬಿಜ್ನೋರ್ ಪೊಲೀಸ್ ಠಾಣೆಯಲ್ಲಿ ಈ ಬಗ್ಗೆ ದೂರು ದಾಖಲಿಸಿದ್ದರು. ದೂರು ದಾಖಲಿಸಿಕೊಂಡ ಪೊಲೀಸರು ಅಪಹರಣಕಾರರ ಗ್ಯಾಂಗ್ ಅನ್ನು ಬಂಧಿಸಿದೆ ಎಂದರು.

ಮೀರತ್ನ ಕಾರ್ಯಕ್ರಮವೊಂದಕ್ಕೆ ಸಂಬಂಧಿಸಿದಂತೆ ನಟ ಮುಷ್ತಾಕ್ ಖಾನ್ ಅವರೊಂದಿಗೆ ರಾಹುಲ್ ಸೈನಿ ಎಂಬಾತ ಫೋನ್ನಲ್ಲಿ ಮಾತನಾಡಿದ್ದರು. ಖಾತ್ರಿಗಾಗಿ ನಟನ ಖಾತೆಗೆ ಸಂಭಾವನೆ ರೂಪದಲ್ಲಿ 25,000 ರೂ.ಗಳನ್ನು ಮುಂಗಡವಾಗಿ ಜಮಾ ಕೂಡ ಮಾಡಿದ್ದರು. ನವೆಂಬರ್ 20 ರಂದು ಮುಂಬೈನಿಂದ ದೆಹಲಿಗೆ ವಿಮಾನ ಟಿಕೆಟ್ ಬುಕ್ ಸಹ ಮಾಡಿದ್ದ ನಟ ಖಾನ್ ತಲುಪಬೇಕಾದ ಕಾರ್ಯಕ್ರಮ ಸ್ಥಳವನ್ನು ತಲುಪಿರಲಿಲ್ಲ.

# ಲೋಕಸಭೆ: 11 ನಿರ್ಣಯಗಳ ಮಂಡಿಸಿದ ಪ್ರಧಾನಿ ಮೋದಿ!

**ನವದೆಹಲಿ:** ಸಂವಿಧಾನ ಅಂಗೀಕಾರವಾಗಿ 75 ವರ್ಷಗಳಾದ ಹಿನ್ನೆಲೆಯಲ್ಲಿ ನಡೆದಿದ್ದ ಚರ್ಚೆಗೆ ಸುದೀರ್ಘ ಉತ್ತರ ನೀಡಿದ ಪ್ರಧಾನಿ ನರೇಂದ್ರ ಮೋದಿ ಅವರು, ಲೋಕಸಭೆಯಲ್ಲಿ 11 ನಿರ್ಣಯಗಳನ್ನುಮಂಡಿಸಿದ್ದಾರೆ ಹಾಗೂ 2047ರ ಹೊತ್ತಿಗೆ ಭಾರತ ಅಭಿವೃದ್ಧಿ ಹೊಂದಿದ ದೇಶವಾಗುವ ಗುರಿಯನ್ನು ಸಾಧಿಸಲು ಇವು ಸಹಾಯವಾಗಲಿವೆ ಎಂದು ತಿಳಿಸಿದ್ದಾರೆ.



ಇದಕ್ಕೂ ಮುನ್ನ ಲೋಕಸಭೆಯ ಚಳಿಗಾಲದ ಅಧಿವೇಶನದಲ್ಲಿ ಸುಮಾರು ಎರಡು ಗಂಟೆಗಳ ಕಾಲ ಮಾಡಿದ್ದ ಭಾಷಣದಲ್ಲಿ ಪಿಎಂ ಮೋದಿ, ತಮ್ಮ ಸರ್ಕಾರದ ಸಾಧನೆಗಳನ್ನು ಬಿಚ್ಚಿಟ್ಟರು ಹಾಗೂ ಸಾಂವಿಧಾನಿಕ ಮೌಲ್ಯಗಳನ್ನು ಎತ್ತಿಹಿಡಿಯಲು ಭಾರತದ ಜನರನ್ನು ಶ್ಲಾಘಿಸಿದರು. ಅದರಲ್ಲಿಯೂ ವಿಶೇಷವಾಗಿ ನೆಹರು-ಗಾಂಧಿ ಕುಟುಂಬವು ತಲೆಮಾರುಗಳಿಂದ ಸಂವಿಧಾನವನ್ನು ದುರ್ಬಲಗೊಳಿಸುತ್ತಿದೆ ಎಂದು ವಾಗ್ದಾಳಿ ನಡೆಸಿದ್ದರು. ಅಭಿವೃದ್ಧಿ ಹೊಂದಿದ ಭಾರತವು 140 ಕೋಟಿ ನಾಗರಿಕರ ಕನಸಾಗಿದೆ ಮತ್ತು ರಾಷ್ಟ್ರವು ಒಂದು ಸಂಕಲ್ಪದೊಂದಿಗೆ ಮುನ್ನಡೆದಾಗ ಫಲಿತಾಂಶಗಳು ಖಾತರಿಪಡಿಸುತ್ತವೆ ಎಂದು ಅವರು ಒತ್ತಿ ಹೇಳಿದರು. ''ನನ್ನ ಸಹ ನಾಗರಿಕರು ಮತ್ತು ಅವರ ಸಾಮರ್ಥ್ಯಗಳು, ಯುವಕರು ಹಾಗೂ ಮಹಿಳಾ ಶಕ್ತಿ ಮೇಲೆ ನನಗೆ ಅಪಾರ ನಂಬಿಕೆ ಇದೆ. ಭಾರತವು 2047ರಲ್ಲಿ ತನ್ನ ಸ್ವಾತಂತ್ರ್ಯದ 100ನೇ ವರ್ಷವನ್ನು ಆಚರಿಸುವ ವೇಳೆ, ಭಾರತ ಸಂಪೂರ್ಣ ಅಭಿವೃದ್ಧಿ ಹೊಂದಿದೆ ಎಂದು ಸಂಭ್ರಮಿಸುತ್ತೇವೆಂದು ನಾವೆಲ್ಲರೂ ಇದೀಗ ಸಂಕಲ್ಪ ಮಾಡೋಣ,'' ಎಂದು ನರೇಂದ್ರ ಮೋದಿ ಕರೆ ನೀಡಿದರು.

ಲೋಕಸಭೆಯಲ್ಲಿ ತಮ್ಮ ಭಾಷಣದ ಕೊನೆಯಲ್ಲಿ ಪ್ರಧಾನಿ 11 ಪ್ರತಿಜ್ಞೆಗಳನ್ನು ಮಂಡಿಸಿದರು. ಅವರು ಅಂತರ್ಗತ ಬೆಳವಣಿಗೆ ಮತ್ತು ಭ್ರಷ್ಟಾಚಾರದ ಕಡೆಗೆ ಶೂನ್ಯ ಸಹಿಷ್ಣುತೆಯ ಮೇಲೆ ಒತ್ತಿ ಹೇಳಿದರು. ಸಂವಿಧಾನದ ಅಂಗೀಕಾರದ 75ನೇ ವರ್ಷವು ಜನರ ಕರ್ತವ್ಯಗಳ ಬಗೆಗಿನ ಬದ್ಧತೆಯನ್ನು ಮತ್ತಷ್ಟು ಬಲಪಡಿಸಲಿ ಎಂದು ಹಾರೈಸಿದರು.

# ಅಮಿತ್ ಶಾಗೆ ಕೇಜ್ರಿವಾಲ್ ಪತ್ರ

**ನವದೆಹಲಿ:** ದೆಹಲಿಯಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿರುವ ಬಗ್ಗೆ ಗೃಹ ಸಚಿವ ಅಮಿತ್ ಶಾ ಅವರಿಗೆ ಪತ್ರ ಬರೆದು ಕಳವಳ ವ್ಯಕ್ತಪಡಿಸಿರುವ ಆಮ್ ಆದ್ಮಿ ಪಕ್ಷದ ಸಂಚಾಲಕ ಅರವಿಂದ್ ಕೇಜ್ರಿವಾಲ್, ಹದಗೆಟ್ಟ ಕಾನೂನು ಮತ್ತು ಸುವ್ಯವಸ್ಥೆ ಕುರಿತು ತಮ್ಮೊಂದಿಗೆ ಚರ್ಚಿಸಲು ಅವಕಾಶ ಮಾಡಿಕೊಡುವಂತೆ ಕೋರಿದ್ದಾರೆ.



ದೆಹಲಿಯ ಕಾನೂನು ಮತ್ತು ಸುವ್ಯವಸ್ಥೆ ಕೇಂದ್ರ ಸರ್ಕಾರದ ಅಧೀನದಲ್ಲಿದೆ. ಆದರೂ, ದೆಹಲಿ ಈಗ ದೇಶ ಮತ್ತು ವಿದೇಶಗಳಲ್ಲಿ ಅಪರಾಧಗಳ ರಾಜಧಾನಿ ಎಂದು ಬಿಂಬಿಸಿಕೊಳ್ಳುತ್ತಿದೆ. ಭಾರತದ 19 ಮೆಟ್ರೋ ನಗರಗಳಲ್ಲಿ ಮಹಿಳೆಯರ ಮೇಲಿನ ಅಪರಾಧಗಳಲ್ಲಿ ದೆಹಲಿ ಮೊದಲ ಸ್ಥಾನದಲ್ಲಿದೆ. ಕೊಲೆ ಪ್ರಕರಣಗಳಲ್ಲಿಯೂ ಮೊದಲ ಸ್ಥಾನದಲ್ಲಿದೆ. ಸುಲಿಗೆ, ದರೋಡೆ ನಡೆಸುವ ಗ್ಯಾಂಗ್ಗಳು ಸಕ್ರಿಯವಾಗಿವೆ. ವಿಮಾನ ನಿಲ್ದಾಣಗಳು ಮತ್ತು ಶಾಲೆಗಳಿಗೆ ಬೆದರಿಕೆ ಕರೆಗಳು ಬರುತ್ತಿವೆ. ಇಂತಹ ಕೃತ್ಯಗಳಿಂದ ದೆಹಲಿಯ ಜನರು ಅಭದ್ರತೆ ಅನುಭವಿಸುತ್ತಿದ್ದಾರೆ. ದೆಹಲಿಯ ಐಷಾರಾಮಿ ಪ್ರದೇಶವಾಗಲಿ ಅಥವಾ ಇನ್ನಾವುದೇ ಪ್ರದೇಶವಾಗಲಿ, ಇಂದು ತಾಯಂದಿರು ತಮ್ಮ ಮಕ್ಕಳ ಬಗ್ಗೆ ಚಿಂತಿತರಾಗಿದ್ದಾರೆ. ಉದ್ಯಮಿಗಳು ತಮ್ಮ ವ್ಯವಹಾರದ ಬಗ್ಗೆ ಅಸುರಕ್ಷಿತ ಭಾವನೆ ಅನುಭವಿಸುತ್ತಿದ್ದಾರೆ. ದರೋಡೆಕೋರರು ಸಿನಿಮಾಗಳ ಮಾದರಿಯಲ್ಲಿ ಶೂಟೌಟ್ ಮಾಡುತ್ತಿದ್ದಾರೆ. ಹಗಲಿನಲ್ಲೇ ಗುಂಡಿನ ದಾಳಿ, ಕೊಲೆ ಮತ್ತು ಅಪಹರಣಗಳು ನಡೆಯುತ್ತಿವೆ. ಈ ಕೃತ್ಯಗಳಿಗೆ ಮುಕ್ತಿ ಸಿಗಬೇಕು. ಅಪರಾಧಗಳ ರಾಜಧಾನಿ ಎಂಬ ನಾಮಾಂಕಿತದಿಂದ ದೆಹಲಿ ಹೊರಬರಬೇಕಿದೆ ಎಂದು ಅಪರಾಧ ಅಂಕಿಅಂಶಗಳನ್ನು ಉಲ್ಲೇಖಿಸಿ, ಕೇಜ್ರಿವಾಲ್ ಅವರು ಅಮಿತ್ ಶಾ ಅವರಿಗೆ ಪತ್ರ ಬರೆದಿದ್ದಾರೆ.

ರಾಷ್ಟ್ರರಾಜಧಾನಿಯಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ ಎಂದು ಕೇಂದ್ರ ಸರ್ಕಾರದ ಮೇಲೆ ಅರವಿಂದ ಕೇಜ್ರಿವಾಲ್ ಇತ್ತೀಚೆಗಷ್ಟೇ ವಾಗ್ದಾಳಿ ನಡೆಸಿದ್ದರು.

# ಯುದ್ಧಪೀಡಿತ ಸಿರಿಯಾದಿಂದ 75 ಭಾರತೀಯರು ಸ್ಥಳಾಂತರ

**ಡಮಾಸ್ಕಸ್:** ಯುದ್ಧಪೀಡಿತ ಸಿರಿಯಾದಿಂದ 75 ಮಂದಿ ಭಾರತೀಯರನ್ನು ಸ್ಥಳಾಂತರಿಸಲಾಗಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಬುಧವಾರ ಮಾಹಿತಿ ನೀಡಿದೆ. ಅಲ್ಲದೇ ವಿದೇಶದಲ್ಲಿರುವ ಭಾರತೀಯ ಪ್ರಜೆಗಳ ಸುರಕ್ಷತೆ ಮತ್ತು ಭದ್ರತೆಗೆ ಹೆಚ್ಚಿನ ಒತ್ತು ನೀಡುತ್ತದೆ ಎಂದು ಒತ್ತಿ ಹೇಳಿದೆ. ಇಸ್ಲಾಮಿಕ್ ಬಂಡುಕೋರು ಸಿರಿಯಾ ಅಧ್ಯಕ್ಷ ಬಶರ್ ಅಲ್ ಅಸ್ಸಾದ್ ಸರ್ಕಾರವನ್ನು ಪತನಗೊಳಿಸಿದ್ದು, ಸ್ವತಂತ್ರ ಸರ್ಕಾರ ರಚಿಸಲು ಮುಂದಾಗಿದ್ದಾರೆ. ಈ ಬೆಳವಣಿಗೆಗಳ ನಡುವೆ 75 ಭಾರತೀಯ ಪ್ರಜೆಗಳನ್ನು ಸಿರಿಯಾದಿಂದ ಸ್ಥಳಾಂತರಿಸಲಾಗಿದೆ. ಸ್ಥಳಾಂತರಿಸಿದವರಲ್ಲಿ ಸೈದಾ ಜೈನಾಬ್‌ನಲ್ಲಿ ಸಿಲುಕಿದ್ದ ಜಮ್ಮು ಮತ್ತು ಕಾಶ್ಮೀರದ 44 'ಜೈರೀನ್'ಗಳೂ (ಯಾತ್ರಿಕರೂ) ಸೇರಿದ್ದಾರೆ. ಎಲ್ಲಾ ಭಾರತೀಯ ಪ್ರಜೆಗಳು ಸುರಕ್ಷಿತವಾಗಿ ಲೆಬನಾನ್‌ಗೆ ದಾಟಿದ್ದು, ಲಭ್ಯವಿರುವ ವಾಣಿಜ್ಯ ವಿಮಾನಗಳ ಮೂಲಕ ಭಾರತಕ್ಕೆ ಹಿಂತಿರುಗುತ್ತಾರೆ ಎಂದು ವಿದೇಶಾಂಗ ಸಚಿವಾಲಯ ತಿಳಿಸಿದೆ.ಭಾರತ ಸರ್ಕಾರವು ವಿದೇಶದಲ್ಲಿರುವ ಭಾರತೀಯ ಪ್ರಜೆಗಳ ಸುರಕ್ಷತೆ ಮತ್ತು ಭದ್ರತೆಗೆ ಹೆಚ್ಚಿನ ಆದ್ಯತೆಯನ್ನು ನೀಡುತ್ತಿದೆ. ಸಿರಿಯಾದಲ್ಲಿ ಉಳಿದಿರುವ ಭಾರತೀಯ ಪ್ರಜೆಗಳು ಡಮಾಸ್ಕಸ್‌ನಲ್ಲಿರುವ ಭಾರತೀಯ ರಾಯಭಾರಿ ಕಚೇರಿಯೊಂದಿಗೆ ಅವರ ತುರ್ತು ಸಹಾಯವಾಣಿ ಸಂಖ್ಯೆ +963 993385973 (ವಾಟ್ಸಾಪ್‌ನಲ್ಲಿಯೂ ಸಹ) ಮತ್ತು ಇಮೇಲ್ ಐಡಿಯೊಂದಿಗೆ ಸಂಪರ್ಕದಲ್ಲಿರಲು ಸೂಚಿಸಲಾಗಿದೆ. ಭಾರತ ಸರ್ಕಾರವು ಸಿರಿಯಾ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸುತ್ತಿದೆ ಎಂದು ಹೇಳಿದೆ.

# ಆತ್ಮಾಹುತಿ ಬಾಂಬ್ ದಾಳಿ ತಾಲಿಬಾನ್ ಪ್ರಭಾವಿ ಸಚಿವ ಸಾವು

**ಕಾಬೂಲ್:** ಅಫ್ಘಾನಿಸ್ತಾನದ ರಾಜಧಾನಿ ಕಾಬೂಲ್‌ನಲ್ಲಿ ಭಯೋತ್ಪಾದಕರು ನಡೆಸಿದ ಆತ್ಮಾಹುತಿ ಬಾಂಬ್ ದಾಳಿಯಲ್ಲಿ ತಾಲಿಬಾನ್ ನಿರಾಶ್ರಿತರ ಸಚಿವ ಖಲೀಲ್ ಉರ್-ರಹಮಾನ್ ಹಕ್ಕಾನಿ ಹಾಗೂ ಇತರ ಇಬ್ಬರು ಮೃತಪಟ್ಟಿದ್ದಾರೆ. ಇದು ಮೂರು ವರ್ಷಗಳ ಹಿಂದೆ ಅಧಿಕಾರಕ್ಕೆ ಮರಳಿದ ನಂತರ ತಾಲಿಬಾನ್ ಹಿರಿಯ ಅಧಿಕಾರಿ ಮೇಲಿನ ಅತ್ಯಂತ ಮಹತ್ವದ ದಾಳಿಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ಸಚಿವಾಲಯದ ಆವರಣದಲ್ಲೇ ಸ್ಫೋಟ ಸಂಭವಿಸಿದ್ದು, ನಿರಾಶ್ರಿತರ ಸಚಿವ ಖಲೀಲ್ ಹಕ್ಕಾನಿ ಹತರಾಗಿದ್ದಾರೆ. ಇವರು ತಾಲಿಬಾನ್ ಆಡಳಿತದಲ್ಲಿ ಮತ್ತೊಬ್ಬ ಪ್ರಭಾವಿ ನಾಯಕನಾಗಿರುವ ಗೃಹ ಸಚಿವ ಸಿರಾಜುದ್ದೀನ್ ಹಕ್ಕಾನಿಯವರ ಚಿಕ್ಕಪ್ಪ. ಈ ದಾಳಿಯ ಹೊಣೆಯನ್ನು ಯಾವುದೇ ಸಂಘಟನೆ ಸದ್ಯಕ್ಕೆ ಹೊತ್ತುಕೊಂಡಿಲ್ಲ. ಈ ಕುರಿತು ತಾಲಿಬಾನ್ ಸರ್ಕಾರದ ಪ್ರಾಥಮಿಕ ವಕ್ತಾರರಾದ ಜಬಿಹುಲ್ಲಾ ಮುಜಾಹಿದ್ ಎಕ್ಸ್‌ನಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ. ಅಲ್ಲದೇ ಹಕ್ಕಾನಿ ಅವರ ಮರಣವು ಅತ್ಯಂತ ಗಮನಾರ್ಹವಾದುದು. ಇಸ್ಲಾಂ ಧರ್ಮ ರಕ್ಷಣೆಗಾಗಿ ಹಕ್ಕಾನಿ ಜೀವವನ್ನೇ ಮುಡಿಪಾಗಿಟ್ಟಿದ್ದರು. ಅವರೊಬ್ಬ ನಿಜವಾದ ಧಾರ್ಮಿಕ ಯೋಧ ಎಂದು ಬಣ್ಣಿಸಿದ್ದಾರೆ. ಇನ್ನೂ ಪಾಕಿಸ್ತಾನದ ವಿದೇಶಾಂಗ ಸಚಿವ ಇಶಾಕ್ ದಾರ್ ಈ ಘಟನೆಯನ್ನು ಭಯೋತ್ಪಾದಕ ದಾಳಿ ಎಂದು ಖಂಡಿಸಿದ್ದಾರೆ. ಪಾಕಿಸ್ತಾನವು ಅದರ ಎಲ್ಲಾ ರೂಪಗಳು ಮತ್ತು ಅಭಿವ್ಯಕ್ತಿಗಳಲ್ಲಿ ಭಯೋತ್ಪಾದನೆಯನ್ನು ನಿಸ್ಸಂದಿಗ್ಧವಾಗಿ ಖಂಡಿಸುತ್ತದೆ ಎಂದು ಹೇಳಿದ್ದಾರೆ.

# ಸಿರಿಯಾದ ಶೇ 90ರಷ್ಟು ಕ್ಷಿಪಣಿ ವ್ಯವಸ್ಥೆ ಧ್ವಂಸ: ಇಸ್ರೇಲ್

**ಜೆರುಸಲೇಂ(ಇಸ್ರೇಲ್):** ಸಿರಿಯಾದ ವಾಯು ರಕ್ಷಣಾ ವ್ಯವಸ್ಥೆಯನ್ನು ತೀವ್ರವಾಗಿ ಹಾನಿಗೊಳಿಸಿರುವುದಾಗಿ ಇಸ್ರೇಲ್ ರಕ್ಷಣಾ ಪಡೆ (ಐಡಿಎಫ್) ಘೋಷಿಸಿದೆ. ಸಿರಿಯಾದ ಮೇಲ್ಮೈಯಿಂದ ಗಾಳಿಯಲ್ಲಿ ದಾಳಿ ನಡೆಸಬಲ್ಲ ಶೇ 90ರಷ್ಟು ಕ್ಷಿಪಣಿ ವ್ಯವಸ್ಥೆಯನ್ನು ನಾಶ ಮಾಡಲಾಗಿದೆ ಎಂದು ಅದು ಹೇಳಿದೆ. ಬಷರ್ ಅಲ್-ಅಸ್ಸಾದ್ ಸರ್ಕಾರದ ಪತನದ ಹಿನ್ನೆಲೆಯಲ್ಲಿ ಸಿರಿಯಾದ ಪರಿಸ್ಥಿತಿಯನ್ನು ಸಮಗ್ರವಾಗಿ ಮೌಲ್ಯಮಾಪನ ಮಾಡುತ್ತಿರುವುದಾಗಿ ಐಡಿಎಫ್ ತಿಳಿಸಿದೆ.

ಕಳೆದ ಹಲವಾರು ದಿನಗಳಲ್ಲಿ ನೂರಾರು ಇಸ್ರೇಲಿ ಫೈಟರ್ ಜೆಟ್ಗಳು ಮತ್ತು ವಿಮಾನಗಳು ಸಿರಿಯಾದ ಫೈಟರ್ ಜೆಟ್ಗಳು, ಹೆಲಿಕಾಪ್ಟರ್ಗಳು, ಕ್ಷಿಪಣಿಗಳು, ಯುಎವಿಗಳು, ರಾಡಾರ್ಗಳು ಮತ್ತು ರಾಕೆಟ್ಗಳು ಸೇರಿದಂತೆ ಅದರ ಅತ್ಯಂತ ಕಾರ್ಯತಂತ್ರದ ಶಸ್ತ್ರಾಸ್ತ್ರಗಳನ್ನು ಗಮನಾರ್ಹವಾಗಿ ಧ್ವಂಸಗೊಳಿಸಿವೆ.

ಸಿರಿಯಾದ ಹಲವು ಪ್ರಮುಖ ವಾಯುನೆಲೆಗಳನ್ನು ಗುರಿಯಾಗಿಸಿಕೊಂಡು ಈ ದಾಳಿ ನಡೆಸಲಾಗಿದೆ. ಉತ್ತರ ಡಮಾಸ್ಕಸ್ ಬಳಿಯ ಟಿ 4 ವಿಮಾನ ನಿಲ್ದಾಣವು ಗಮನಾರ್ಹವಾಗಿ ಹಾನಿಗೊಳಗಾಗಿದ್ದು, ಅಲ್ಲಿ ಬೀಡುಬಿಟ್ಟಿದ್ದ ಎಸ್ಯು -22 ಮತ್ತು ಎಸ್ಯು -24 ಫೈಟರ್ ಸ್ಕ್ವಾಡ್ರನ್ಗಳು ಸಂಪೂರ್ಣವಾಗಿ ನಾಶವಾಗಿವೆ. ಮೂರು ಹೆಚ್ಚುವರಿ ಫೈಟರ್ ಸ್ಕ್ವಾಡ್ರನ್ಗಳನ್ನು ಹೊಂದಿರುವ ಬ್ಲೆ ವಿಮಾನ ನಿಲ್ದಾಣ ಮತ್ತು ಹತ್ತಿರದ ಶಸ್ತ್ರಾಸ್ತ್ರ ಶೇಖರಣಾ ಸ್ಥಳವೂ ಇಸ್ರೇಲ್ ದಾಳಿಯಲ್ಲಿ ಹಾನಿಗೊಳಗಾಗಿದೆ.

ಸಿರಿಯಾದಲ್ಲಿನ ಹೊಸ ಸರ್ಕಾರದೊಂದಿಗೆ ಹೇಗೆ ವ್ಯವಹರಿಸಬೇಕೆಂದು ಮಧ್ಯಪ್ರಾಚ್ಯ ಮತ್ತು ಅದರಾಚೆಗಿನ ದೇಶಗಳು ಯೋಚಿಸುತ್ತಿರುವ ಮಧ್ಯೆ ಈ ವಿಷಯದಲ್ಲಿ ಇಸ್ರೇಲ್ ಒಂದು ಹೆಜ್ಜೆ ಮುಂದೆ ಹೋಗಿದೆ. ತನ್ನ ದೇಶದ ಸುರಕ್ಷತೆಗೆ ಧಕ್ಕೆ ಬರಕೂಡದು ಎಂಬ ತನ್ನ ಬೇಡಿಕೆಯನ್ನು ಸಿರಿಯಾ ಸರ್ಕಾರ ಒಪ್ಪುವವರೆಗೂ ಪ್ರಸ್ತುತ ತನ್ನ ನಿಯಂತ್ರಣದಲ್ಲಿರುವ ಸಿರಿಯನ್ ಭೂಪ್ರದೇಶದಲ್ಲಿಯೇ ಮಿಲಿಟರಿ ನಿಯೋಜಿತವಾಗಿರಲಿದೆ ಎಂದು ಅದು ಹೇಳಿದೆ.

# ಲೋಕಸಭೆಯಲ್ಲಿ ರಾಹುಲ್ ಗಾಂಧಿ ವಾಗ್ದಾಳಿ!

**ನವದೆಹಲಿ:** ಲೋಕಸಭೆಯಲ್ಲಿ ನಡೆದ ಸಂವಿಧಾನದ ಚರ್ಚೆಯ ವೇಳೆ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಕೇಂದ್ರ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು ಮತ್ತು ಬಿಜೆಪಿಯು ''ಸಂವಿಧಾನಕ್ಕಿಂತ ಮನುಸ್ಮೃತಿ ಹೆಚ್ಚು ಎಂದು ಪರಿಗಣಿಸುತ್ತದೆ ಎಂದು ಆರೋಪಿಸಿದರು. ಮಹಾಭಾರತದ ದ್ರೋಣಾಚಾರ್ಯ ಏಕಲವ್ಯನ ಹೆಬ್ಬೆರಳನ್ನು ಕತ್ತರಿಸಿದಂತೆ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರವು ಭಾರತೀಯ ಯುವಕರು, ಉದ್ಯಮಗಳು ಮತ್ತು ಸಮಾಜದ ಇತರ ವರ್ಗಗಳ ಹೆಬ್ಬೆರಳುಗಳನ್ನು ಕತ್ತರಿಸುತ್ತಿದೆ ಎಂದು ರಾಹುಲ್ ಗಾಂಧಿ ಕಿಡಿಕಾರಿದ್ದಾರೆ.



ಸದನವನ್ನು ಉದ್ದೇಶಿಸಿ ಮಾತನಾಡಿದ ರಾಹುಲ್ ಗಾಂಧಿ, ಉದ್ಯಮಿ ಗೌತಮ್ ಅದಾನಿ ವಿರುದ್ಧಗಂಭೀರ ಆರೋಪಗಳನ್ನು ಮಾಡಿದರು. ಸರ್ಕಾರವನ್ನು ಟೀಕಿಸಿದ ಅವರು, ನೀವು ಧಾರಾವಿಯನ್ನು ಅದಾನಿಯವರಿಗೆ ನೀಡಿದ್ದೀರಿ. ಧಾರಾವಿಯ ಸಣ್ಣ ಉದ್ಯಮಗಳ ಹೆಬ್ಬೆರಳು ಕತ್ತರಿಸಿದ್ದೀರಿ. ನಂತರ ಬಂದರು, ವಿಮಾನ ನಿಲ್ದಾಣಗಳನ್ನು ಕೊಟ್ಟು ಅದನ್ನೇ ಮಾಡಿದ್ದೀರಿ. ಪ್ರಾಮಾಣಿಕ ವ್ಯವಹಾರ ಮಾಡುವವರಿಗೆ ಅನ್ಯಾಯ ಮಾಡುತ್ತಿದ್ದೀರಿ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಸದನದಲ್ಲಿ ವೀರ್ ಸಾವರ್ಕರ್ ಅವರ ವಿಷಯವನ್ನು ಪ್ರಸ್ತಾಪಿಸಿದ ರಾಹುಲ್ , ಸಾವರ್ಕರ್ ತಮ್ಮ ಬರವಣಿಗೆಯಲ್ಲಿ ಭಾರತದ ಸಂವಿಧಾನ ಏನೂ ಇಲ್ಲ, ಮನುಸ್ಮೃತಿಯಿಂದ ನಮ್ಮ ಸಂವಿಧಾನವನ್ನು ಬದಲಿಸಿ ಎಂದು ಬರೆದಿದ್ದಾರೆ. ನೀವು ಈ ಪುಸ್ತಕವನ್ನು ಅನುಸರಿಸುತ್ತೀರಾ ಎಂದು ನಾನು ಕೇಳುತ್ತೇನೆ ಏಕೆಂದರೆ ನೀವು ಸಂವಿಧಾನದ ಬಗ್ಗೆ ಮಾತನಾಡುವಾಗ ನೀವು ಸಾವರ್ಕರ್‌ರನ್ನು ದೂಷಿಸುತ್ತೀರಾ? ಎಂದು ಪ್ರಶ್ನಿಸಿದ್ದಾರೆ.

# ಸಿರಿಯಾದಲ್ಲಿ ರಾಜಕೀಯ ವ್ಯವಸ್ಥೆ ಕುಸಿಯುವ ಅಪಾಯ: ವಿಶ್ವಸಂಸ್ಥೆ

**ಅಕಾಬ:** ಸಿರಿಯಾದ ಪ್ರಮುಖ ರಾಜಕೀಯ ವ್ಯವಸ್ಥೆ ಕುಸಿಯುವ ಅಪಾಯವನ್ನು ತಪ್ಪಿಸಲು ಜಾಗತಿಕ ಶಕ್ತಿಗಳು ಆದ್ಯತೆ ನೀಡಬೇಕು ಎಂದು ವಿಶ್ವಸಂಸ್ಥೆಯ ವಿಶೇಷ ಪ್ರತಿನಿಧಿ ಗೈರ್ ಪೆಡರ್ಸನ್ ಶನಿವಾರ ಎಚ್ಚರಿಕೆ ನೀಡಿದ್ದಾರೆ.

ಸಿರಿಯಾ ಬಿಕ್ಕಟ್ಟಿಗೆ ಸೌಹಾರ್ದಯುತ ಪರಿಹಾರ ರೂಪಿಸುವ ನಿಟ್ಟಿನಲ್ಲಿ ಜೋರ್ಡಾನ್ನ ಅಕಾಬ ನಗರದಲ್ಲಿ ನಡೆದ ರಾಜತಾಂತ್ರಿಕ ಸಭೆಯಲ್ಲಿ ಮಾತನಾಡಿದ ಪೆಡರ್ಸನ್ ' ಸಿರಿಯಾದಲ್ಲಿ ಮುಂದಿನ ಸರಕಾರವನ್ನು ರಚಿಸಲು ವಿಶ್ವಾಸಾರ್ಹ ಮತ್ತು ಅಂತರ್ಗತ ರಾಜಕೀಯ ಪ್ರಕ್ರಿಯೆಯನ್ನು ವಿಶ್ವಸಂಸ್ಥೆ ಬೆಂಬಲಿಸಲಿದೆ' ಎಂದರು. ಸಾಂಸ್ಥಿಕ ವ್ಯವಸ್ಥೆ ಕುಸಿಯದಂತೆ ನಾವು ಖಚಿತ ಪಡಿಸಿಕೊಳ್ಳಬೇಕು ಮತ್ತು ಸಾಧ್ಯವಾದಷ್ಟು ಬೇಗ ಮಾನವೀಯ ನೆರವನ್ನು ತಲುಪಿಸಬೇಕು. ಇದರಲ್ಲಿ ನಾವು ಯಶಸ್ವಿಯಾದರೆ ಬಹುಷಃ ಸಿರಿಯಾ ಜನತೆಗೆ ಹೊಸ ಅವಕಾಶ ಲಭಿಸಬಹುದು ಎಂದವರು ಹೇಳಿದ್ದಾರೆ.



ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಆಂಟನಿ ಬ್ಲಿಂಕೆನ್, ಅರಬ್ ದೇಶಗಳ ಪ್ರತಿನಿಧಿಗಳು, ಟರ್ಕಿ, ಯುರೋಪಿಯನ್ ಯೂನಿಯನ್ನ(ಇಯು) ಪ್ರತಿನಿಧಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.

ಸಿರಿಯಾದಲ್ಲಿನ ಎಲ್ಲಾ ವೈವಿಧ್ಯಮಯ ಜನಾಂಗೀಯ ಮತ್ತು ಧಾರ್ಮಿಕ ಸಮುದಾಯಗಳನ್ನು ಪ್ರತಿನಿಧಿಸುವ ಅಂತರ್ಗತ ಪ್ರಕ್ರಿಯೆಗೆ ಕರೆ ನೀಡಿದ ಬ್ಲಿಂಕೆನ್, ಸಿರಿಯಾದಲ್ಲಿ ಅಲ್ಪಸಂಖ್ಯಾತರ ರಕ್ಷಣೆಯಲ್ಲಿ ಹಾಗೂ ಮಾನವೀಯ ನೆರವು ಒದಗಿಸುವಲ್ಲಿ ವಿಶ್ವಸಂಸ್ಥೆ ನಿರ್ಣಾಯಕ ಪಾತ್ರ ವಹಿಸುತ್ತಿದೆ ಎಂದರು. ಸಿರಿಯಾದ ನೂತನ ಆಡಳಿತದ ಜತೆ ಶೀಘ್ರವೇ ಸಂಪರ್ಕ ಸಾಧಿಸಲು ಯುರೋಪಿಯನ್ ಯೂನಿಯನ್ ಬಯಸಿದೆ ಎಂದು ಇಯು ಪ್ರತಿನಿಧಿ ಹೇಳಿದ್ದಾರೆ. ನಿರಾಶ್ರಿತರಿಗಾಗಿನ ವಿಶ್ವಸಂಸ್ಥೆ ಏಜೆನ್ಸಿಯ ಸಿಬ್ಬಂದಿಗಳ ಉಪಸ್ಥಿತಿಯನ್ನು ಮುಂದುವರಿಸುವಂತೆ ತಿಳಿಸುವ ಮೂಲಕ ಸಿರಿಯಾದ ಹೊಸ ಸರಕಾರ ರಚನಾತ್ಮಕ ಪ್ರಾಥಮಿಕ ಸಂಕೇತಗಳನ್ನು ರವಾನಿಸಿದೆ ಎಂದು ವಿಶ್ವಸಂಸ್ಥೆ ಅಧಿಕಾರಿಗಳು ಹೇಳಿದ್ದಾರೆ.

# ಉಕ್ರೇನ್ ಮೇಲೆ ರಷ್ಯಾದಿಂದ 93 ಕ್ಷಿಪಣಿ ದಾಳಿ



ಮಾಸ್ಕೊ: ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಜೆಲೆನ್ಸ್ಕಿ ಅವರ ಪ್ರಕಾರ, ಉಕ್ರೇನ್ ವಿರುದ್ಧ ರಷ್ಯಾ ಶುಕ್ರವಾರ ದೊಡ್ಡ ಪ್ರಮಾಣದ ವೈಮಾನಿಕ ದಾಳಿಯನ್ನು ಪ್ರಾರಂಭಿಸಿತು, 93 ಕ್ಷಿಪಣಿಗಳು ಮತ್ತು ಸುಮಾರು 200 ಡ್ರೋನ್ಗಳನ್ನು ಹಾರಿಸಿದೆ.

ಸುಮಾರು ಮೂರು ವರ್ಷಗಳ ಹಿಂದೆ ಪೂರ್ಣ ಪ್ರಮಾಣದ ಆಕ್ರಮಣ ಪ್ರಾರಂಭವಾದಾಗಿನಿಂದ ದೇಶದ ಇಂಧನ ಮೂಲಸೌಕರ್ಯದ ಮೇಲಿನ ಅತಿದೊಡ್ಡ ದಾಳಿಗಳಲ್ಲಿ ಇದು ಒಂದಾಗಿದೆ ಎಂದು ಅವರು ಬಣ್ಣಿಸಿದರು.

ಅಸೋಸಿಯೇಟ್ ಪ್ರೆಸ್ನ ವರದಿಯ ಪ್ರಕಾರ, ಈ ವರ್ಷದ ಆರಂಭದಲ್ಲಿ ಪಾಶ್ಚಿಮಾತ್ಯ ಮಿತ್ರರಾಷ್ಟ್ರಗಳು ಪೂರೈಸಿದ ಎಫ್ -16 ಫೈಟರ್ ಜೆಟ್ಗಳಿಂದ ಹೊಡೆದುರುಳಿಸಿದ 11 ಕ್ರೂಸ್ ಕ್ಷಿಪಣಿಗಳು ಸೇರಿದಂತೆ 81 ಕ್ಷಿಪಣಿಗಳನ್ನು ಉಕ್ರೇನ್ನ ರಕ್ಷಣಾ ಪಡೆಗಳು ತಡೆದಿವೆ ಎಂದು ಜೆಲೆನ್ಸ್ಕಿ ಹೇಳಿದರು. ಇಂತಹ ದಾಳಿಗಳಿಂದ ರಷ್ಯಾ ಲಕ್ಷಾಂತರ ಜನರನ್ನು ಭಯಭೀತಗೊಳಿಸುತ್ತಿದೆ ಎಂದು ಅವರು ಆರೋಪಿಸಿದರು ಮತ್ತು ರಷ್ಯಾದ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ವಿರುದ್ಧ ಒಗ್ಗಟ್ಟಾಗಿ ನಿಲ್ಲುವಂತೆ ಅಂತರರಾಷ್ಟ್ರೀಯ ಸಮುದಾಯವನ್ನು ಒತ್ತಾಯಿಸಿದರು.

ಏತನ್ಮಧ್ಯೆ, ಮುಂದಿನ ತಿಂಗಳು ಅಧಿಕಾರ ವಹಿಸಿಕೊಳ್ಳಲಿರುವ ಯುಎಸ್ ನಿಯೋಜಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸಂಘರ್ಷವನ್ನು ಕೊನೆಗೊಳಿಸಲು ಪ್ರತಿಜ್ಞೆ ಮಾಡಿರುವುದರಿಂದ ಮುಂದಿನ ವರ್ಷ ಯುದ್ಧದ ಪಥದ ಬಗ್ಗೆ ಅನಿಶ್ಚಿತತೆ ಇದೆ, ಇದು ಉಕ್ರೇನ್ಗೆ ನಿರ್ಣಾಯಕ ಯುಎಸ್ ಮಿಲಿಟರಿ ಸಹಾಯದ ಭವಿಷ್ಯದ ಬಗ್ಗೆ ಪ್ರಶ್ನೆಗಳನ್ನು ಹುಟ್ಟುಹಾಕಿದೆ.

Postal Registration No.KA/BGW-1823/2019-2021, Posted at Patrika Channel, RMS Bhavan, Bengaluru PSO, Mysore Road, Bengaluru- 560020, RNI No.KARKAN/2002/08054

# ನನ್ನ ಸಿನಿಮಾ ರಿಲೀಸ್ ಟೈಮಲ್ಲೇ ಕಟೌಟ್‌ನಿಂದ ಬಿದ್ದು ದುರಂತ ಆಗಿತ್ತು

ನನ್ನ ಸಿನಿಮಾ ರಿಲೀಸ್ ಟೈಮಲ್ಲೇ ಕಟೌಟ್‌ನಿಂದ ಬಿದ್ದು ದುರಂತ ಆಗಿತ್ತು. ಇದೆಲ್ಲ ಕೈ ಮೀರಿ ನಡೆಯುವ ಸಂದರ್ಭಗಳು ಎಂದು ನಟ ಸುದೀಪ್ ಹೇಳಿದ್ದಾರೆ.

ಹೈದ್ರಾಬಾದ್‌ನ ಸಂಧ್ಯಾ ಥಿಯೇಟರ್‌ನಲ್ಲಿ ನಡೆದ ಅಲ್ಲು ಅರ್ಜುನ್ ಅಭಿಮಾನಿ ದುರಂತ ಸಾವು ಪ್ರಕರಣಕ್ಕೆ ಸಂಬಂಧಿಸಿದಂತೆ ಅವರು ಪ್ರತಿಕ್ರಿಯೆ ನೀಡಿದ್ದಾರೆ. ಈ ವೇಳೆ, ಫ್ಯಾನ್ಸ್‌ಗೆ ಯಾವ ಸ್ಟಾರ್ ಕೂಡ ಹೀಗೆ ಮಾಡಿ ಹಾಗೆ ಮಾಡಿ ಎಂದು ಹೇಳಿರಲ್ಲ. ಅವರು ಏನೇ ಮಾಡಿದ್ರೂ, ಅವರವರ ಪ್ರೀತಿ. ಎಲ್ಲರ ಮನೆಗಳಲ್ಲೂ ಹುಷಾರು ಜೋಪಾನ ಎಂದು ಹೇಳುತ್ತಿರುತ್ತೇವೆ. ಆದರೂ ಕೈ ಮೀರಿ ಇಂತಹ ದುರಂತಗಳು ನಡೆಯುತ್ತವೆ ಎಂದಿದ್ದಾರೆ.

ಇದರಲ್ಲಿ ಯಾರ ತಪ್ಪೂ ಇರೋದಿಲ್ಲ, ನಡೆದಿರುವ ಪರಿಸ್ಥಿತಿಯ ತಪ್ಪು. ನಾವು ಫ್ಯಾನ್ಸ್ ಬಳಿ ಹುಷಾರಾಗಿರಿ ಎಂದು ಹೇಳ್ತೀವಿ. ಕೆಲವೊಂದು ಸಿನಿಮಾ ನಮ್ಮ ಯೋಚನೆ ಮೀರಿ ಜನಜಂಗುಳಿ ಸೇರುತ್ತೆ. ಪುಷ್ಪ ಚಿತ್ರ ಗ್ಲೋಬಲಿ ಭಾರೀ ಸೌಂಡ್ ಮಾಡಿತ್ತು. ರಂಪ ಎಲ್ಲಾ ಕಡೆ ಇತ್ತು. ಕೆಲವು ಘಟನೆಗಳು ನಡೆದಾಗ ಹೀಗಾಗಬಾರದಿತ್ತು ಎಂದು ಖಂಡಿತ ಎನಿಸುತ್ತದೆ ಎಂದಿದ್ದಾರೆ. ಇಂತಹ ಘಟನೆಗಳಿಗೆ ಅಲ್ಲಿದ್ದವರು ಬೇಕಂತ ಮಾಡಿದ್ದಾರೆ ಎನ್ನುವುದು ಬರಲ್ಲ. ಪ್ರತಿಯೊಬ್ಬರು ಮನೆಯಿಂದ ಹೊರಡುವಾಗ ಒಬ್ಬರು, ಇಬ್ಬರು ಅಂತಾನೇ ಹೋಗೋದು. ಅಲ್ಲಿ ಹೋದ್ಮೇಲೆ ಗೊತ್ತಾಗುತ್ತೆ ಸಾವಿರಾರು ಜನ ಇದ್ದಾರೆ ಎಂದು ಅಲ್ವಾ? ಏನ್ ಮಾಡೋದು, ಕೆಲವೊಮ್ಮೆ ನಡೆಯುತ್ತೆ. ಕೆಲವೊಂದು ಆಗಬಾರದಿರೋದು ಆಗ್ಬಿಡುತ್ತೆ. ಅದಕ್ಕೆ ಯಾರನ್ನ ಹೊಣೆ ಮಾಡೋದು? ಹೀಗಾಗಬಾರದು ಎಂದು ಪ್ರಾರ್ಥಿಸಬಹುದು ಅಷ್ಟೇ ಎಂದಿದ್ದಾರೆ.








# ಫಿಲಂ ಚೇಂಬರ್ ಚುನಾವಣೆ

## ಮಂಡಳಿ ಅಧ್ಯಕ್ಷರಾಗಿ ಎಂ.ನರಸಿಂಹಲು ಆಯ್ಕೆ



### ಸಾರಾ ಗೋವಿಂದು ಬಣಕ್ಕೆ ಜಯ

**ಬೆಂಗಳೂರು:** ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಚುನಾವಣೆ ಶನಿವಾರ ಮುಕ್ತಾಯಗೊಂಡಿದ್ದು, ಅಧ್ಯಕ್ಷರಾಗಿ ವೈಭವಿ ಚಿತ್ರಮಂದಿರದ ಮಾಲೀಕ ನರಸಿಂಹಲು ಎಂ ಆಯ್ಕೆಗೊಂಡಿದ್ದಾರೆ. ಇವರು, ತಮ್ಮ ಪ್ರತಿಸ್ಪರ್ಧಿ ವಜ್ರೇಶ್ವರಿ ಚಿತ್ರಮಂದಿರದ ಮಾಲೀಕ ಸುಂದರ್ ರಾಜು ಆರ್ ಅವರನ್ನು ಮಣಿಸಿದರು. ಎಂ.ನರಸಿಂಹಲು ಆಯ್ಕೆಯಾಗುವ ಮೂಲಕ ಸಾ.ರಾ ಗೋವಿಂದು ಬಣಕ್ಕೆ ಮತ್ತೆ ಗೆಲುವು ಸಿಕ್ಕಂತಾಗಿದೆ.

ನಿರ್ಮಾಪಕ, ವಿತರಕ ಮತ್ತು ಪ್ರದರ್ಶಕ ವಲಯಗಳಿಂದ ವಿವಿಧ ಸ್ಥಾನಗಳಿಗಾಗಿ ಒಟ್ಟು 104 ಅಭ್ಯರ್ಥಿಗಳು ಕಣದಲ್ಲಿದ್ದರು. ಈ ಸಲ ಪ್ರದರ್ಶಕ ವಲಯಕ್ಕೆ ಅಧ್ಯಕ್ಷ ಸ್ಥಾನ ಮೀಸಲಾಗಿತ್ತು.ಈ ಬಾರಿ ಅಧ್ಯಕ್ಷ ಸ್ಥಾನ ಪ್ರದರ್ಶಕರ ವಲಯಕ್ಕೆ ಮೀಸಲಾಗಿತ್ತು. ಎಂ.ನರಸಿಂಹಲು ಅವರು ತಮ್ಮ ಪ್ರತಿಸ್ಪರ್ಧಿ ಆರ್. ಸುಂದರ್ ರಾಜು ಅವರನ್ನು ಸೋಲಿಸಿ ಅಧ್ಯಕ್ಷ ಸ್ಥಾನಕ್ಕೆ ಏರಿದ್ದಾರೆ. ಉಪಾಧ್ಯಕ್ಷರಾಗಿ ನಿರ್ಮಾಪಕ ವಲಯದಿಂದ ಸಫೈರ್ ವೆಂಕಟೇಶ್, ಪ್ರದರ್ಶಕ ವಲಯದಿಂದ ರಂಗಪ್ಪ ಕೆ.ಓ, ವಿತರಕ ವಲಯದಿಂದ ಶಿಲ್ಪಾಶ್ರೀ ನಿವಾಸ್ ಆಯ್ಕೆಗೊಂಡರು. ಗೌರವ ಕಾರ್ಯದರ್ಶಿಯಾಗಿ ಪ್ರದರ್ಶಕ ವಲಯದಿಂದ ವೀರೇಶ್ ಚಿತ್ರಮಂದಿರದ ಮಾಲೀಕ ಕುಶಾಲ್ ಎಲ್.ಸಿ, ನಿರ್ಮಾಪಕ ವಲಯದಿಂದ ಪ್ರವೀಣ್ ಕುಮಾರ್, ವಿತರಕ ವಲಯದಿಂದ ಎಂ.ಎನ್.ಕುಮಾರ್ ಆಯ್ಕೆಗೊಂಡರು. ಮಧ್ಯಾಹ್ನದಿಂದ ಚುನಾವಣೆ ನಡೆದಿದ್ದು, ಇದೇ ಮೊದಲ ಬಾರಿಗೆ ಚುನಾವಣೆಯಲ್ಲಿ ಇವಿಎಂ ಬಳಕೆ ಮಾಡಲಾಗಿದೆ. ಗುರುರಾಜ ಕಲ್ಯಾಣ ಮಂಟಪದಲ್ಲಿ ಮತದಾನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಪ್ರಮುಖವಾಗಿ ಸಾರಾ ಗೋವಿಂದು ಬಣ ಮತ್ತು ಭಾಮಾ ಹರೀಶ್ ಅವರ ಬಣಗಳ ಮಧ್ಯೆ ಜಿದ್ದಾಜಿದ್ದಿ ನಡೆದಿತ್ತು. ಅಂತಿಮವಾಗಿ ಸಾರಾ ಗೋವಿಂದು ಬಣಕ್ಕೆ ಜಯ ದೊರೆತಿದೆ.

# ದರ್ಶನ್‌ಗೆ ಆಪರೇಷನ್ ಅನುಮಾನ

ತೀವ್ರ ಬೆನ್ನು ನೋವಿನಿಂದ ಬಳಲುತ್ತಿರುವ ದರ್ಶನ್‌ಗೆ ಬಿಜಿಎಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಮುಂದುವರೆದಿದೆ. ನಿನ್ನೆಯಷ್ಟೇ ಹೈಕೋರ್ಟ್‌ನಿಂದ ದರ್ಶನ್‌ಗೆ ಜಾಮೀನು ಸಿಕ್ಕಿದೆ. ಆದರೆ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗುವ ಭಾಗ್ಯ ಇನ್ನೂ ಕೂಡಿ ಬಂದಿಲ್ಲ. ಮುಂದಿನ ಇನ್ನೊಂದು ವಾರಗಳ ಕಾಲ ದರ್ಶನ್‌ಗೆ ಚಿಕಿತ್ಸೆ ಮುಂದುವರೆಯಲಿದೆ.

ಸರ್ಜರಿ ಬದಲಿಗೆ ಫಿಸಿಯೋಥೆರಪಿ, ಕನ್ಸರ್ವೇಟಿವ್ ಟ್ರೀಟ್ಮೆಂಟ್ ಮೂಲಕ ಚಿಕಿತ್ಸೆ ನೀಡಲಾಗುತ್ತಿದೆ. ವೈದ್ಯರ ಮಾರ್ಗದರ್ಶನದಂತೆ ದರ್ಶನ್ ವಾರಗಳ ಕಾಲ ವಿಶ್ರಾಂತಿ ಪಡೆಯಲಿದ್ದಾರೆ.

**ಕನ್ಸರ್ವೇಟಿವ್ ಟ್ರೀಟ್ಮೆಂಟ್ ಹೇಗಿರುತ್ತೆ?:** ಸರ್ಜರಿ ಮಾಡದೇ ಬೆನ್ನು ನೋವಿಗೆ ಮಾತ್ರೆ ಮತ್ತು ಔಷಧಗಳ ಮೂಲಕ ಗುಣಮುಖ ಮಾಡಲಾಗುತ್ತದೆ. ಆಪರೇಷನ್ ಮಾಡದೇ ಫಿಸಿಯೋಥೆರಪಿ, ವ್ಯಾಯಾಮಗಳನ್ನ ಮಾಡಿಸಿ ಬೆನ್ನು ನೋವನ್ನು ಕಡಿಮೆ ಮಾಡಲಾಗುತ್ತದೆ.

ಮಾತ್ರೆ, ಔಷಧಿಗಳ ಜೊತೆಗೆ ಕೆಲ ದಿನಗಳ ಕಾಲ ವಿಶ್ರಾಂತಿಗೆ ಅವಕಾಶ. ಆಪರೇಷನ್ ಮಾಡದೇ ಅಲ್ಟ್ರಾ ಸೌಂಡ್ ನೀಡಿ ಚಿಕಿತ್ಸೆ. ಆಪರೇಷನ್ ಮಾಡದೆಯೇ ಶಾಖ ಕೊಟ್ಟು ಚಿಕಿತ್ಸೆ ಮುಂದುವರೆಸಬಹುದು.

# ತೂಗುದೀಪ ನಿಲಯದ ಬಳಿ ಅಭಿಮಾನಿಗಳ ಸಂಭ್ರಮ

ರೇಣುಕಾಸ್ವಾಮಿ ಕೊಲೆ ಪ್ರಕರಣ ಸಂಬಂಧ ದರ್ಶನ್‌ಗೆ (ಡಿ.13) ಜಾಮೀನು ಸಿಕ್ಕಿದೆ. ಈ ಹಿನ್ನೆಲೆ ದರ್ಶನ್ ನಿವಾಸದ ಮುಂದೆ ಅಭಿಮಾನಿಗಳು ಸಂಭ್ರಮಿಸುತ್ತಿದ್ದಾರೆ.

ನೆಚ್ಚಿನ ನಟ ದಾಸ ದರ್ಶನ್‌ಗೆ ಬೇಲ್ ಸಿಕ್ಕಿರೋದು ಅಭಿಮಾನಿಗಳ ಸಂಭ್ರಮ ಮನೆ ಮಾಡಿದೆ. ಅನೇಕ ಕಡೆಗಳಲ್ಲಿ ದರ್ಶನ್ ಫೋಟೋಗೆ ಹಾಲಿನ ಅಭಿಷೇಕ ಮಾಡಿ ಸಂಭ್ರಮಿಸುತ್ತಿದ್ದಾರೆ. ಆರ್ ಆರ್ ನಗರದ ನಟನ ನಿವಾಸದ ಮುಂದೆ ತೂಗುದೀಪ ನಿಲಯ ನೇಮ್ ಬೋರ್ಡ್‌ಗೆ ಹೂ ಹಾರ ಹಾಕಿ ಸಂಭ್ರಮಿಸುತ್ತಿರುವ ಫ್ಯಾನ್ಸ್. ಅದಷ್ಟೇ ಅಲ್ಲ, ಬಿಜಿಎಸ್ ಆಸ್ಪತ್ರೆ ಮುಂದೆ ಕೂಡ ಫೋಟೋ ಹಿಡಿದು ಫ್ಯಾನ್ಸ್ ಸಂಭ್ರಮಿಸಿದ್ದಾರೆ.

ದರ್ಶನ್ ಮನೆ ಮುಂದೆ ಅಭಿಮಾನಿಗಳು ಜಮಾಯಿಸಿದ್ದಾರೆ. ಘೋಷಣೆ ಕೂಗಿ ಅಭಿಮಾನಿಗಳು ಖುಷಿ ವ್ಯಕ್ತಪಡಿಸುತ್ತಿದ್ದಾರೆ. ಅದಷ್ಟೇ ಅಲ್ಲ, ಜನರಿಗೆ ಸ್ವೀಟ್ ನೀಡಿ ಸಂಭ್ರಮಿಸುತ್ತಿದ್ದಾರೆ.



## ಭಾರತ ಹಾಗೂ ಆಸ್ಟ್ರೇಲಿಯಾ ಮೂರನೇ ಟೆಸ್ಟ್

# ಮೊದಲ ದಿನ ಮಳೆಗೆ ಬಲಿ



**ಬ್ರಿಸ್ಬೇನ್:** ಭಾರತ ಹಾಗೂ ಆಸ್ಟ್ರೇಲಿಯಾ ನಡುವಣ ಇಲ್ಲಿನ ಗಾಬಾ ಮೈದಾನದಲ್ಲಿ ನಡೆಯುತ್ತಿರುವ ಮೂರನೇ ಟೆಸ್ಟ್ ಪಂದ್ಯ ಮೊದಲ ದಿನದ ಮಳೆಗೆ ಬಲಿಯಾಗಿದೆ.

ಟಾಸ್ ಗೆದ್ದ ಟೀಂ ಇಂಡಿಯಾ ನಾಯಕ ರೋಹಿತ್ ಶರ್ಮಾ ಮೊದಲು ಫೀಲ್ಡಿಂಗ್ ಆಯ್ದುಕೊಂಡರು. ಆಸ್ಟ್ರೇಲಿಯಾ ಮೊದಲ ಇನಿಂಗ್ಸ್‌ನಲ್ಲಿ 13.2 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 28 ರನ್ ಗಳಿಸಿದೆ. ಆರಂಭಿಕ ಆಟಗಾರರಾದ ಉಸ್ಮಾನ್ ಖ್ವಾಜಾ 19 ರನ್ ನೇಥನ್ ಮೆಕ್‌ಸ್ವೀನಿ 4 ಕ್ರೀಸಿನಲ್ಲಿದ್ದಾರೆ.

ದಿನದಾಟದ ಮೊದಲ ಅವಧಿಯಲ್ಲೇ ಸುರಿದ ಸತತ ಮಳೆಯಿಂದಾಗಿ ಭೋಜನ ವಿರಾಮವನ್ನು ಬೇಗನೇ ತೆಗೆದುಕೊಳ್ಳಲಾಯಿತು. ಎರಡನೇ ಅವಧಿಗೂ ಮಳೆ ಅಡ್ಡಿಯಾಯಿತು. ಅಂತಿಮವಾಗಿ ಟೀ ವಿರಾಮದ ಬಳಿ ಮೊದಲ ದಿನದಾಟವನ್ನು ರದ್ದುಗೊಳಿಸಲು ನಿರ್ಧರಿಸಲಾಯಿತು.

ಭಾರತದ ಆಡುವ ಹನ್ನೊಂದರ ಬಳಗದಲ್ಲಿ ಎರಡು ಬದಲಾವಣೆ ಮಾಡಲಾಗಿತ್ತು. ಹರ್ಷಿತ್ ರಾಣಾ ಮತ್ತು ರವಿಚಂದ್ರನ್ ಅಶ್ವಿನ್ ಜಾಗದಲ್ಲಿ ಆಕಾಶ್ ದೀಪ್ ಮತ್ತು ರವೀಂದ್ರ ಜಡೇಜಾ ಆಡುತ್ತಿದ್ದಾಟೆ.

ಐದು ಪಂದ್ಯಗಳ ಬಾರ್ಡರ್-ಗವಾಸ್ಕರ್ ಟೆಸ್ಟ್ ಸರಣಿಯು 1-1ರಲ್ಲಿ ಸಮಬಲಗೊಂಡಿದೆ. ಪರ್ತ್‌ನಲ್ಲಿ ನಡೆದ ಮೊದಲ ಪಂದ್ಯದಲ್ಲಿ ಭಾರತ 295 ರನ್ ಅಂತರದ ಜಯ ಗಳಿಸಿದ್ದರೆ ಅಡಿಲೇಡ್‌ನಲ್ಲಿ ನಡೆದ ಹಗಲು-ರಾತ್ರಿ ಪಿಂಕ್ ಬಾಲ್ ಟೆಸ್ಟ್ ಪಂದ್ಯದಲ್ಲಿ 10 ವಿಕೆಟ್ ಅಂತರದ ಹೀನಾಯ ಸೋಲಿಗೆ ಶರಣಾಗಿತ್ತು.

## ಷರತ್ತು ವಿಧಿಸಿ ಹೈಬ್ರಿಡ್ ಮಾದರಿಗೆ ಪಾಕ್ ಒಪ್ಪಿಗೆ

# ದುಬೈನಲ್ಲಿ ಭಾರತದ ಪಂದ್ಯ

**ದುಬೈ:** ಅಂತಾರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ 2025 ರ ಚಾಂಪಿಯನ್ಸ್ ಟ್ರೋಫಿಗಾಗಿ ಹೈಬ್ರಿಡ್ ಮಾದರಿಯನ್ನು ಅನುಮೋದಿಸಿದೆ. ಪಿಸಿಬಿ ಮತ್ತು ಬಿಸಿಸಿಐ ನಡುವಿನ ಒಪ್ಪಂದದ ನಂತರ ಪಾಕಿಸ್ತಾನ ಮತ್ತು ದುಬೈನಲ್ಲಿ ಪಂದ್ಯಗಳು ನಡೆಯಲಿದೆ.

ಈ ಒಪ್ಪಂದದ ಭಾಗವಾಗಿ 2026ರ ಟಿ20 ಟೂರ್ನಿಗೆ ಭಾರತಕ್ಕೆ ಪಾಕ್ ತಂಡ ಆಗಮಿಸುವುದಿಲ್ಲ. ಪಾಕಿಸ್ತಾನದ ಪಂದ್ಯಗಳು ಕೊಲಂಬೋದಲ್ಲಿ ನಡೆಯಲಿದೆ. ಈ ವ್ಯವಸ್ಥೆಗಾಗಿ ಪಿಸಿಬಿ ಯಾವುದೇ ಹಣಕಾಸಿನ ಪರಿಹಾರವನ್ನು ಪಡೆಯುವುದಿಲ್ಲವಾದರೂ 2027 ರ ನಂತರದ ಐಸಿಸಿ ಮಹಿಳಾ ಪಂದ್ಯಾವಳಿಯ ಹಕ್ಕುಗಳನ್ನು ಪಡೆದುಕೊಂಡಿದೆ.

ಒಪ್ಪಂದ ಅನ್ವಯ ಪಾಕಿಸ್ತಾನದ ಮೂರು ಸ್ಥಳಗಳಲ್ಲಿ ಪಂದ್ಯ ನಡೆದರೆ ಭಾರತದ ಎಲ್ಲಾ ಪಂದ್ಯಗಳು ದುಬೈನಲ್ಲಿ ನಡೆಯಲಿದೆ. ಭಾರತ ಒಂದು ವೇಳೆ ಸೆಮಿ ಫೈನಲ್, ಫೈನಲ್ ಪ್ರವೇಶಿಸಿದರೆ ಆ ಪಂದ್ಯಗಳು ದುಬೈನಲ್ಲಿ ನಡೆಯಲಿದೆ. ಒಂದು ವೇಳೆ ಲೀಗ್ ಹಂತದಲ್ಲೇ ಭಾರತ ಟೂರ್ನಿಯಿಂದ ಹೊರಬಿದ್ದರೆ ಪಾಕಿಸ್ತಾನದ ಲಾಹೋರ್ ಮತ್ತು ರಾವಲ್ಪಿಂಡಿಯಲ್ಲಿ ಸೆಮಿಫೈನಲ್, ಫೈನಲ್ ಪಂದ್ಯ ನಡೆಯಲಿದೆ.

ಭಾರತ ಹೈಬ್ರಿಡ್ ಮಾದರಿ ಆಡುವಂತೆ ಪ್ರಸ್ತಾಪ ಇಟ್ಟಿತ್ತು. ಆದರೆ ಪಾಕಿಸ್ತಾನ ಈ ಪ್ರಸ್ತಾಪವನ್ನು ತಿರಸ್ಕರಿಸಿತ್ತು. 2023ರಲ್ಲಿ ನಡೆದ ವಿಶ್ವಕಪ್ ಕ್ರಿಕೆಟ್‌ಗೆ ಭಾರತ ಪ್ರವಾಸವನ್ನು ನಾವು ಕೈಗೊಂಡಿದ್ದೇವೆ. ಹೀಗಾಗಿ ಭಾರತ ನಮ್ಮ ದೇಶಕ್ಕೆ ಆಗಮಿಸಬೇಕೆಂದು ಪಟ್ಟು ಹಿಡಿದಿತ್ತು. ಅಷ್ಟೇ ಅಲ್ಲದೇ ಯಾವುದೇ ಕಾರಣಕ್ಕೂ ಹೈಬ್ರಿಡ್ ಪಂದ್ಯ ನಡೆಸಲು ಒಪ್ಪಿಗೆ ಸೂಚಿಸುವುದಿಲ್ಲ ಎಂದು ಪಟ್ಟು ಹಿಡಿದಿತ್ತು. ಕೊನೆಗೆ ಭಾರತದ ವಾದಕ್ಕೆ ಪಿಸಿಬಿ ಮಣಿದಿದ್ದು ಹೈಬ್ರಿಡ್ ಮಾದರಿ ಟೂರ್ನಿಗೆ ಒಪ್ಪಿಗೆ ಸೂಚಿಸಿದೆ.

ಭಾರತ ತಂಡವು 2005-2006ರಲ್ಲಿ ರಾಹುಲ್ ದ್ರಾವಿಡ್ ನಾಯಕತ್ವದಲ್ಲಿ ಪಾಕಿಸ್ತಾನಕ್ಕೆ ತನ್ನ ಕೊನೆಯ ಪ್ರವಾಸ ಕೈಗೊಂಡಿತ್ತು. ಈ ಪಂದ್ಯದಲ್ಲಿ ಇತ್ತಂಡಗಳು 3 ಟೆಸ್ಟ್ ಹಾಗೂ 5 ಏಕದಿನ ಪಂದ್ಯಗಳನ್ನಾಡಿದ್ದವು. ನಂತರ ರಾಜತಾಂತ್ರಿಕ ಕಾರಣಗಳಿಂದಾಗಿ ಉಭಯ ತಂಡಗಳ ನಡುವೆ ಯಾವುದೇ ದ್ವಿಪಕ್ಷೀಯ ಸರಣಿ ನಡೆದಿಲ್ಲ. ಐಸಿಸಿ (ಖಅಅ) ಟೂರ್ನಿ ಅಥವಾ ಏಷ್ಯಾ ಕಪ್ ಟೂರ್ನಿಗಳಲ್ಲಿ ಮಾತ್ರವೇ ಪರಸ್ಪರ ಮುಖಾಮುಖಿಯಾಗುತ್ತಿವೆ.

## ಡಿಎನ್‌ಎ ಟೆಸ್ಟ್ ನಡೆಸುವಂತೆ ಆಗ್ರಹ

# ದೇವರಕೋಣಕ್ಕಾಗಿ ಎರಡು ಗ್ರಾಮಸ್ಥರ ನಡುವೆ ಫೈಟ್

**ದಾವಣಗೆರೆ:** ದೇವರಕೋಣ ತಮಗೆ ಸೇರಿದ್ದು ಎಂದು ಹೇಳಿಕೊಂಡು ಆರಂಭಗೊಂಡ ಎರಡು ಗ್ರಾಮಸ್ಥರ ನಡುವಿನ ಫೈಟ್ ಡಿಎನ್‌ಎ ಟೆಸ್ಟ್ ಹಂತಕ್ಕೆ ಬಂದು ತಲುಪಿದೆ.

ದೇವರಕೋಣವನ್ನು ದಾವಣಗೆರೆ ಜಿಲ್ಲೆಯ ಕುಣಿಬೆಳಕೆರೆ ಹಾಗೂ ಕುಳಗಟ್ಟೆ ಗ್ರಾಮದ ಜನರು ತಮಗೆ ಸೇರಿದ್ದು ಎಂದು ಹೇಳಿಕೊಳ್ಳುತ್ತಿದ್ದಾರೆ. ಈ ಸಂಬಂಧ ದಾವಣಗೆರೆ ಎಸ್ಪಿ ನೇತೃತ್ವದಲ್ಲಿ ಶನಿವಾರ ಎರಡು ಗ್ರಾಮಸ್ಥರ ಪಂಚಾಯ್ತಿ ನಡೆದಿದೆ. ಈ ವೇಳೆ ಕುಣಿಬೆಳಕೆರೆ ಗ್ರಾಮಸ್ಥರು, ದೇವರಬೆಳಕೆರೆಗೆ ಕೋಣ ಹೋಗಿದೆ ಅಲ್ಲಿಂದ ಅದನ್ನು ಕದ್ದುಕೊಂಡು ಹೋಗಿದ್ದಾರೆ ಎಂದು ವಾದಿಸಿದ್ದಾರೆ. ಅಲ್ಲದೇ ಯಾವುದೇ ಕಾರಣಕ್ಕೂ ಕೋಣವನ್ನು ನಾವು ಬಿಟ್ಟುಕೊಡುವುದಿಲ್ಲವೆಂದು ಗ್ರಾಮಸ್ಥರು ಪಟ್ಟು ಹಿಡಿದಿದ್ದಾರೆ. ಕೋಣ ಯಾವ ಗ್ರಾಮಕ್ಕೆ ಸೇರಿದ್ದು ಎಂಬ ಬಗ್ಗೆ ಡಿಎನ್‌ಎ ಟೆಸ್ಟ್ ಆಗಲಿ ಎಂದು ಕುಳಗಟ್ಟೆ ಗ್ರಾಮಸ್ಥರು ಪಟ್ಟು ಹಿಡಿದಿದ್ದಾರೆ. ಕೋಣನ ಮರಿಗಳು ನಮ್ಮ ಬಳಿ ಇವೆ ಅವುಗಳ ಡಿಎನ್‌ಎ ಪರೀಕ್ಷಿಸಿದರೆ ಕೋಣ ಯಾರಿಗೆ ಸೇರಿದ್ದು ಎಂಬುದು ತಿಳಿಯಲಿದೆ ಎಂದು ಗ್ರಾಮಸ್ಥರು ಮಲೇಬೆನ್ನೂರು ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.



ಇನ್ನೂ ಶಿವಮೊಗ್ಗ ಪಶುವೈದ್ಯಾಧಿಕಾರಿಗಳು ಕೋಣವನ್ನು ಪರೀಕ್ಷಿಸಿ ಅದು ಆರು ವರ್ಷ ವಯಸ್ಸಿನ ಕೋಣ ಎಂದು ವರದಿ ನೀಡಿದ್ದಾರೆ. ವಿವಾದದ ಹಿನ್ನೆಲೆ ಕೋಣವನ್ನು ಶಿವಮೊಗ್ಗದ ಗೋಶಾಲೆಯಲ್ಲಿ ಇರಿಸಲಾಗಿದೆ. ಮುಂದಿನ ವರ್ಷ ಗ್ರಾಮದಲ್ಲಿ ಕರಿಯಮ್ಮನ ಜಾತ್ರೆ ನಡೆಯಲಿದ್ದು ಅದಕ್ಕಾಗಿ ದೇವರ ಕೋಣ ಬೇಕಾಗಿದೆ. ಈಗಾಗಲೇ ಎರಡೂ ಗ್ರಾಮಸ್ಥರನ್ನು ಸೇರಿಸಿ ನಡೆಸಿದ ಸಭೆಗಳು ವಿಫಲವಾಗಿವೆ. ಎರಡೂ ಹಳ್ಳಿಗಳ ಗ್ರಾಮಸ್ಥರು ನಮ್ಮದೇ ಕೋಣವೆಂದು ಪಟ್ಟು ಹಿಡಿದಿರುವ ಹಿನ್ನೆಲೆ ಪ್ರಕರಣ ಪೊಲೀಸರಿಗೆ ತಲೆನೋವಾಗಿ ಮಾರ್ಪಟ್ಟಿದೆ.

# ಮೆಟ್ರೋ ರೈಲಿನ ಒಳಗಡೆ ಭಿಕ್ಷಾಟನೆ, ದಂಗಾದ ಪ್ರಯಾಣಿಕರು!

**ಬೆಂಗಳೂರು:** ಟ್ರಾಫಿಕ್ ಸಿಗ್ನಲ್, ಬಸ್ ನಿಲ್ದಾಣ, ದೇವಸ್ಥಾನಗಳಲ್ಲಿ ಭಿಕ್ಷುಕರು ಇರುವುದು ಸಾಮಾನ್ಯ. ಆದರೆ ಈಗ ಭಿಕ್ಷುಕರು ನಮ್ಮ ಮೆಟ್ರೋಗೂ ಲಗ್ಗೆ ಇಟ್ಟಿದ್ದಾರೆ. ಹೌದು. ನಮ್ಮ ಮೆಟ್ರೋ ರೈಲು ಒಳಗಡೆ ವಿಶೇಷ ಚೇತನ ವ್ಯಕ್ತಿಯೊಬ್ಬ ಭಿಕ್ಷಾಟನೆ ಮಾಡಿದ್ದಾನೆ. ಚಲ್ಲಘಟ್ಟದಿಂದ ವೈಟ್ ಫೀಲ್ಡ್ ಮಾರ್ಗದ ಮೆಟ್ರೋದಲ್ಲಿ ಪ್ರಯಾಣಿಕರಂತೆ ಬಂದ ವ್ಯಕ್ತಿ ಭಿಕ್ಷೆ ಬೇಡಿದ್ದಾನೆ. ತನ್ನ ದೈಹಿಕ ಊನವನ್ನು ತೋರಿಸಿ ಭಿಕ್ಷಾಟನೆ ಮಾಡಿದ್ದನ್ನು ಕಂಡು ಪ್ರಯಾಣಿಕರು ದಂಗಾಗಿದ್ದಾರೆ. ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ ಟಿಕೆಟ್ ಪಡೆದು ಭಿಕ್ಷೆ ಬೇಡಿದ್ದು ಹಲವರ ಅಚ್ಚರಿಗೆ ಕಾರಣವಾಗಿದೆ. ಮೆಟ್ರೋ ರೈಲಿನಲ್ಲಿ ಭಿಕ್ಷೆ ಬೇಡುತ್ತಿರುವ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ನಮ್ಮ ಮೆಟ್ರೋದಲ್ಲೂ ಭಿಕ್ಷುಕರು ಭಿಕ್ಷೆ ಬೇಡುವುದಕ್ಕೂ ಶುರು ಮಾಡಿದ್ರಾ ಎಂಬ ಪ್ರಶ್ನೆಗಳನ್ನು ನೆಟ್ಟಿಗರು ಕೇಳುತ್ತಿದ್ದಾರೆ.




# ಜಮೀನಿನಲ್ಲಿ ಬೆಳೆದಿದ್ದ 12 ಲಕ್ಷ ಮೌಲ್ಯದ ಗಾಂಜಾ ವಶ

## ಆರೋಪಿ ಬಂಧನ



**ಚಾಮರಾಜನಗರ:** ಗಾಂಜಾ ಬೆಳೆದಿದ್ದ ಜಮೀನಿನ ಮೇಲೆ ಪೊಲೀಸರು ದಾಳಿ ನಡೆಸಿ 12 ಲಕ್ಷ ರೂಪಾಯಿ ಮೌಲ್ಯದ ಗಾಂಜಾ ಗಿಡಗಳನ್ನು ವಶಪಡಿಸಿಕೊಂಡು ಆರೋಪಿಯನ್ನು ಬಂಧಿಸಿದ್ದಾರೆ. ಚಾಮರಾಜನಗರ ಜಿಲ್ಲೆಯ ಹನೂರು ತಾಲೂಕಿನ ಕುರಟ್ಟಿಹೊಸೂರು ಗ್ರಾಮದ ಮಾರ ಎಂಬಾತ ತನ್ನ ಜಮೀನಿನಲ್ಲಿ ಗಾಂಜಾ ಬೆಳೆದಿದ್ದ. ಮಾಹಿತಿ ಮೇರೆಗೆ ರಾಮಾಪುರ ಠಾಣೆಯ ಪೊಲೀಸರು ದಾಳಿ ನಡೆಸಿದ್ದರು. 211 ಕೆಜಿ ತೂಕದ ಗಾಂಜಾ ಗಿಡಗಳನ್ನು ವಶಪಡಿಸಿಕೊಂಡು ಆರೋಪಿ ಮಾರನನ್ನು ಬಂಧಿಸಿದ್ದಾರೆ. ರಾಮಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

Printed, Published & Owned by N.Venugopal Krishna, Printed at DASHAPRAMATHI MUDRANALAYA, No.433/1, Chikkavitalenahalli Village, Thagachagere Post, Kasaba Hobli, Channapatna Taluk, Ramanagar District, Pin-562160. Published at No.15, Ground Floor, 12th Block, 5th Main, Kumara Park (West), Behind BDA Head Office, Bengaluru-560020. Editor: N.Venugopal Krishna, Mobile No.+91 94835 89085, email: sanjemugilu@gmail.com